Mr. SPEAKER.—It has been stated by the Honourable Minister that there is a short notice question. That means he is going to answer that also.

Sri M. LINGANNA.—I do not press the motion.

Sri A. V. NARASIMHA REDDY (Bangalore South).—There is a ruling pending from the Chair regarding the chance to be given to Sri H. M. Channabasappa. The Chair undertook to give the ruling.

Mr. SPEAKER.—I am examining it and I also wanted to know the procedure that has been adopted in the other legislatures. Since that Bill is not taken up for consideration, I will announce my ruling in a day or two.

Now the discussion on the Village Panchayets and District Boards (Amendment) Bill will continue.

MYSORE VILLAGE PANCHAYETS AND DISTRICT BOARDS (AMENDMENT) BILL, 1955.

Motion to consider (contd.)

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಮಾನ್ಯ ಕಂದಾಯ ಮಂತ್ರಿಗಳು ನಿನ್ನೆಯ ದಿವಸ ಸಭೆಯ ಮುಂದೆ ಮಂಡಿಸಿರತಕ್ಕಂಥ ಮೈಸೂರು ಗ್ರಾಮಪಂಚಾಯಿತಿಗಳ ಮತ್ತು ಜಿಲ್ಲಾ ಮಂಡಳಿಗಳ ತಿದ್ದುಪಡಿ ಮಸೂದೆಯ ವಿಷಯದಲ್ಲಿ ಈಗಾಗಲೇ ಮಾನ್ಯ ಸದಸ್ಯರನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸುತ್ತ ಮಾನ್ಯ ಮಂತ್ರಿಗಳು ಜಿಲ್ಲಾಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳ ಇತಿಹಾಸವು ಎಲ್ಲಾ ಮಾನ್ಯ ಸದಸ್ಯರುಗಳಿಗೂ ತಿಳಿದಿರತಕ್ಕದ್ದೇ ಆಗಿದೆ, ಆದುದರಿಂದ ನಾನು ಈ ವಿಷಯದಲ್ಲಿ ಹೆಚ್ಚಿನ ಒಂದು ವಿವರಣೆಯನ್ನು ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಸ್ವಲ್ಪಮಟ್ಟಿಗೆ ವಿವರಣೆಗಳನ್ನು ಕೊಡುತ್ತೇನೆಂದು ಹೇಳಿ ಕೆಲವು ಮಾತುಗಳನ್ನು ಆಡಿರುತ್ತಾರೆ ಈ ಹಿಂದೆ 1947 ನೆಯ ಇಸವಿಯಲ್ಲಿ ಆಗ ಜಾರಿಯಲ್ಲಿದ್ದ 1926 ನೆಯ ಇಸವಿ ಜಿಲ್ಲಾಬೋರ್ಡುಗಳ ಆಕ್ಟಿನ ಆಧಾರದ ಮೇಲೆ ಚುನಾವಣೆಗಳಾದುವು. ಆಮೇಲೆ 1949 ನೆಯ ಇಸವಿಯಲ್ಲಿ ಶ್ರೀ ವಿ. ವೆಂಕಟಪ್ಪನವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚಿಸಿದರು. ಆ ಸಮಿತಿಯವರು ಒಪ್ಪಿಸಿದ ವರದಿಯ ಆಧಾರದ ಮೇಲೆ 1952 ರಲ್ಲಿ ಇದರ ಬಗ್ಗೆ ಒಂದು ಕಾನೂನು ರಚಿತವಾಯಿತು. ಅನಂತರ ಮತ್ತೆ ಈ ಚುನಾವಣೆಗಳ ವಿಷಯದಲ್ಲಿ ಕೆಲವು ಭಿನ್ನಾಭಿಪ್ರಾಯಗಳು ತಲೆದೋರಿ ಈ ಚುನಾವಣೆಗಳೆಲ್ಲವೂ ನೇರವಾಗಿ ನಡೆಯಬೇಕೇ ಅಥವಾ ಅಪ್ರತ್ಯಕ್ಷವಾಗಿ ನಡೆಯಬೇಕೇ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಬಂದವು. ಆಗ ಪುನಃ ಈ ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡುವುದಕ್ಕಾಗಿ ಶ್ರೀ ಡಿ. ಎಸ್. ಚಂದ್ರಶೇಖರಯ್ಯನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದರು. ಈಗ ಜಿಲ್ಲಾಬೋರ್ಡುಗಳಿಗೆ ಚುನಾವಣೆಗಳು ನಡೆಯಬೇಕಾದದ್ದು ಅತ್ಯಗತ್ಯ ಎಂದು ಹೇಳಿ ಈ ಒಂದು ತಿದ್ದುಪಡಿಯನ್ನು ತಂದು ಈ ದಿವಸ ಈ ಚುನಾವಣೆಗಳೆಲ್ಲವೂ ಪ್ರತ್ಯಕ್ಷವಾಗಿಯೇ ನಡೆಯಬೇಕೆಂದು ಸ್ಪಷ್ಟವಾಗಿ ಸಭೆಯ ಮುಂದೆ ತಿಳಿಸಿರುತ್ತಾರೆ. ಆದರೆ ನಾನು ಮೊಟ್ಟಮೊದಲನೆಯದಾಗಿ ಈ ವಿಷಯದಲ್ಲಿ ಹೇಳಬೇಕಾಗಿರುವಂಥ ಒಂದು ಅಂಶವೇನೆಂದರೆ ನಮ್ಮ ದೇಶಕ್ಕೆ ಈಗಾಗಲೇ ಸ್ವಾತಂತ್ರ್ಯ ಬಂದು ಎಂಟು ವರ್ಷಗಳಿಗೆ ಮೇಲಾಯಿತು. ಈ ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರ ಈ ಸ್ಥಳೀಯ ಸಂಸ್ಥೆಗಳ ಬಗ್ಗೆ ತೋರಿಸಿರುವಂಥ ಒಂದು ಅನಾದರಣೀಯ ಮತ್ತು ತಾತ್ಸಾರ ಮನೋಭಾವನೆಯೇನಿದೆಯೋ ಅದು ತೀರಾ ಖಂಡನೀಯ ಮಾತ್ರವೇ ಅಲ್ಲದೆ ಪೂರಾ ವಿಷಾದಕರವಾದಂಥ ಅಂಶವೆಂಬುದಾಗಿ ನಾನು ಹೇಳಬೇಕಾಗಿದೆ. ಆದರೆ ಈಗಾಗಲೇ ಈ ಮಸೂದೆಯ ಬಗ್ಗೆ ಮಾತನಾಡಿರತಕ್ಕಂಥ ಶ್ರೀ ಕೆ. ಪಟ್ಟಾಭಿರಾಮನ್‌ರವರು ತಮ್ಮ ಒಂದು ಅಭಿಪ್ರಾಯವನ್ನು ಯಾವ ರೀತಿಯಾಗಿ ವ್ಯಕ್ತಪಡಿಸಿರುತ್ತಾರೋ ಅದರಂತೆ ತಮ್ಮ ಒಂದು ರಾಜಕೀಯ ಪಕ್ಷದ ಮತ್ತು ರಾಜಕೀಯ ಚಟುವಟಿಕೆಗಳನ್ನು ಯಾವ ರೀತಿಯಾಗಿ ನಡೆಯುವಂತೆ ಮಾಡಿದರೆ ತಮ್ಮ ಪಕ್ಷದ ಸದಸ್ಯರಿಗೆ ಬೆಂಬಲ ದೊರೆಯುತ್ತದೆಂಬ ಅಂಶವನ್ನೇ ತಾವು ತಮ್ಮ ಮುಖ್ಯ ಗಮನದಲ್ಲಿಟ್ಟುಕೊಂಡು ಈ ಸ್ಥಳೀಯ ಸಂಸ್ಥೆಗಳ ಸ್ಥಾನಗಳು ತಮ್ಮ ಪಕ್ಷಕ್ಕೆ ಭದ್ರವಾಗಿ ಮತ್ತು ಊರ್ಜಿತವಾಗಿ ಉಳಿಯುವಂತೆ ಮಾಡಬೇಕೆಂಬ ಉದ್ದೇಶದಿಂದ ಈ ಮಸೂದೆ ತಂದಿದ್ದೀರಿ. ಈ ಅಧಿಕಾರವರ್ಗವನ್ನು ತಮ್ಮ ಕೈಲೇ ಯಾವಾಗಲೂ ಉಳಿಯುವಂತೆ ಮಾಡಿಕೊಳ್ಳಬೇಕೆಂಬ ಉದ್ದೇಶ ತಮಗೆ ಪೂರ್ತಿಯಾಗಿ ಇದ್ದಂತೆ ಕಂಡು ಬರುತ್ತಿದೆ. ನಾನೇ ಈ ರೀತಿಯಾಗಿ ಮೊಟ್ಟಮೊದಲನೆಯದಾಗಿ ಒಂದು ಟೀಕೆಯನ್ನೇನಾದರೂ ಮಾಡಿದ್ದಿದ್ದರೆ ಶ್ರೀಮಾನ್ ಗೋಪಾಲಗೌಡರು ತಮ್ಮ ಪಕ್ಷದ ದೃಷ್ಟಿಯಿಂದ ಹೀಗೆ ಹೇಳುತ್ತಿದ್ದಾರೆ ಎಂದು ಹೇಳಿ ಇದನ್ನು ತಾವುಗಳೆಲ್ಲರೂ ತಿರಸ್ಕಾರ ಮಾಡುವುದಕ್ಕೆ ಒಂದು ಅವಕಾಶ ಬಹುಶಃ ಇರುತ್ತಿತ್ತೋ ಏನೋ. ಆದರೆ ಈಗಾಗಲೇ ಈ ವಿಷಯವನ್ನು ಯಾವ ಪಕ್ಷಕ್ಕೂ ಸೇರದೆ ಇರುವಂಥ ಶ್ರೀ ಕೆ. ಪಟ್ಟಾಭಿರಾಮನ್‌ರವರು ಒಂದು ನಿಷ್ಪಕ್ಷಪಾತ ದೃಷ್ಟಿಯಿಂದ ಹೇಳಿರುತ್ತಾರಾದುದರಿಂದ ನಾನೀಗ ಇದನ್ನು ಪುಷ್ಟೀಕರಿಸುತ್ತಿದ್ದೇನೆ. ಆದರೆ ಹೀಗೆ ಅವರು ಹೇಳಿರತಕ್ಕದ್ದನ್ನೇ ನಾನು ಪುಷ್ಟೀಕರಿಸುತ್ತಿರುವುದರಿಂದ ಈಗಿನ ರಾಜಕೀಯ ಪಕ್ಷ ನನ್ನ ಮೇಲೇನೂ ಬೀಳಲಾರದೆಂಬ ಭರವಸೆಯಿಂದ ನಾನೀಗ ಮಾತನಾಡುತ್ತಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ತು ಇಲಾಖೆಗಳ ಮಂತ್ರಿಗಳು).—ಆ ವ್ಯಾಧಿ ಮೊದಲು ಅಲ್ಲಿತ್ತು. ಈಗ ಅದು ಇಲ್ಲಿಗೆ ಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಈ ರೀತಿಯಾಗಿ ಈ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಒಂದು ರಾಜಕೀಯ ದೃಷ್ಟಿಯನ್ನಿಟ್ಟುಕೊಂಡು ತಮ್ಮ ಪಕ್ಷದ ಜನಗಳಿಗೇನೇ ಒಂದು ಅನುಕೂಲವಾದಂಥ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಉದ್ದೇಶಪಟ್ಟಿರತಕ್ಕದ್ದು ದೇಶದ ಹಿತದೃಷ್ಟಿಯಲ್ಲಿ ಅಪ್ಪು

* Asterisk indicates that the remarks and speeches have not been revised by the Member concerned.

(ಶ್ರೀ ಎಸ್. ಗೋಪಾಲಗೌಡ.)

ಹಿತಕರವಾದುದಲ್ಲ ಮತ್ತು ಒಳ್ಳೆಯದಲ್ಲ ಎಂದು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಸ್ಥಳೀಯ ಸಂಸ್ಥೆಗಳ ಇತಿಹಾಸವು ಬಹಳ ಪುರಾತನವಾದದ್ದು. ಬ್ರಿಟಿಷರು ನಮ್ಮ ದೇಶಕ್ಕೆ ಬಂದಮೇಲೆ ಈ ಸ್ಥಳೀಯ ಸಂಸ್ಥೆಗಳು ಸಂಪೂರ್ಣವಾಗಿ ನಿರ್ಜೀವಿಗಳಾದವು. ಅವರಿಂದ ಇವುಗಳಿಗೆ ಬಹಳ ಕಾಲ ಯಾವ ಒಂದು ಪುರಸ್ಕಾರವೂ ದೊರೆಯಲಿಲ್ಲ. ಆದರೆ ಅವರಿಗೆ ಅನಿವಾರ್ಯವಾಗಿ ಕೊನೆಕೊನೆಯಲ್ಲಿ ಈ ಸಂಸ್ಥೆಗಳಿಗೆ ಒಂದು ರೂಪ ಕೊಡಲೇಬೇಕಾಗಿ ಬಂತು. ಇಲ್ಲಿಗೆ ಸುಮಾರು 80 ವರ್ಷಗಳಿಂದ ನಮ್ಮ ಮೈಸೂರಿನಲ್ಲಿ ಈ ಸಂಸ್ಥೆಗಳು ನಡೆದುಕೊಂಡುಬರುತ್ತಿವೆ. ಆದರೆ ಆ ಹಳೆಯ ಕಾಲದಲ್ಲಿ ಪ್ರಜಾಪ್ರಭುತ್ವದ ಅರಿವು ಇಲ್ಲ ಇನ್ನೂ ಜನಗಳಲ್ಲಿ ಉದಯವಾಗಿರಲಿಲ್ಲ. ಆದುದರಿಂದ ಇದನ್ನು ಆಗಿನ ಕಾಲದಲ್ಲಿ ಯಾವ ಕ್ಷೇತ್ರದಲ್ಲಿಯೂ ಜಾರಿಗೆ ತರುವುದಕ್ಕೆ ಆಗಲಿಲ್ಲ. ಆಗ ಜನರು ಒಂದು ರೀತಿಯಾಗಿ ನಾಮಕರಣದ ಪದ್ಧತಿಯ ಮೇಲೆ ಚುನಾಯಿತರಾಗಿ ಬಂದು ಯಾವುದೋ ಒಂದು ರೀತಿಯಲ್ಲಿ ಸರ್ಕಾರಕ್ಕೆ ಅನುಕೂಲವಾಗಿ ಈ ಕಾರ್ಯಗಳನ್ನೆಲ್ಲಾ ನಡೆಸಿಕೊಂಡು ಹೋಗುತ್ತಿದ್ದರು. ಆದರೆ ಇತ್ತೀಚೆಗೆ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಹೊಸ ಹೊಸ ಕಾನೂನುಗಳು ಜಾರಿಗೆ ಬಂದು ಈ ಸಂಸ್ಥೆಗಳ ಕಾರ್ಯಗಳನ್ನು ಒಂದು ದೊಡ್ಡ ರೀತಿಯಲ್ಲಿ ಮಾಡುವುದಕ್ಕೆ ಅವಕಾಶವಾಗಿರುತ್ತದೆ. ಆದರೆ ಹೀಗೆ ದೊರೆತಂಥ ಒಂದು ಮಹಾ ಅವಕಾಶವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಈ ಹಿಂದೆ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಲು ಹೊರಟಂಥ ಕಾಲದಲ್ಲಿ ಮಹಾತ್ಮ ಗಾಂಧಿಯವರೂ ಮತ್ತು ಇತರ ಸ್ವರಾಜ್ಯ ಪಕ್ಷದ ರಾಜಕೀಯ ಮುಖಂಡರುಗಳೂ ಈ ಸ್ಥಳೀಯ ಸಂಸ್ಥೆಗಳ ಬಗ್ಗೆ ಇವು ಹಾಗೆ ಇರಬೇಕಾಗಿತ್ತು, ಹೀಗಿರಬೇಕಾಗಿತ್ತೆಂದು ಬಹಳವಾಗಿ ಮಾತನಾಡುತ್ತಿದ್ದರು. ಸ್ವರಾಜ್ಯ, Self-Government ಇಂಥಾದ್ದು ದೇಶಕ್ಕೆ ಲಭಿಸಿದ ಮೇಲೆ, ಕಾಂಗ್ರೆಸ್ ಇವುಗಳ ಬಗ್ಗೆ ಒಂದು ಉದಾತ್ತ ಧ್ಯೇಯ ಧೋರಣೆಗಳನ್ನು ತೋರಿಸಬೇಕೆಂದು ಹೇಳುತ್ತಿದ್ದರು. ಆದರೆ ಹಾಗೆ ಆ ದಿವಸ ಮಹಾತ್ಮಾ ಗಾಂಧಿಯವರು ಮತ್ತು ಇತರ ರಾಜಕೀಯ ಪಕ್ಷಗಳು ಯಾವುದನ್ನು ಬಹಳ ತೀವ್ರವಾಗಿ ವಿರೋಧಿಸುತ್ತಿದ್ದರೋ ಅದನ್ನೇ ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೂ ಆಚರಣೆಯಲ್ಲಿ ತರುತ್ತಿದ್ದೀರಿ. ಈ ಸ್ಪಿರಿಟಿನ ಒಂದು ದೌರ್ಜನ್ಯ ಶಕ್ತಿ ಕಮ್ಮಿಯಾಗುವುದಕ್ಕೆ ಕಾರಣ ಈ ದಿನ ಸ್ಥಳೀಯ ಸಂಸ್ಥೆಗಳನ್ನು ಹರಿದು ಹಂಚಿಬಿಟ್ಟಿದ್ದಾರೆಂದು ಸ್ಥೂಲವಾಗಿ ಹೇಳಬಹುದು. ಆದರೆ ಕಾರ್ಯತಃ ಏನು ಎದ್ದು ಕಾಣುತ್ತದೆ ಎಂದರೆ ಹೆಚ್ಚುಹೆಚ್ಚಾಗಿ ಇವೊತ್ತು ನಮಗೆ ಹೊಸ ಲಕ್ಷಣಗಳು ಏನು ಕಂಡುಬರುತ್ತವೆ ಎಂದರೆ ಬಹುಶಃ Planning ದೇಶದಲ್ಲಿ ನಡೆಯುತ್ತ ಇರುವುದರಿಂದ ಇರಬಹುದು ಅಥವಾ ಕೇಂದ್ರದಿಂದ ಆಡಳಿತವನ್ನು ನಿರ್ವಹಿಸುವುದು ಹೆಚ್ಚು ಸೂಕ್ತವೆಂದೂ ಭಾವಿಸಿರಬಹುದು. ವಸ್ತುಸ್ಥಿತಿಯಲ್ಲಿ ಏನಾಗಿದೆ ಎಂದರೆ ಬೇರೆ ಯಾವುದೋ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವನ್ನು ಮತ್ತು ಹೆಚ್ಚಿನ ಹಣಕಾಸಿನ ಸೌಲಭ್ಯವನ್ನು ಕಲ್ಪಿಸಿಕೊಟ್ಟು ಅವುಗಳನ್ನೆಲ್ಲ ರೂಢಮೂಲವಾಗಿ ಊರ್ಜಿತಗೊಳಿಸಿ ಅವುಗಳಿಗೆ ಹೆಚ್ಚಿನ ಶಕ್ತಿಯನ್ನೂ ಜೀವವನ್ನೂ ತುಂಬುವುದಕ್ಕೆ ಸೌಕರ್ಯಗಳು ಬೇಕು. ಸಣ್ಣ ಉದಾಹರಣೆಗಾಗಿ ಈ ಗ್ರಾಮಪಂಚಾಯಿತಿ ಮತ್ತು ಜಿಲ್ಲಾಬೋರ್ಡುಗಳ ಬಗ್ಗೆ ಇದುವರೆಗೂ ಅವರು ಯಾವ ವರ್ತನೆಯನ್ನು ತೋರಿಸಿದ್ದಾರೆಯೋ ತನ್ಮೂಲಾಂತರ ನಾವು ಕಂಡುಕೊಳ್ಳಬಹುದಾಗಿದೆ. ಈ ರೀತಿ ಇವುಗಳನ್ನು ಕಡೆಗಣಿಸಿದ್ದು ಅಲ್ಲದೆ ಅವು ಅತಿ ಕೆಲಸ ಮಾಡುತ್ತಿವೆ ಎನ್ನುವ ಒಂದು ತೋರುಗಾಣಿಕೆಯ ಅಸ್ತಿತ್ವದಲ್ಲಿ ಅವನ್ನು ರೂಪಿಸಿ ಸರ್ಕಾರ ವರ್ತಿಸಿಕೊಂಡು ಹೋಗುತ್ತಿದೆ. ಶ್ರೀಮಾನ್ ಕೆ. ಪಟ್ಟಾಭಿರಾಮಯ್ಯರವರು ಹೇಳಿರುವ ಹಾಗೆ ಸಮಿತಿಗಳನ್ನು ನೇಮಿಸುತ್ತಿದ್ದಾರೆ. ಆ ಸಮಿತಿಗಳವರು ತಮ್ಮ ವರದಿಗಳನ್ನು ತೀರ್ಮಾನಗಳನ್ನು ಕೊಡುತ್ತಾರೆ. ಅವರು ಕೊಟ್ಟ ತೀರ್ಮಾನಗಳನ್ನು ಹಾಗೆಯೇ ಕಾರ್ಯಗತ ಮಾಡಬೇಕೆಂದು ನಾನು ಅಭಿಪ್ರಾಯಪಡುವುದಿಲ್ಲ. ಆದರೆ ಆ ಸಮಿತಿಗಳು ಶ್ರಮಪಟ್ಟು ಏನೊಂದು ತೀರ್ಮಾನವನ್ನೂ, ಸಲಹೆಗಳನ್ನೂ ಕೊಡುತ್ತವೆಯೋ ಅವುಗಳನ್ನು ಪರಿಶೀಲನೆ ಮಾಡಿ ಆ ರೀತಿ ಸರ್ಕಾರ ಮುಂದುವರಿಯುವುದಕ್ಕೆ ಅನೇಕ ವೇಳೆ ಈ ಸರ್ಕಾರಗಳು ಐದು ವರ್ಷಗಳಿಗೆ ಒಂದಾವರ್ತಿ ಬದಲಾಗುತ್ತ ಇರುತ್ತವೆ. ಹಿಂದಿನ ಸಮಿತಿಯವರು ಮಾಡಿದ್ದು ಮುಂದೆ ಬರುವ ಸರ್ಕಾರದವರಿಗೆ ಇಷ್ಟವಿಲ್ಲದೆ ಹೋಗಬಹುದು. ಆ ಸರ್ಕಾರದಲ್ಲಿ ರಚಿತವಾದ ಸಮಿತಿಗಳು ಮಾಡಿರತಕ್ಕಂಥ ಕೆಲವು ಸಲಹೆಗಳು, ತೀರ್ಮಾನಗಳು, ವರದಿಗಳು, ಮುಂದೆ ಇನ್ನು ಐದು ವರ್ಷಕ್ಕೆ ಬರುವ ಮಂತ್ರಿಮಂಡಲದವರಿಗೆ ಇಷ್ಟವಿಲ್ಲದೆ ಹೋಗಬಹುದು. ಹೀಗಾಗಿ ಏನಾಗಿದೆ ಎಂದರೆ ಪ್ರಜಾಪ್ರಭುತ್ವದಲ್ಲಿ ಮಂತ್ರಿಮಂಡಲಗಳು ಬದಲಾವಣೆಯಾದ ಹಾಗೆಲ್ಲ ಈ ದೃಷ್ಟಿಕೋಣವೂ ಬದಲಾವಣೆಯಾಗುತ್ತ ಹೋಗಿ ಅನೇಕವೇಳೆ ಇದರಿಂದ ಪ್ರಗತಿಗೆ ಧಕ್ಕೆ ಬರುತ್ತದೆ. ಆ ರೀತಿಯ ಮನೋಭಾವ ಇದ್ದರೆ ಅದೂ ಕೂಡ ಪ್ರಗತಿಗೆ ಧಕ್ಕೆ ತರತಕ್ಕ ಮನೋಭಾವವೆಂದು ಹೇಳಬೇಕಾಗಿದೆ. ಅಂತೂ ಶ್ರೀಮಾನ್ ಕೆ. ಪಟ್ಟಾಭಿರಾಮಯ್ಯರವರು ಹೇಳಿದ ಹಾಗೆ ಶ್ರೀಮಾನ್ ವಿ. ವೆಂಕಟಪ್ಪನವರ ಸಮಿತಿಗೆ ಯಾವ ಒಂದು ಗೌರವ ಸರ್ಕಾರದಿಂದ ತೋರಿಸಲ್ಪಟ್ಟಿತೋ ಅದೇ ಗೌರವ ಶ್ರೀಮಾನ್ ಡಿ. ಹೆಚ್. ಚಂದ್ರಶೇಖರಯ್ಯನವರ ಸಮಿತಿಗೂ ತೋರಿಸಲ್ಪಟ್ಟಿತು ಎಂದು ಈಗ ನಾನು ತಿಳಿದುಕೊಳ್ಳಬಹುದಾಗಿದೆ.

ಅದು ಏನೇ ಇರಲಿ, ಸರ್ಕಾರದವರು ಈಗ ಇರತಕ್ಕ ಕಾನೂನು ಆಧಾರದ ಮೇಲೆ ಗ್ರಾಮಪಂಚಾಯಿತಿಗಳ ಚುನಾವಣೆ ನಡೆಸಿದರು. ಗ್ರಾಮಪಂಚಾಯಿತಿಗಳ ಚುನಾವಣೆ ವೈಖರಿಯನ್ನು ನಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಈ ಚುನಾವಣೆಗಳು ಸಾಮಾನ್ಯವಾಗಿ ಗ್ರಾಮಪಂಚಾಯಿತಿಗಳಲ್ಲಿ ನಡೆಯಬೇಕಾದರೆ ಯಾವುದೇ ರೀತಿಯ ಪಾರ್ಟಿ ಅಥವಾ ಪಕ್ಷಗಳಿರಬಾರದು. ಸತ್ಯದ ಆಡಳಿತಕ್ಕೆ ಅಲ್ಲಿ ಒಮತ್ತವಾದ ಸಮಿತಿ ರಚನೆಯಾಗಬೇಕು, ಅದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಹಳ್ಳಿಗಳಲ್ಲಿ ಒಂದು ಸೌಹಾರ್ದ, ಒಂದು ಸಹಕಾರ, ಅವರಲ್ಲಿ ಅನ್ಯೋನ್ಯ ಭಾವನೆಯನ್ನು ಪ್ರೇರೇಪಿಸಬೇಕು. ಅದಕ್ಕೆ ಸಹಾಯಕವಾಗಿರಬೇಕು ಎನ್ನುವ ಮನೋಭಾವನೆಯಲ್ಲಿ ಗ್ರಾಮಪಂಚಾಯಿತಿಗಳ ಚುನಾವಣೆ ಮಾಡಬೇಕು ಎನ್ನುವ ಸಾಮಾನ್ಯವಾದ ನಿಯಮವನ್ನು ಇಟ್ಟುಕೊಳ್ಳಬೇಕು. ಆದರೆ ಈ ದಿನ ಚುನಾವಣೆಗಳು ನಡೆದ ರೀತಿಯಲ್ಲಿ ಏನಾಗಿದೆ ಎಂದರೆ . . .

Mr. SPEAKER.—How is it relevant to this Bill ? The Hon'ble Member can only speak on the provisions of the amending Bill—not on the provisions of the original Act.

ಶ್ರೀ ಎಸ್. ಗೋಪಾಲಗೌಡ.—ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಈ ವಿಲೇಜ್ ಪಂಚಾಯಿತಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುತ್ತಿಲ್ಲ. ಅದೇ ರೀತಿ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗಳನ್ನು ನಡೆಸಿದ್ದರೆ ಏನು ಅಡ್ಡಿ ಬರುತ್ತಿತ್ತು ಎಂದು ಕೇಳುತ್ತೇನೆ; ಪ್ರತಿದಿವಸ ಒಂದೊಂದು ಕಾನೂನು ಜಾರಿಗೆ ಬರುತ್ತಿದೆ. ಯಾರಾದರೂ ಫಿರ್ಯಾದು ಕೊಟ್ಟರೆ ಅದನ್ನು ತೆಗೆದುಕೊಳ್ಳುವವರು ಇಲ್ಲ. ಇಂಥ ಗ್ರಾಮರಾಜ್ಯಕ್ಕೆ ನಮಸ್ಕಾರ.

ಈ ರೀತಿಯಲ್ಲಿ ಅವರು ಚುನಾವಣೆ ನಡೆಸುವಾಗ ಈ ವಿಧಾನ ಸಭೆಯನ್ನು ಕೇಳಿದ್ದರೆ, ಅನೇಕ ಸಲ ಅವರು ಬೊಬ್ಬೆಯನ್ನು ಹೊಡೆಯುತ್ತಿದ್ದರು ಅಷ್ಟೆ. ಈ ವಿಲೇಜ್ ಪಂಚಾಯಿತಿಯೇ ಮೂಲಾಧಾರವೆಂದು ತಾವು ಈ ವಿಧಾನ ಸಭೆಯಲ್ಲಿ ಎಷ್ಟು ಸಲ ಸಾರಲಿಲ್ಲ? ಇಂಥವುಗಳನ್ನೆಲ್ಲಾ ನಾವು ಸ್ಮರಿಸಿಕೊಂಡು ಈ ದೇಶದಲ್ಲಿ ಬಾಳಿಕೊಂಡಿದ್ದೇವೆ. ಇದರಲ್ಲೆಲ್ಲಾ ನಮ್ಮನ್ನು ಕೇಳದೆ ಗ್ರಾಮಪಂಚಾಯಿತಿಗಳಿಗೆ ಚುನಾವಣೆ ಮಾಡಿದಿರಿ. ನಮ್ಮ ಹತ್ತಿರ ಒಂದು ಮಸೂದೆ ತರುತ್ತೀರಿ. ಗ್ರಾಮಪಂಚಾಯಿತಿಗಳ ವಿಷಯವನ್ನು ಕೈಬಿಟ್ಟು ಬರೀ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಮಾತ್ರ ತಮಗೆ ಅನುಕೂಲವಾದ ರೀತಿಯಲ್ಲಿ ಕೆಲವು ತಿದ್ದುಪಡಿಗಳನ್ನು ತಂದು ಸಭೆಯ ಮುಂದೆ ಇಟ್ಟಿದ್ದೀರಿ. ಇದನ್ನು ನಾವು ಪಾಸ್ ಮಾಡುವುದಕ್ಕೆ ಅಡ್ಡಿ ಇಲ್ಲವೆಂದು ಹೇಳಿದರೂ ಕೂಡ ತಕ್ಷಣ ಚುನಾವಣೆ ಮಾಡುತ್ತೀರೆಂದು ನಮಗೆ ಭರವಸೆ ಇಲ್ಲ. ಯಾರೋ ಒಬ್ಬರು ಸಲಹೆಯನ್ನು ಮಾಡಿದರೆಂದು ಒಂದು ಸಮಿತಿಯನ್ನು ಮಾಡಿದಿರಿ. ಅವರ ವರದಿಯೂ ಬಂತು. ಅದು ಈಗ ಏನಾಗಿದೆ? ಕಮಿಟಿ ಸಲಹೆ ಮಾಡಿದ ತಿದ್ದುಪಡಿಗಳನ್ನು ತಂದಿದ್ದೇವೆ ಅಥವಾ ಅವರು ಹೇಳಿರುವ ಪ್ರಕಾರ ನಮಗೆ ನ್ಯೂನಾತಿರೇಕಗಳು ಕಂಡುಬಂದದ್ದರಿಂದ ತಂದಿದ್ದೇವೆ ಎಂದು Objects and Reasons ನಲ್ಲಿ ಹೇಳಿದ್ದೀರಾ? ಎಲ್ಲವನ್ನೂ ಇದರಲ್ಲಿ ಪರಿಶೀಲಿಸಿ ನೋಡಿದರೆ ಇದರಲ್ಲಿ ಏನೂ ಇಲ್ಲ. ಅಸ್ತಿತ್ವದಲ್ಲಿ ಇದೇ ಸರ್ಕಾರದ ಮನೋಭಾವವೆಂದು ನೋಡಬೇಕೇ ಹೊರತು ಇದರಲ್ಲಿ ಯಾವುದೋ ಒಂದು ಮೂಲಭೂತವಾದ ಪ್ರಗತಿಯನ್ನು ಸಾಧಿಸಬೇಕು. ಈ ತಿದ್ದುಪಡಿಗಳನ್ನು ನೋಡಿದರೆ ವಿಲೇಜ್ ಪಂಚಾಯಿತಿಗಳು ಮತ್ತು ಜಿಲ್ಲಾ ಬೋರ್ಡುಗಳು ಒಂದು ಪ್ರತಿನಿಧಿ ಸ್ವರೂಪವಾದಂಥ ಸಮಿತಿಗಳಾಗಿ ಕೆಲಸ ಮಾಡಬೇಕು ಎನ್ನತಕ್ಕ ಮನೋಭಾವ ಸರ್ಕಾರಕ್ಕೆ ಇದ್ದಂತೆ ನನಗೇನೂ ತೋರಲಿಲ್ಲ. ಆದ್ದರಿಂದ ಈ ಗ್ರಾಮಪಂಚಾಯಿತಿಗಳಿಗೆ ಚುನಾವಣೆ ಮಾಡಿದಾಗ ಯಾವ ಆಧಾರದ ಮೇಲೆ ಮಾಡಿದಿರಿ ಅದನ್ನು ಮಾಡುವಾಗ ಸಾಕಷ್ಟು ವ್ಯವಸ್ಥೆಯನ್ನು ಮಾಡಿದ್ದರೆ ಅದು ಯಾವ ರೀತಿ ನಡೆಯುತ್ತಿತ್ತು ಎನ್ನುವುದನ್ನು ನಾನು ಇವೊತ್ತು ಸರ್ಕಾರದವರ ಮುಂದೆ ಪ್ರಶ್ನಿಸಬೇಕಾಗಿದೆ.

Mr. SPEAKER.—That is not relevant, Sri Gopala Gowda. I want to be very strict; it does not matter even if I incur the displeasure of some Hon'ble members. I request Hon'ble members to adhere to Rules of Procedure.

*Sri J. MOHAMED IMAM (Jagalur).—With due deference to the Chair, I submit that this Amending Bill seeks to amend the Village Panchayets and District Boards Act. Whenever we speak on the amendment, necessarily we will have to refer to the original Act Without reference to the original Act, it would be very difficult for us to confine our speeches to the amending bill. Therefore, I submit that whenever an amendment is placed before the House, that entire particular Act will be the object of discussion. If the Chair restricts discussion only to the clauses here, then it would be very difficult for us to do full justice. So, we will have to cover the entire provisions of the Act.

For exemple, there is one important clause regarding the delimitation of constituencies. The original Act was quite different. Now they want to create one taluk constituency. When we have to discuss the Bill, we will have to discuss the provisions of the old Act and also refer to the relevant portions. So, my humble submission is this: when the existing Act is sought to be amended necessarily, we will have to refer to various provisions of the old Act which will have a bearing on the amendments. I submit to the Chair that it will be very difficult to confine ourselves to the amending Bill without making a reference to the old Act. Therefore, I request that due latitude will have to be given to the member to refer to the necessary clauses contained in the old Act.

Sri Kadidal MANJAPPA.—Sir, it is true that Honourable Members while speaking on this Bill can refer to the relevant clauses incidentally, but they cannot cover the entire District Board and Village Panchayet Act and comment upon the existing provisions. For instance, Mr. Gopala Gowda made a reference to the elections held in connection with Village Panchayets; It was not at all relevant; he could have simply said what procedure we had adopted. But he went on criticising the method and the manner in which the election was held and said the Shanbhogue was the 'show-master' there.

Sri J. MOHAMED IMAM.—I may bring to your notice one point; that is, last year, we discussed the amendments

(SRI J. MOHAMED IMAM.)

on the Sales-Tax. The Government introduced a series of amendments to the Sales-Tax Bill, and the Chair may remember that it took me nearly two or three days in that connection. We not only discussed the amended provision but also we went into the entire sales-tax structure.

Mr. SPEAKER.—Whatever it may be, I can understand the point of the Honourable Member.

Sri J. MOHAMED IMAM.—We will not waste the time of the House. We want to point out further amendments if necessary. We want to suggest to the Government that certain Clauses are not helpful. So the practice is, whenever amendments are made to a particular Act, the members have a right to refer to any important points in that Act. We are not going to refer to any other Act.

Mr. SPEAKER.—Of course, it is laid down in the Rules of Procedure that relevant provisions can be referred it. Relevancy should be strictly adhered to, that is also stressed there. I have no objection if the Honourable leader of the Opposition refers to relevant provisions of the old Act. But any matter outside the scope of the Bill, cannot be allowed in the discussion. I have no objection to a passing reference being made. The scope of the discussion should not extend to the subject of elections and the procedure adopted by the Government and the result thereof. All relevant provisions in the original Act can be referred to and I will allow the discussion to that extent.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ತಿದ್ದುಪಡಿಯಲ್ಲಿ ಮುಖ್ಯವಾಗಿ, ಸರ್ಕಾರದವರು ಪರೋಕ್ಷವಾಗಿ ವ್ಯಕ್ತಪಡಿಸಿರುವ ರೀತ್ಯಾ ತಾಲ್ಲೂಕು ಬೋರ್ಡ್‌ಗಳ ರಚನೆಯು ಸೂಚಿತವಾಗಿದೆ. ತಾಲ್ಲೂಕು ಬೋರ್ಡುಗಳ ರಚನೆಯನ್ನು ಸರ್ಕಾರದವರು ಪರಿಶೀಲಿಸುತ್ತಾರೆಂದು ಅವರೇ ಹೇಳಿದರು. ಅದಕ್ಕೆ ನಾಮಕರಣವನ್ನು ಕೂಡ ಮಾಡಬಹುದು ಎಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿರುತ್ತಾರೆ. ಇಂಥ ಕಮಿಟಿಗಳ ಅನುಭವ ಹಿಂದಿದ್ದ ಡೆವಲಪ್‌ಮೆಂಟ್ ಸಮಿತಿಗಳ ಸಂಬಂಧದಲ್ಲಿ ನಮಗೆ ಸಾಕಷ್ಟು ಬಂದಿದೆ.

ಶ್ರೀ ಟಿ. ಎನ್. ಮೂಡ್ಲಗಿರಿಗೌಡ.—ಏನು ಅನುಭವ ನಿಮಗೆ ಬಂದಿದೆ? ಅವು ಚೆನ್ನಾಗಿ ಕೆಲಸ ಮಾಡಿದ್ದರೂ ಕೂಡ, ಅವುಗಳಿಂದ ದೇಶಕ್ಕೆ ಒಳ್ಳೆಯದಾಗಿದೆಯೆಂದು ಹೇಳುವುದಕ್ಕೂ ಅನೇಕ ಜನರಿರುವಾಗ, ಅವುಗಳಿಂದ ದೇಶಕ್ಕೇನೋ ಆಘಾತವಾಗಿದೆಯೆನ್ನುವ ಹಾಗೆ ತಪ್ಪರ್ಥ ಬರುವಂತೆ ಹೇಳುವುದು ಸರಿಯಲ್ಲ.

ಶ್ರೀ ಎಸ್. ಗೋಪಾಲಗೌಡ.—ಬಹುಶಃ ಮಾನ್ಯ ಸದಸ್ಯರೂ ಆ ಕಮಿಟಿಯ ಅಧ್ಯಕ್ಷರಾಗಿದ್ದರೋ ಏನೋ, ಗೊತ್ತಿಲ್ಲ. ಅದೇನೇ ಇರಲಿ, ಈ ರಿಪೋರ್ಟಿನಲ್ಲೂ ಶ್ರೀ ಚಂದ್ರಶೇಖರಯ್ಯನವರು ಬಹುಮಟ್ಟಿಗೆ ತಾಲ್ಲೂಕು ಬೋರ್ಡ್‌ಗಳನ್ನು ಶಿಫಾರಸು ಮಾಡಿಕೊಂಡೇ ಹೋಗಿದ್ದಾರೆ. ನಾನಾದರೋ, ಈ ತಾಲ್ಲೂಕು ಬೋರ್ಡುಗಳನ್ನು ಬೇಕೆಂದು ಹೇಳುವವನಲ್ಲ. ಇಂಥ ಸ್ಟ್ಯಾಚುಟರಿ ಅಸ್ತಿತ್ವವಿಲ್ಲದ ಒಂದು ಬೋರ್ಡನ್ನು ನಾಮಕರಣ ಮಾಡಬೇಕೆಂದಿರುವ ವಿಷಯದಲ್ಲಿ ನನ್ನ ತೀವ್ರ ವಿರೋಧವಿದೆ. ಯಾವಾಗ ಅದಕ್ಕೆ ಸ್ಟ್ಯಾಚುಟರಿ ಅಧಿಕಾರವಿಲ್ಲವೋ ಅದಕ್ಕೆ ಸರ್ಕಾರಿ ಬೊಕ್ಕಸದಿಂದ ಮೂರು ಕಾಸನ್ನು ಖರ್ಚುಮಾಡುವ ಅಧಿಕಾರವಿರಕೂಡದೆಂದು ನನ್ನ ಅಭಿಪ್ರಾಯ ಏಕೆಂದರೆ, ಅಲ್ಲಿನ ಸದಸ್ಯರು ಗೌರವ ಸದಸ್ಯರು. ನಾಮಕರಣ ಮಾಡಿರುತ್ತೇವೆ. ಅವರೇನೇ ಮಾಡಿದರೂ ಅವರಮೇಲೆ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಅಂಥವರನ್ನು ನಾಮಕರಣಮಾಡಿ ಆಮೇಲೆ ಅವರು ದುಡ್ಡು ತಿಂದಿದ್ದಾರೆ, ಲಂಚ ತೆಗೆದುಕೊಂಡಿದ್ದಾರೆ ಎಂದು ಆಪಾದನೆ ಮಾಡುವುದು ಬಹಳ ತಪ್ಪು.' ಆದ್ದರಿಂದ ಇಂಥ ಸಮಿತಿಗಳನ್ನು ರಚನೆಮಾಡಿ ನಮ್ಮ ಹಣಕಾಸನ್ನು ಅವರ ಕೈಗೆ ಕೊಡುವುದು ಸೂಕ್ತವಲ್ಲ. ಈ ಕಾರಣವೇ ಅಲ್ಲದೆ ರಾಜಕೀಯ ಕಾರಣಗಳನ್ನೂ ಅವರ ವಿಷಯದಲ್ಲಿ ಹೇಳಬೇಕಾಗುತ್ತದೆ.

Mr. SPEAKER.—I do not want the Hon'ble Member to give room to provocation. You can only make passing reference to these committees.

ಶ್ರೀ ಎಸ್. ಗೋಪಾಲಗೌಡ.—ನಿನ್ನೆ ದಿವಸ ಈ ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸುವಾಗಲೇ ಮಾನ್ಯ ಕಂದಾಯ ಮಂತ್ರಿಗಳು ಈ ವಿಷಯವನ್ನು ಸಭೆಯಲ್ಲಿ ತಿಳಿಸಿದ್ದಾರೆ. ಮತ್ತು ಬೇರೆ ಸಂದರ್ಭಗಳಲ್ಲೂ ಅವರ ಅಭಿಪ್ರಾಯ ನಮಗೆ ತಿಳಿದು ಬಂದಿದೆ. ಇಂಥ ಕಮಿಟಿಗಳನ್ನು ರಚಿಸುವುದು ಸರ್ಕಾರದವರ ಉದ್ದೇಶವಾಗಿದೆಯೆಂದು ಗೊತ್ತಾಗಿದೆ.

Mr. SPEAKER.—The Constitution of these Committees is not before us. It would have been relevant if the Hon'ble Member had made reference to such points during the Budget Discussion or during the debate on the Rajpramukh's Address. Now they are unnecessary.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಡಿಸ್ಟ್ರಿಕ್ಟ್ ಬೋರ್ಡ್ ಕೆಲಸಗಳನ್ನು ಮಾಡುವುದಕ್ಕೆ ಬೇರೊಂದು ಸಮಿತಿಯನ್ನು ಮಾಡುತ್ತೇವೆಂದು ಅವರೇ ಹೇಳುವಾಗ ಇದು relevant ಆಗಿಯೇ ಆಗುತ್ತದೆ.

Sri J. MOHAMED IMAM.—It is like this, Sir. The constitution of rural development committees encroaches upon the District Board which ought not to. Secondly, the constitution of these committees would deprive the District Boards of their legitimate income. On these two

grounds we are opposing the amending Bill.

Mr. SPEAKER.—They have not abrogated any of the provisions relating to the powers of the District Boards.

1 P. M.

ಶ್ರೀ ಎಸ್. ಗೋಪಾಲಗೌಡ.—ಎರಡನೆಯದಾಗಿ ರಾಜಕೀಯ ಕಾರಣಗಳಿಗಾಗಿಯೂ ಕೂಡ ಇಂಥ ಸಮಿತಿಗಳನ್ನು ರಚಿಸುವುದನ್ನು ನಾನು ವಿರೋಧಿಸಬೇಕಾಗಿದೆ.

106ನೇ ಸೆಕ್ಷನ್ ತಿದ್ದುಪಡಿ ಮಾಡಬೇಕೆಂಬುದು ಮತ್ತೊಂದು ಬಹಳ ಮುಖ್ಯವಾದ ಅಂಶ. ಈಗಿರುವ ಪ್ರಕಾರ ಡಿಸ್ಟ್ರಿಕ್ಟ್ ಬೋರ್ಡಿಗಿರತಕ್ಕಂಥ ವರಮಾನಗಳೇ ಕಡಿಮೆ. ಡಿಸ್ಟ್ರಿಕ್ಟ್ ಬೋರ್ಡು ತನ್ನ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಈ ದಿವಸ ಅದು ಸರಿಯಾದ ರೀತಿಯಲ್ಲಿ ಒಂದು ವ್ಯವಸ್ಥಿತವಾದ ರೀತಿಯಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಹಣಕಾಸಿನ ಕೊರತೆ ಅದಕ್ಕೆ ಬಹಳವಾಗಿದೆ. ಉದಾಹರಣೆಗೆ ಜಿಲ್ಲಾ ಬೋರ್ಡುಗಳ ಹೈಸ್ಕೂಲುಗಳು ಈಗ ಹೇಗೆ ನಡೆಯುತ್ತಿವೆಯೆಂಬುದನ್ನು ನೋಡಬಹುದು. ನಮ್ಮ ಅಧ್ಯಕ್ಷರ ತಾಲ್ಲೂಕಿನಲ್ಲೂ ಸಹ ಒಂದು ಇಂಥ ಹೈಸ್ಕೂಲಿದೆ. ಅದನ್ನು ನೋಡಿದರೆ ಬೋರ್ಡು, ಚಾಕ್‌ಪೀಸು, ಉಪಾಧ್ಯಾಯರು ಇಲ್ಲದೆ ಬಹಳ ತೊಂದರೆಯಿದೆ. ಬೇರೆ ಸ್ಕೂಲುಗಳ ಮಟ್ಟಕ್ಕೆ ಬರಲು ಅವಕ್ಕೆ ಸಾಧ್ಯವಿಲ್ಲ. ಮತ್ತು ಇಲ್ಲಿ ಕೆಲಸ ಮಾಡುವ ಉಪಾಧ್ಯಾಯರಿಗೆ ಬೇರೆ ಉಪಾಧ್ಯಾಯರ ಸ್ಕೇಲನ್ನು ಕೊಡುವುದಿಲ್ಲ. ಬರೀ ಒಂದು ಸ್ಕೂಲಿನ ವಿಚಾರವೇ ಹೀಗಿರುವಾಗ ಜಿಲ್ಲಾ ಬೋರ್ಡಿನ ಕೆಲಸ ಎಷ್ಟು ಕಷ್ಟಕರವಾಗಿದೆ ಎಂಬುದನ್ನು ಊಹಿಸಬಹುದು. ಅದರ ಹಣಕಾಸಿನ ಪರಿಸ್ಥಿತಿ ತೀರಾ ಕೊರತೆಯಿಂದ ಮುಂದುವರೆದುಕೊಂಡು ಹೋಗುತ್ತಿದೆ. ಮತ್ತು ಅದರ ರಸ್ತೆಗಳನ್ನು ಈ ದಿವಸ ಸರಿಯಾದ ಸ್ಥಿತಿಯಲ್ಲಿಡಲು ಸಾಧ್ಯವಿಲ್ಲವಾಗಿದೆ. ಆದ್ದರಿಂದ ಜಿಲ್ಲಾ ಬೋರ್ಡು ತನ್ನ ಕೆಲಸ ಕಾರ್ಯಗಳನ್ನು ಸಲೀಸಾಗಿ ನಡೆಸಿಕೊಂಡು ಹೋಗಲು ಹೆಚ್ಚಿನ ಆದಾಯ ಅದಕ್ಕೆ ದೊರೆಯುವಂತೆ ಕಾನೂನಿನಲ್ಲಿ ಅವಕಾಶ ಮಾಡಬೇಕಾಗಿತ್ತು. ನಮಗೆ ಪ್ರಜಾ ಪ್ರಭುತ್ವದಲ್ಲಿ ಮತ್ತು ಸೆಲ್ಫ್-ಗೌರ್ನಮೆಂಟಿನಲ್ಲೂ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಚೆನ್ನಾಗಿ ಕೆಲಸಮಾಡಬೇಕು, ಎಂಬ ತತ್ವದಲ್ಲೂ ಮಾನ್ಯ ಸರ್ಕಾರದವರಿಗೇನಾದರೂ ನಂಬಕೆ ಎಳ್ಳಷ್ಟಾದರೂ ಇದ್ದರೆ, ಕಾರ್ಯತಃ ಈ ತತ್ವವನ್ನು ಆಚರಣೆಗೆ ತರಲು ತಿದ್ದುಪಡಿ ತಂದರೆ ಮಾನ್ಯ ಸದಸ್ಯರೂ ಈ ಸಭೆಯೂ ಈ ಮಸೂದೆಯನ್ನು ಸ್ವಾಗತಿಸಿ ಬೆಂಬಲ ಕೊಡುತ್ತಾರೆ. ಅದು ಬಿಟ್ಟು ಬರುವ ಶೇಕಡ $12\frac{1}{2}$ಯಲ್ಲಿ, $6\frac{1}{4}$ ತೆಗೆಯಬೇಕೆಂದು ಇಷ್ಟಪಟ್ಟಿದ್ದಾರೆ. ಎರಡನೆಯ ಕ್ಲಾಜಿನಲ್ಲಿ ಹೀಗೆ ಹೇಳಿದೆ :—

"The Government shall assign to all the District Boards in the State an amount equal to $6\frac{1}{4}$ per cent of the land revenue collected in the State. The amount to be allotted to each district board being such as Government may from time to time determine."

ಇದೊಂದು ನಿಖರವಾಗಿ ಬರುತ್ತಿರುವ ಆದಾಯ. ಇದನ್ನು ತೆಗೆದುಹಾಕಬೇಕೆಂದು ಸೂಚಿಸಿದ್ದಾರೆ. ಇದಕ್ಕೆ ಕಾರಣ ಸರ್ಕಾರದವರು ಕೊಡುವುದು ನೋಡಿದರೆ ತೆಗೆದುಹಾಕುವುದಕ್ಕಿಂತ ಕಾರಣ ತೀರಾ ಆಭಾಸವಾಗಿದೆ. ಈಗ ಕೊಟ್ಟಿರುವುದು ಬಹಳ ಕ್ಷುಲ್ಲಕವಾದ ಕಾರಣ. ಏನು ಕಾರಣ ಹೇಳಿದರೆಂಬುದನ್ನು ಹೇಳಲು ಕೂಡ ನಾನು ಇಷ್ಟಪಡುವುದಿಲ್ಲ. ಅದು ಕಾರಣವಲ್ಲ, ನೆಪ. ಮತ್ತು ಪುನಃ ಸಮಿತಿ ದೃಷ್ಟಿಯಿಂದಲೇ ಇದನ್ನು ಕಡಮೆ ಮಾಡುವುದಾದರೆ, ಡಿಸ್ಟ್ರಿಕ್ಟ್ ಬೋರ್ಡ್ ಕೆಲಸ ಸಮಿತಿ ಮೂಲಕ ಮಾಡಿಸುತ್ತೇವೆಂದು ಹೇಳುವುದಾದರೆ ಅದು ಬಹಳ ಅಸಮಂಜಸ ಮತ್ತು ಎಲ್ಲಾ ದೃಷ್ಟಿಯಿಂದಲೂ ಅಂಥ ಒಂದು ನಿಲುವನ್ನು ಅಥವಾ ಮಾರ್ಗವನ್ನು ಸರ್ಕಾರ ತುಳಿಯಬಾರದು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ಕ್ಲಾಜನ್ನು ಡಿಲೀಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಸರ್ಕಾರ ಇದರ ಮುಖಾಂತರ ಜಿಲ್ಲಾ ಬೋರ್ಡುಗಳನ್ನೇ ಸಂಪೂರ್ಣವಾಗಿ ಮುಗಿಸುವುದಕ್ಕೆ ಪ್ರಯತ್ನ ಮಾಡಿದೆ ಎಂದು ನಾನು ಹೇಳಲೇಬೇಕಾಗುತ್ತದೆ.

ಶ್ರೀ ಪಟ್ಟಾಭಿರಾಮನ್‌ರವರು ನಿನ್ನೆ ಒಂದು ಸಲಹೆಯನ್ನು ಕೊಟ್ಟರು. ಅದು ಸೂಕ್ತವಾದ ಸಲಹೆಯೆಂದು ನಾನು ತಿಳಿದುಕೊಂಡಿದ್ದೇನೆ. ಡಿಸ್ಟ್ರಿಕ್ಟ್ ಬೋರ್ಡು ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿರುವವರು ಮಾತ್ರ ಓಟು ಮಾಡಬೇಕು, ಕನ್‌ಟೆಸ್ಟ್ ಮಾಡಬೇಕು ಎಂದು ಹೇಳಿದರು. ಇದರಿಂದ ಕೆಲವರಿಗೆ ಅಸಮಾಧಾನವುಂಟಾಗಬಹುದು ; ಮುನಿಸಿಪಲ್ ಲಿಮಿಟ್ಸಿನಲ್ಲಿರುವವರಿಗೆ ಮತ್ತು ಸಿಟಿಗಳಲ್ಲಿರುವವರಿಗೆ ಅಸಮಾಧಾನವಾಗಬಹುದು. ಅವರು ಕೆಲವುವೇಳೆ ಹಳ್ಳಿಗಳಲ್ಲಿ ತುಂಬಾ ಪ್ರೀತಿ, ಗೌರವ ಸಂಪಾದಿಸಿರಬಹುದು ಮತ್ತು ಹಳ್ಳಿಯವರೊಡನೆ ನಿಕಟ ಸಂಬಂಧವನ್ನು ಕೂಡ ಇಟ್ಟುಕೊಂಡಿರಬಹುದು. ಆದರೂ ಕೂಡ ಆ ರೀತಿ ಹೊರಗಡೆಯವರು ಅಲ್ಲಿ ಚುನಾವಣೆಗೆ ನಿಂತುಕೊಳ್ಳುವುದಕ್ಕೆ ಅವಕಾಶಮಾಡಿಕೊಟ್ಟರೆ ಅದರಿಂದ ನಮಗೆ ಗೊತ್ತಿರುವ ಹಾಗೆ ರಾಜಕೀಯವನ್ನೇ ಒಂದು ರೀತಿಯ ಜೀವನವನ್ನಾಗಿಟ್ಟುಕೊಂಡು ಹಾಗೂ ಜೀವನ ಮಾಡುವವರಿಗೆ ಅದು ಮತ್ತೊಂದು ರಂಗಸ್ಥಳವಾಗುತ್ತದೆಯೋ ಏನೋ. ಸಾಮಾನ್ಯವಾಗಿ ತಮ್ಮ ಹೋಬಳಿ ಕೆಲಸ ತಮ್ಮ ತಾಲ್ಲೂಕು ಕೆಲಸ ತಾವೇ ಮಾಡಿಕೊಳ್ಳೋಣ, ಅದಕ್ಕೇನಾದರೂ ಪ್ರಯತ್ನಮಾಡೋಣ ಎಂದು ಇಷ್ಟವಿರುವವರು ರಾಜಕೀಯ ಗೊಂದಲಕ್ಕೆ ಬೀಳದೆ ಹೋಗುವುದಿಲ್ಲ ; ಇಂಥವರಿಗೆ ಈ ಮೂಲಕ ಒಂದು ಅವಕಾಶ ಮಾಡುತ್ತಾರೋ ಏನೋ ಎಂಬ ಭಯವಿದೆ. ಪಟ್ಟಣಗಳಲ್ಲಿರುವವರಿಗೆ ಹಳ್ಳಿಯ ಸಂಬಂಧವಿರಕೂಡದೆಂದು ನನಗೆ ಅಭಿಪ್ರಾಯವಿಲ್ಲ. ಆ ರೀತಿಯಾಗಿ ನಿರ್ಬಂಧಪಡಿಸುವುದು ತಾತ್ವಿಕವಾಗಿ ವಿರೋಧವಾಗಿದ್ದರೂ ಈ ದಿವಸದ ಪರಿಸ್ಥಿತಿಯಲ್ಲಿ ಅದಕ್ಕೆ ಅವಕಾಶ ಕೊಟ್ಟರೆ ಪುನಃ ಕೆಲವರ ಕೈಲಿ ಸಿಕ್ಕಿ ರಾಜಕೀಯದ ಗೊಂದಲದಿಂದ ಉಪಕಾರವಾಗುವುದಕ್ಕೆ ಬದಲಾಗಿ ಜನರಿಗೆ ಅಪಕಾರವೇ ಆಗಬಹುದು. ಆ ದೃಷ್ಟಿಯಿಂದ ಮಾನ್ಯ ಮಿತ್ರರ ಸಲಹೆಯನ್ನು ಸರ್ಕಾರ ಒಪ್ಪಿ ಸೂಕ್ತವಾದ ತಿದ್ದುಪಡಿಯನ್ನು ಮಾಡುವುದು ಒಳ್ಳೆಯದು ಎಂದು ಅಭಿಪ್ರಾಯ ಪಡುತ್ತೇನೆ.

ಒಂದು ತಾಲ್ಲೂಕನ್ನು ಈಗಿರುವಂತೆ ಒಂದು ಯೂನಿಟ್ಟಾಗಿಟ್ಟುಕೊಂಡು ಮಲ್ಟಿಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿಯಾಗಿ ಮಾಡಬೇಕೆಂದು ಅಭಿಪ್ರಾಯಪಟ್ಟಿರುವುದು ಸರಿಯಲ್ಲ. ಇದರ ಸಾಧಕ ಬಾಧಕಗಳನ್ನು ಪರಿಶೀಲಿಸಿದರೆ ನಾವು ಶ್ರೀ ಭೀಮಪ್ಪನಾಯಕರು

(ಶ್ರೀ ಎಸ್. ಗೋಪಾಲಗೌಡ.)

ಕೊಟ್ಟಿರುವ ಸಲಹೆಯನ್ನೊಪ್ಪಿಕೊಳ್ಳುವುದು ಈ ಸಂದರ್ಭದಲ್ಲಿ ಸೂಕ್ತವೆಂದು ನನಗೆ ಕಾಣುತ್ತದೆ. ಏಕೆಂದರೆ ಪುನಃ 3 ಜನರನ್ನು ಒಂದು ತಾಲ್ಲೂಕಿಗೆ ಆರಿಸಬೇಕೆಂದರೆ ಜನರಲ್ ಎಲೆಕ್ಷನ್ನಿಗೆ ಯಾವರೀತಿ ಖರ್ಚು ಮಾಡಬೇಕಾಗುತ್ತದೆಯೋ ಅದೇ ರೀತಿ ಖರ್ಚು ಮಾಡಬೇಕಾಗುತ್ತದೆ; ಮತ್ತು ಸಾಮಾನ್ಯವಾಗಿ ತಾಲ್ಲೂಕುಗಳಲ್ಲಿ ಪ್ರಭಾವವನ್ನು ಬೆಳೆಸಿರುವವರು ಅಂಥ ಚುನಾವಣೆಗಳಿಗೆ ನಿಲ್ಲಬೇಕಾದ ಪ್ರಸಂಗವೂ ಬರಬಹುದು. ಒಬ್ಬರಿಗಿಂತ ಹೆಚ್ಚು ಜನರನ್ನು ಆರಿಸಬೇಕಾದ ಸಂದರ್ಭ ಬರುವುದರಿಂದ ಓಟು ಮಾಡುವವರಿಗೆ ಈ ರೀತಿಯ ಕನ್‌ಫ್ಯೂಷನ್ ಕೂಡ ಬರುತ್ತದೆ. ಸಾಮಾನ್ಯವಾಗಿ ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿಯನ್ನು ಡೀ ಲಿಮಿಟ್ ಮಾಡಿದರೆ ಅದರಿಂದ ಹೆಚ್ಚಿನ ಸೌಲಭ್ಯವಾಗುವುದೂ ಅಲ್ಲದೆ ಆರಿಸಿ ಬರುವ ಪ್ರತಿನಿಧಿಗಳು ತಮ್ಮ ಕ್ಷೇತ್ರದ ನಿಕಟ ಸಂಬಂಧವನ್ನಿಟ್ಟುಕೊಂಡು ಕೆಲಸ ಮಾಡಲೂ ಸಹ ಅನುಕೂಲವಾದೀತು. ಇದು ಪರಿಶೀಲಿಸಬೇಕಾದ ವಿಷಯ. ಈ ದಿವಸ ಕಾನ್‌ಸ್ಟಿಟ್ಯೂಯೆನ್ಸಿ ಡೀ ಲಿಮಿಟ್ ಮಾಡುವುದು ಬಹಳ ಕಷ್ಟವಾದ ಕೆಲಸವಾಗುತ್ತದೆ; ಒಂದೊಂದು ಹೋಬಳಿಯನ್ನು ಒಡೆಯಬೇಕಾದ ಪ್ರಸಂಗಗಳು ಬರಬಹುದು. ಆಗ ಕೆಲವು ಹೋಬಳಿ ಜನರು ಇನ್ನೊಂದು ಹೋಬಳಿಗೆ ಸೇರುವುದಕ್ಕೆ ಇಷ್ಟಪಡದೆ ಹೋಗಬಹುದು. ಹೀಗೆ ಡೀ ಲಿಮಿಟ್ ಮಾಡುವ ಸಮಸ್ಯೆ ಪುನಃ ಕಂಡರೆ ಎದೆಗೆಡಬಹುದು ಎಂಬ ಭಯ ಕೂಡ ಇನ್ನೊಂದು ಕಡೆ ಇದೆ. ಈ ದಿವಸ ತಾಲ್ಲೂಕನ್ನು ನಾವು ಬೇಸಿಸ್ಸಾಗಿಟ್ಟರೆ ಶೃಂಗೇರಿಯಲ್ಲಿ 10 ಸಾವಿರ ಜನಸಂಖ್ಯೆಯಿದೆ ತುಮಕೂರು ತಾಲ್ಲೂಕಿನಲ್ಲಿ 1,86,000 ಜನಸಂಖ್ಯೆಯಿದೆ, ಬಳ್ಳಾರಿ ತಾಲ್ಲೂಕಿನಲ್ಲಿ 1,70,000 ಜನಸಂಖ್ಯೆಯಿದೆ. ತಾಲ್ಲೂಕಿನ ಜನಸಂಖ್ಯೆ ಮೇಲೆ ನಾವು ಸ್ಥಾನ ನಿಗದಿ ಮಾಡುವಾಗ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳು ಹೆಚ್ಚು ಪ್ರಾತಿನಿಧ್ಯವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ, ಮತ್ತೆ ಕೆಲವು ತಾಲ್ಲೂಕುಗಳಿಗೆ ಸ್ವಾಭಾವಿಕವಾಗಿ ಯಾವ ಪ್ರಾತಿನಿಧ್ಯವೂ ದೊರೆಯುವುದಿಲ್ಲ. ಏಕೆ ಸಾಕಷ್ಟು ಪ್ರಾತಿನಿಧ್ಯ ಬರುವುದಿಲ್ಲವೆಂದರೆ ಜನಸಂಖ್ಯೆ ಆಧಾರದಮೇಲೆ ಸಣ್ಣ ಮತ್ತು ದೊಡ್ಡ ತಾಲ್ಲೂಕುಗಳಿವೆ. ಅದನ್ನು ಡೀಲಿಮಿಟ್ ಮಾಡುವ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಸಂದರ್ಭದಲ್ಲಿ- -ಈಗಾಗಲೆ ಶ್ರೀ ಹುಚ್ಚೇಗೌಡರು 30 ಸಾವಿರ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಸಿಂಗಲ್‌ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡಬೇಕೆಂದು ದ್ದುಪಡಿ ಸೂಚಿಸಿದ್ದಾರೆ,—ಆ ತಿದ್ದುಪಡಿಯನ್ನು ಕೂಡ ಪರಿಶೀಲಿಸಿ ಅದು ಸೂಕ್ತವಾಗಿ ಕಂಡುಬಂದರೆ ಅದನ್ನು ಒಪ್ಪಿಕೊಳ್ಳುವುದರಲ್ಲಿ ಹೆಚ್ಚಿನ ಅನುಕೂಲವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಡೀ ಲಿಮಿಟ್ ಮಾಡುವಾಗ ಕಷ್ಟ ಬಂದರೆ ಕಾರ್ಯತಃ ಏರ್ಪಾಡು ಮಾಡಲು ತೊಂದರೆಯಾಗುತ್ತದೆ. ಡೀ ಲಿಮಿಟ್‌ಮಾಡಬೇಕಾದರೂ ಈಗಿರುವ ಜನರಲ್ ಎಲೆಕ್ಷನ್ನಿನ ಎಲೆಕ್ಟರಲ್ ರೋಲ್ ಏನಿದೆಯೋ ಅದನ್ನೇ ಉಪಯೋಗಿಸುವುದರಿಂದ ಆ ಕೆಲಸ ತಪ್ಪುತ್ತದೆ. ಈಗ ಹೋಬಳಿಗಳಲ್ಲಿ 30 ಸಾವಿರ ಜನಸಂಖ್ಯೆಯಿದೆ. ಕೆಲವುಕಡೆ ಎರಡು, ಕೆಲವುಕಡೆ 3-4 ಹೋಬಳಿ ಸೇರಿಸಬಹುದು. ಡೀ ಲಿಮಿಟ್ ಮಾಡಿದರೆ 30 ಸಾವಿರ ಜನರಿಗೆ 15 ಸಾವಿರ ಓಟರುಗಳಾಗುತ್ತಾರೆ. ಷೆಡ್ಯೂಲನ್ನು ತೆಗೆಯಬೇಕೆಂದು ಸರ್ಕಾರ ಸೂಚನೆ ಮಾಡಿದೆ: ಹಾಗೆ ಮಾಡುವಾಗ ಈ ಷೆಡ್ಯೂಲನ್ನು ಬಿಟ್ಟು ಇದರ ಪರಿಮಿತಿಯಲ್ಲೇ ಕಾನ್‌ಸ್ಟಿಟ್ಯೂಯೆನ್ಸಿಗಳನ್ನು ರಚಿಸಿದರೆ ಅದರಿಂದ ಡಿಸ್ಟ್ರಿಕ್ಟ್ ಬೋರ್ಡಿನ ರಚನೆ ಸಮರ್ಪಕವಾಗುತ್ತದೆಂಬುದು ನನ್ನ ಅಭಿಪ್ರಾಯ. ಈ ಮಸೂದೆಯ ಕೊನೆಯ ಪುಟದಲ್ಲಿರುವಂತೆ, ಕಾಂಪೊಸಿಷನ್ ಆಫ್ ಡಿಸ್ಟ್ರಿಕ್ಟ್ ಬೋರ್ಡ್ಸ್‌ನಲ್ಲಿ 50 ನೆಯ ಸೆಕ್ಷನ್‌ಗೆ ಸಂಬಂಧಪಟ್ಟ ಹಾಗೆ ನಾಲ್ಕನೆಯ ಷೆಡ್ಯೂಲಿನಲ್ಲಿ ಬೆಂಗಳೂರಿಗೆ 40, ಮೈಸೂರಿಗೆ 36, ಮಂಡ್ಯಕ್ಕೆ 25, ಹಾಸನಕ್ಕೆ 23, ಶಿವಮೊಗ್ಗಕ್ಕೆ 20, ಚಿಕ್ಕಮಗಳೂರಿಗೆ 20, ಚಿತ್ರದುರ್ಗಕ್ಕೆ 29, ತುಮಕೂರಿಗೆ 40 ಮತ್ತು ಕೋಲಾರಕ್ಕೆ 34 ಸದಸ್ಯರೆಂದು ಹೇಳಿದೆ; ಬಳ್ಳಾರಿ ವಿಚಾರ ಹೇಳಿಲ್ಲ. ಹೀಗೆ ಒಂದು ಲಿಮಿಟ್ ಇಟ್ಟು ಅದಕ್ಕೆ ಕಡಿಮೆಯಾಗದಹಾಗಿರಬೇಕೆಂದು ಹೇಳಿದೆ. ಒಂದುವೇಳೆ ಜನಸಂಖ್ಯೆ ಕಡಮೆಯಿರುವ ತಾಲ್ಲೂಕುಗಳಿಗೆ ಪ್ರಾತಿನಿಧ್ಯ ಸಿಕ್ಕುತ್ತದೆಂಬುದನ್ನು ಗಮನಿಸಿ ಸೆಕ್ಷನ್ 50ನ್ನು ತಿದ್ದುಪಡಿ ಮಾಡುತ್ತೇವೆ ಎಂಬ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ 30 ಸಾವಿರಕ್ಕೆ ಒಂದು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡುವುದು ಸೂಕ್ತ. ಆಮೇಲೆ ಬರೀ ರೆವೆನ್ಯೂ ತಾಲ್ಲೂಕಿದ್ದರೆ ಅದರಲ್ಲಿ ಹೇಗೆ ಡಿಸ್ಟ್ರಿಕ್ಟ್ ಬೋರ್ಡ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡಬೇಕೆಂಬ ಬಗ್ಗೆ ಒಂದು ತಿದ್ದುಪಡಿಯಿರುವುದು ಈ ರೀತಿಯಿದೆ :—

"51 *District Board Constituencies.*— (1) Every Revenue Taluk (excluding such portions of the taluk as included in a Municipality or area under the authority of a sanitary Board or a Town Board) in the District shall be a constituency and each such constituency shall elect such number of members not exceeding three having regard to the population of each constituency, as the Government may, by notification under sub-section (2), determine."

ಈಗ ತುಮಕೂರಿನಲ್ಲಿ, ಒಂದು ತಾಲ್ಲೂಕಿನಲ್ಲಿ ಸುಮಾರು 1,80,000 ಜನಸಂಖ್ಯೆ ಇದೆ. 3ಕ್ಕೆ ಮೀರದಂತೆ ಎಂದರೆ ಅಲ್ಲಿಗೆ ಪ್ರಾತಿನಿಧ್ಯ ಕಮ್ಮಿ ಆಗುತ್ತದೆ. ಆ ಕಾರಣದಿಂದ, ಜನಸಂಖ್ಯೆಯ ಆಧಾರದ ಮೇಲೆಯೇ ಒಂದು ವ್ಯವಸ್ಥೆಮಾಡಿ ಕ್ಷೇತ್ರಗಳನ್ನು ರಚಿಸಿ ಅದರ ಮೇಲೆ ಒಬ್ಬೊಬ್ಬರು ಒಂದೊಂದು ಕ್ಷೇತ್ರಕ್ಕೆ ನಿಲ್ಲಬೇಕೆಂದು ತೀರ್ಮಾನ ಮಾಡುವುದು ಹೆಚ್ಚು ಸುಗಮ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಇದೇ ಸಂದರ್ಭದಲ್ಲಿ ನಿಮ್ನ ವರ್ಗದವರಿಗೆ ಸ್ಥಳವನ್ನು ಕಾದಿಡುವುದಕ್ಕೆ ವ್ಯವಸ್ಥೆಮಾಡಿದೆ. ಸ್ಥಳವನ್ನು ಕಾದಿಡುವಾಗ ಯಾವರೀತಿ ಕಾದಿಡಬೇಕು ಎನ್ನುವುದು ಕೂಡ ಒಂದು ಸಮಸ್ಯೆ. ಈಗ ಸಾಮಾನ್ಯವಾಗಿ ಟೌನ್ ಮುನಿಸಿಪಾಲಿಟಿಗಳಲ್ಲಿ ಅವರಿಗೆ ಒಂದು ಕಾಲೊನಿ ಅಥವಾ ಪ್ರದೇಶ ಇರುತ್ತದೆ. ಆ ಪ್ರದೇಶದಲ್ಲಿ ಅವರು ಹೆಚ್ಚಾಗಿರುತ್ತಾರೆ. ಆ ಸ್ಥಳವನ್ನು ರಿಸರ್ವ್ಡ್ ಸೀಟ್ ಎಂದು ಕರೆದು ಅಂಥವರೇ ನಿಲ್ಲಬೇಕೆಂದು ಹೇಳುತ್ತಾರೆ. ಆ ರೀತಿ ಒಂದು ಕ್ಷೇತ್ರವನ್ನು ಜಿಲ್ಲಾದ್ಯಂತ ಅಥವಾ ತಾಲ್ಲೂಕುಗಳಲ್ಲಿ ರಚನೆಮಾಡುವುದು ಕಷ್ಟ. ಯಾವ ಸ್ಥಳವನ್ನು ರಿಸರ್ವ್ ಆಗಿಡಬೇಕೆಂಬುದು ಕಷ್ಟಕ್ಕೆ ಬರುತ್ತದೆ. ಆ ಸಂದರ್ಭದಲ್ಲಿ ನಾವೇನು ಸಲಹೆ ಕೊಡಬಹುದು ಎಂದರೆ, ಈಗ ಸಾಮಾನ್ಯವಾಗಿ ಸಿಂಗಲ್‌ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಮಾಡಿದರೆ,

ಯಾವ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಹೆಚ್ಚು ಜನ ನಿಮ್ಮ ವರ್ಗದವರು ಇರುತ್ತಾರೋ ಆ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಅವರೂ ಕೂಡ ಒಬ್ಬರು ಚುನಾವಣೆಗೆ ಇತರರೊಡನೆ ನಿಂತುಕೊಳ್ಳಬೇಕು. ಅಲ್ಲಿ ಓಟುಮಾಡತಕ್ಕವರು ಜನರಲ್ ಸೀಟಿಗೆ ಓಟುಮಾಡುವವರೆ ನಿಮ್ಮ ವರ್ಗದವರಿಗೂ ಕೂಡ ಓಟು ಮಾಡುತ್ತಾರೆ ಎಂದು ಇಟ್ಟುಕೊಂಡು ಆ ರೀತಿ ವ್ಯವಸ್ಥೆ ಮಾಡುವುದರಿಂದ ಅವರಿಗೆ ಸ್ಥಾನವನ್ನು ಮೀಸಲಾಗಿಟ್ಟಂತೆ ಆಗುತ್ತದೆ; ಮತ್ತು ಚುನಾವಣೆಯೂ ಕೂಡ ಸುಗಮವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಹಾಗಲ್ಲದೆ ಡಬ್ಬಲ್‌ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಿದರೆ ಆಗಲೂ ಖರ್ಚು ಜಾಸ್ತಿ ಆಗುತ್ತದೆ. ಅವರಿಗಾಗಿ ಒಂದು ಸ್ಥಾನ ಮೀಸಲಾಗಿಡಬೇಕೆಂಬ ಕಾರಣದಿಂದಲೆ ನಾವು ಈಗ ಹೇಗೆ ಅಸೆಂಬ್ಲಿಗೆ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಿಕೊಂಡಿದ್ದೇವೆಯೋ ಆ ರೀತಿ ಮಾಡುವುದರಿಂದ ಹೆಚ್ಚು ಖರ್ಚಾಗುತ್ತದೆ. ಆದ್ದರಿಂದ ರಿಸರ್ವ್ಡ್‌ಸೀಟ್ ಕಲ್ಪಿಸಿಕೊಡುವಾಗ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಿಕೊಂಡು ಯಾವ ಕ್ಷೇತ್ರದಲ್ಲಿ ಹೆಚ್ಚು ನಿಮ್ಮ ವರ್ಗದವರ ಜನಸಂಖ್ಯೆ ಇದೆಯೋ ಆ ಕ್ಷೇತ್ರದಲ್ಲಿ ನಿಮ್ಮ ವರ್ಗದವರ ಸದಸ್ಯರಿಗೆ ಅವಕಾಶಮಾಡಿ ಕೊಟ್ಟರೆ ಅದರಿಂದ ಹೆಚ್ಚು ಖರ್ಚು, ಮತ್ತು ಶ್ರಮ ಇಲ್ಲದೆ ಅವರಿಗೆ ಪ್ರಾತಿನಿಧ್ಯವನ್ನು ಒದಗಿಸಿಕೊಡಬಹುದಾಗಿದೆ.

ಇನ್ನು ನೇರವಾದ ಚುನಾವಣೆಯನ್ನು ನಡೆಸಬೇಕೇ ಅಥವಾ ಅಪ್ರತ್ಯಕ್ಷವಾದ ಚುನಾವಣೆಯನ್ನು ನಡೆಸಬೇಕೇ ಎನ್ನುವುದರಲ್ಲಿ ಬಹಳವಾಗಿ ಭಿನ್ನಾಭಿಪ್ರಾಯ ಬಂತು. ಇವತ್ತು ನೇರವಾದ ಚುನಾವಣೆ ನಡೆಸಬೇಕೆಂಬ ಅಭಿಪ್ರಾಯಪಟ್ಟಿದ್ದೇವೆ ಎಂಬುದಾಗಿ ಸರ್ಕಾರದವರು ತಿದ್ದುಪಡಿ ತಂದಿದ್ದಾರೆ. ಸಾಮಾನ್ಯವಾಗಿ ಸರ್ಕಾರದವರು ಶ್ರೀಮಾನ್ ವೆಂಕಟಪ್ಪನವರ ಸಮಿತಿಯ ಸಲಹೆಗಳಲ್ಲಿ ಕಂಡ ದೊಡ್ಡ ನ್ಯೂನತೆ ಅಥವಾ ಅದರ ಆಧಾರದಮೇಲೆ ಕಂಡು ಬಂದ ನ್ಯೂನತೆ ಬಹುಶಃ ಇದೇ ಎಂದು ಕಾಣುತ್ತದೆ. ಇದರಲ್ಲಿ ಕೆಲವರು ಪರೋಕ್ಷವಾಗಿ ಚುನಾವಣೆ ನಡೆಸಬೇಕೆಂದು ಹೇಳಿದರು. ಶ್ರೀ ಮಾನ್ ಪಟ್ಟಾಭಿರಾಮನ್‌ರವರು ಪರೋಕ್ಷವಾದ ಚುನಾವಣೆಯನ್ನು ಪ್ರತಿಪಾದನೆ ಮಾಡಿದರು. ಅವರ ದೃಷ್ಟಿಕೋಣ ಬಹುಶಃ ಬೇರೆ ಇರಬೇಕು. ಮತ್ತು ಗ್ರಾಮಪಂಚಾಯಿತಿಗಳಿಗೆ ಚುನಾವಣೆ ನಡೆಸುವ ರೀತಿಯಲ್ಲೂ ಕೂಡ ಅವರ ಅಭಿಪ್ರಾಯಬೇರೆಯಾಗಿದೆ. ಆ ಸರ್ವೋದಯ ದೃಷ್ಟಿಕೋಣದಿಂದ ಇವೊತ್ತು ಚುನಾವಣೆಗಳನ್ನು ಜಾರಿಗೆತರುವುದು ಕಾರ್ಯತಃ ಕಷ್ಟವಾಗಿದೆ. ಅಂದರೆ ಆ ದಿಕ್ಕಿನಲ್ಲೇ ಹೋಗಬಾರದು ಎಂದು ನನ್ನ ಅಭಿಪ್ರಾಯವಲ್ಲ. ಆ ಆದರ್ಶ ಕಾರ್ಯತಃ ಜಾರಿಗೆಬರುವಾಗ, ನಿರ್ಮೋಹ ದೃಷ್ಟಿಯಿಂದ, ಪಕ್ಷಾತೀತ ದೃಷ್ಟಿಯಿಂದ, ಸೇವಾ ಮನೋಭಾವದಿಂದ, ನಮ್ಮವರು, ನಾವು ಇನ್ನೂ ಅಷ್ಟುಮಟ್ಟಿಗೆ ಮುಂದುವರಿದಿಲ್ಲ. ಆದ್ದರಿಂದ ಇವೊತ್ತು ನಾವು ಇನ್ನೂ ಕೆಲವು ನಿಯಮಗಳನ್ನು ಇಟ್ಟುಕೊಂಡು, ಈ ಚುನಾವಣೆಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ನಾಗರೀಕದೇಶಗಳಲ್ಲಿ ಅನುಸರಿಸಬೇಕಾದ ಕೆಲವು ಪದ್ಧತಿಗಳನ್ನು ಅನುಸರಿಸಲೇಬೇಕಾಗಿದೆ. ಬ್ಯಾಲೆಟ್ ಬಾಕ್ಸ್ ಇಟ್ಟುಕೊಳ್ಳುವುದು, ಪ್ರಚಾರ ಮಾಡುವುದು, ಯಾರ್ಯಾರು ಅರ್ಜಿಹಾಕುತ್ತಾರೆ ಎಂದು ಕೇಳುವುದು ಅರ್ಜಿಯನ್ನು ಸೂಕ್ತವಾಗಿ ತೀರ್ಮಾನಮಾಡಿ, ಇಂತಹವರು ಚುನಾವಣೆಯಾಗಿ ಬಂದರು, ಇಂತಹವರು ಬರಲಿಲ್ಲ ಎಂದು ಹೇಳುವುದು ಇದೆಲ್ಲಾ ಅಗಲೇ ಬೇಕು. ಒಂದು ವೇಳೆ ತೀರ ಸೇವೆಮಾಡತಕ್ಕ ಬಹಳ ಒಳ್ಳೆಯ ಮನುಷ್ಯ ಸೋತುಹೋಗಬಹುದು. ಅಂದಮಾತ್ರಕ್ಕೆ ಒಳ್ಳೆಯ ಮನುಷ್ಯನನ್ನು ಸೋಲಿಸಿ, ಸೇವೆಮಾಡುವುದಕ್ಕೆ ಅನರ್ಹನಾಗಿರುವವನನ್ನು ಆರಿಸಿದ್ದೀರಿ ಎಂದು ಯಾರೂ ಪ್ರಶ್ನೆಮಾಡುವಹಾಗಿಲ್ಲ. ಒಂದು ತತ್ವ ಒಪ್ಪಿಕೊಂಡಮೇಲೆ ಕೆಲವು ಅಡ್ಡಿ ಆತಂಕಗಳು ಅದರಲ್ಲಿ ಇದ್ದರೂ ಕೂಡ ಸಹಿಸಿಕೊಂಡು ಮುಂದೆಹೋಗಬೇಕಾಗುತ್ತದೆ. ಇದು ಪ್ರಜಾಪ್ರಭುತ್ವದಲ್ಲಿ ಇವೊತ್ತು ನಡೆಯುತ್ತ ಇರುವ ರೀತಿ. ಅಪ್ರತ್ಯಕ್ಷ ಚುನಾವಣೆ ನಡೆಯಬೇಕೆಂಬ ಅಭಿಪ್ರಾಯಕ್ಕೆ ನನ್ನ ಸಮ್ಮತಿ ಇಲ್ಲ, ಎಂದರೆ ಪ್ರತ್ಯಕ್ಷವಾಗಿ ಚುನಾವಣೆ ನಡೆಯಬೇಕೆಂಬುದು ಸಮಂಜಸವಾಗಿದೆ. ಮತ್ತು ಅದು ಪ್ರಜಾಪ್ರಭುತ್ವಕ್ಕೆ ಹೆಚ್ಚುಕಳೆಯನ್ನು ಕೊಡುತ್ತದೆಯೇ ಹೊರತು, ಅಪ್ರತ್ಯಕ್ಷವಾಗಿ ಚುನಾವಣೆ ನಡೆದರೆ ಅದರಿಂದ ಆಗುವ ತೊಂದರೆ ನಮಗೆ ಬಹಳ ಹೆಚ್ಚು. ಖಾಯಿಲೆಗಿಂತ, ಮದ್ದೇ ಜಾಸ್ತಿ ಎನ್ನುವಹಾಗೆ ಆಗಿದೆ. ನಾವು ನೋಡಿದ್ದೇವೆ, ಕೆಲವು ಮುನಿಸಿಪಾಲಿಟಿಗಳಲ್ಲಿ ಹಣಕ್ಕೆ ಕೆಲವರು ಓಟುಗಳನ್ನು ಕೊಂಡುಕೊಳ್ಳುವುದು ಮತ್ತು ಇತರ ಪ್ರಭಾವಗಳಿಗೆ ಒಳಗಾಗುವುದು ಇವೆಲ್ಲಾ ಇರುತ್ತವೆ. ಆದ್ದರಿಂದ 10 ಜನ ಗ್ರಾಮಪಂಚಾಯಿತಿ ಸದಸ್ಯರನ್ನು ನಾನು ಸ್ವಲ್ಪ ಚೆನ್ನಾಗಿಟ್ಟುಕೊಂಡರೆ ನನಗೆ ಒಂದು ಸ್ಥಾನ ಜಿಲ್ಲಾಬೋರ್ಡಿನಲ್ಲಿ ಖಾಯಂ ಎಂದೇ ತಿಳಿದುಕೊಳ್ಳಬಹುದು. ಅಂತಹ ಪರಿಸ್ಥಿತಿಗಳಿಗೆ ನಾವು ಅವಕಾಶಕೊಡದೆ ಇರಬೇಕಾದರೆ ಸಾಮಾನ್ಯ ಜನತೆಗೆ ನೇರವಾದ ಚುನಾವಣೆ ಮಾಡತಕ್ಕ ಒಂದು ಅವಕಾಶ ಕಲ್ಪಿಸಿಕೊಟ್ಟರೆ, ನೇರವಾದ ಚುನಾವಣೆ ಇದ್ದರೆ ಸಾಮಾನ್ಯವಾಗಿ ಅಂಥಾ ಪ್ರಭಾವಗಳಿಗೆ ಅವರು ಕೈಹಾಕುವುದಿಲ್ಲ. ಇಲ್ಲದೇ ಇದ್ದರೆ ಏನಾಗುತ್ತದೆ ಎಂದರೆ 10 ಗ್ರಾಮದಲ್ಲಿ ಯಾವ ಪಾರ್ಟಿಯವರು ಇರುತ್ತಾರೋ ಅವರೇ ಚುನಾವಣೆಯಾಗಿ ಬರಬೇಕಾಗುತ್ತದೆ; ಅಂಥ ಒಂದು ತೀರ್ಮಾನವೇ ಆಗುತ್ತದೆ. 200-300-500 ಜನರ ಓಟಿನ ಆಧಾರದ ಮೇಲೆ ಒಬ್ಬ ಜಿಲ್ಲಾಬೋರ್ಡಿಗೆ ಬರುವುದಾದರೆ-ನಿನ್ನೆಕೂಡ ಮಾನ್ಯ ಸದಸ್ಯರೊಬ್ಬರು ಆ ವಿಷಯ ಹೇಳಿದರು. ಓಟು ಖರೀದಿಮಾಡಿ ಅವರೇ ಬಂದು ಬಿಡುತ್ತಾರೆ, ಆದ್ದರಿಂದ ಉದ್ದೇಶ ಸಾರ್ಥಕವಾಗುವುದಿಲ್ಲ. ಮತ್ತು ಜನತೆಗೆ ಇದರಿಂದ ಯಾವ ಸೇವೆಯೂ ದೊರೆಯುವುದಿಲ್ಲ; ಖರ್ಚುಮಾಡಿ ಬಂದಿರುತ್ತಾರೆ, ಆ ಖರ್ಚು ಇಲ್ಲಿ ಹುಟ್ಟಿಸಿಕೊಳ್ಳಲೇ ಬೇಕಾಗುತ್ತದೆ. As a matter of right and fact he will do it. ಆ ಹಣ ಇವತ್ತು ದುಡಿದುಕೊಳ್ಳಬೇಕು, ಅದಕ್ಕೆ ಇದೇ ಕ್ಷೇತ್ರ ಎಂದು ತೀರ್ಮಾನ ಮಾಡುತ್ತಾರೆ, ಘಂಟಾಘೋಷವಾಗಿ ಹೇಳಿ ದುಡ್ಡು ಮಾಡಿಕೊಳ್ಳುತ್ತಾರೆ. ಆದ್ದರಿಂದ ಅಲ್ಲಿ ಕರಪ್ಷನ್‌ಗೂ ಮತ್ತು ಬೇರೆಬೇರೆ ಅಕ್ರಮಗಳಿಗೂ ಅವಕಾಶವಾಗುತ್ತದೆ. ಅಂಥಾದ್ದಕ್ಕೆ ನಾವು ಅವಕಾಶ ಕೊಡಬಾರದು. ಅದನ್ನು ಸಾಧ್ಯವಾದಷ್ಟು ತಪ್ಪಿಸುವುದಕ್ಕೆ ನಾವು ಏನುಮಾಡಬೇಕೆಂದರೆ, ನೇರವಾದ ಚುನಾವಣೆಗಳನ್ನು ನಡೆಸಿ ಅದರಲ್ಲಿ ಸಾಧ್ಯವಾದ ಮಟ್ಟಿಗೂ ನಿಸ್ಪೃಹರಾಗಿರತಕ್ಕವರನ್ನು ಆರಿಸುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡುವುದು ಸೂಕ್ತವಾಗಿದೆ. ಆದ್ದರಿಂದ ನೇರವಾದ ಚುನಾವಣೆ ನಡೆಯುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು ಅಗತ್ಯ ಎಂದು ಹೇಳುತ್ತೇನೆ.

ಆಮೇಲೆ ಇನ್ನೊಂದು ಸಲಹೆಯನ್ನು ಕೂಡ ಈಗಲೇ ಸೂಚನೆಮಾಡುವುದು ಒಳ್ಳೆಯದು. ನ್ಯಾಯವಾದ ಅರ್ಜಿಗಳನ್ನು ತಿರಸ್ಕರಿಸಿ, ಅಕ್ರಮವಾದ ಅರ್ಜಿಗಳನ್ನು ಪುರಸ್ಕರಿಸಿ ತೆಗೆದುಕೊಂಡ ಸಂದರ್ಭ ಬಂದರೆ, ಚುನಾವಣೆ ಆದಮೇಲೆ ಇತ್ಯರ್ಥ ಮಾಡುವುದಕ್ಕಿಂತ—ಶ್ರೀಮಾನ್ ಪಟ್ಟಾಭಿರಾಮನ್‌ರವರೂಕೂಡ ಹೇಳಿದ್ದಾರೆ—ಅಸೆಂಬ್ಲಿ

(ಶ್ರೀ ಎಸ್. ಗೋಪಾಲಗೌಡ.)

ಮತ್ತು ಪಾರ್ಲಿಮೆಂಟ್‌ಗೆ ಸಂಬಂಧಪಟ್ಟ ವಿವಾದಗಳ ರೀತ್ಯಾ ಇತ್ಯರ್ಥಮಾಡಬೇಕೆಂದು ಈಗ ಚರ್ಚೆನಡೆದಿದೆ. ಆದ್ದರಿಂದ ಈ ಸಂದರ್ಭದಲ್ಲಿ ಜಿಲ್ಲಾ ಬೋರ್ಡಿಗೆ ಚುನಾವಣೆ ನಡೆಯುವಾಗಲೂ ಕೂಡ ಬರಬಹುದಾದ ವಿವಾದಗಳನ್ನು calendar of events ಹಾಕಿ ಕೊಂಡು ತೀರ್ಮಾನಮಾಡುವುದು ಒಳ್ಳೆಯದು. ಮುಂದೆ ಚುನಾವಣೆ ಆಗಿ ವಿವಾದ ಬಂದು ಅರ್ಜಿಹಾಕಿ ಆಗ ಬಹುದಾದ ತೊಂದರೆಯನ್ನು ಹೋಗಲಾಡಿಸಿಕೊಳ್ಳ ಬಹುದು ಎಂಬುದು ನನ್ನ ಅಭಿಪ್ರಾಯವೂಕೂಡ ಆಗಿದೆ. ಒಟ್ಟಿನಲ್ಲಿ ಈ ಮಸೂದೆಯಲ್ಲಿ ಇನ್ನೂ ಕೆಲವು ತಿದ್ದುಪಡಿಗಳನ್ನು ಸರ್ಕಾರದವರು ಸೂಚಿಸಿದ್ದಾರೆ. ಮುಖ್ಯವಾದ ತಿದ್ದುಪಡಿಗಳಮೇಲೆ ಈಗ ನಾನು ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ಆದರೆ ಈ ಸರ್ಕಾರದ ಮನೋಭಾವ ಏನಿದೆ, ಇದು ಪೂರ್ಣ ಬದಲಾವಣೆ ಯಾಗದೇ ಹೋದರೆ, ಈ ರೀತಿಯಲ್ಲೇ ನಡೆದುಕೊಂಡು ಹೋದರೆ, ಇದರಿಂದ ದೇಶಕ್ಕೆ ಹಾನಿಯುಂಟಾಗುತ್ತದೆ ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳ ಬೇಕಾಗಿದೆ. ಏಕೆಂದರೆ ಇಷ್ಟು ದಿವಸ ಕಾಲವಿಳಂಬ ಮಾಡಿರುವುದೂಕೂಡ, ಅನೇಕ ಜಿಲ್ಲಾಬೋರ್ಡಿನ ಕೆಲಸಗಳು ನಿಂತುಹೋಗಿರುವುದಕ್ಕೆ ಕಾರಣವಾಗಿದೆ. ಇವತ್ತು ರಸ್ತೆಗಳನ್ನು ಯಾರು ನೋಡಿ ಕೊಳ್ಳಬೇಕು ಎನ್ನುವುದು ನಿಗದಿಯಾಗದೆ ಅನೇಕರಸ್ತೆ ಗಳುಕಾಂಗಾರಿಯಾಗದೆ ಹೋಗಿದೆ. ಆದ್ದರಿಂದ ಇದನ್ನು ಇನ್ನೂ ವಿಳಂಬಮಾಡಬೇಕು ಎಂದು ಹೇಳಿ ಯಾರಿಗೂ ಅಭಿಪ್ರಾಯವಿಲ್ಲ. ಈ ಸುಧಾರಣೆಗಳನ್ನು ಜಾರಿಗೆ ತರುವಾಗ ಅಥವಾ ಒಂದು ಕಾನೂನನ್ನು ತಿದ್ದುಪಡಿಮಾಡುವಾಗ ದೂರ ಮತ್ತು ವಿಶಾಲದೃಷ್ಟಿಯನ್ನಿಟ್ಟುಕೊಂಡು ಮಾಡಬೇ ಕಾದ್ದು ಬಹಳ ಸೂಕ್ತವಾದದ್ದು. ಇವೊತ್ತು ನನ್ನ ಹಿತದೃಷ್ಟಿಯಿಂಥ, ನಮ್ಮವರ ಹಿತದೃಷ್ಟಿಯಿಂದ ಕಾನೂ ನುಮಾಡುವುದಾಗಲೀ ಅಥವಾ ನಮ್ಮ ಮೂಗಿನ ನೇ ರಕ್ಕೆ ಒಂದು ಅಭಿಪ್ರಾಯವನ್ನು ಕೊಟ್ಟುಬಿಡುವುದಾಗ ಲೀ ಸೂಕ್ತವಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಇದನ್ನೆಲ್ಲಾ ಪರಿಶೀಲನೆ ಮಾಡಿ ಹೆಚ್ಚು ವ್ಯವಸ್ಥಿತವಾದ ರೀತಿಯಲ್ಲಿ ಈ ಜಿಲ್ಲಾಬೋರ್ಡುಗಳನ್ನು ಪುನರಚನೆ ಮಾಡುವುದಕ್ಕೂ ಮತ್ತು ಪುನರುದ್ಧಾರ ಮಾಡುವು ದಕ್ಕೂ ಪ್ರಯತ್ನವನ್ನು ಮಾಡಬೇಕು. ಇವತ್ತು ಇರ ತಕ್ಕ ಕಾನೂನು ಅದರೂಕೂಡ ಸಮರ್ಪಕವಾಗಿಥೆ ಎಂದು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಸೂಪರ್ ಸೆಷನ್ ಮಾಡುವುದು ಮುಂತಾದುವು ಅನೇಕವಿವೆ. ಅದನ್ನೆಲ್ಲಾ ಸೂಚನೆಮಾಡುವುದಕ್ಕೆ ಹೋಗಬಾರದು; ಹೋದರೆ irrelevant ಆಗುತ್ತದೆ ಎಂಬ ಅಭಿಪ್ರಾಯ ಬರುತ್ತದೆ. ಇರ್ರೆಲವೆಂಟೇ ರೆಲವೆಂಟೇ ಎನ್ನುವು ದನ್ನು ಕೆಲವುವೇಳೆ ಹೇಳುವುದಕ್ಕೆ ಕಷ್ಟವಾಗುತ್ತದೆ. ಇದೇ ರೆಲವೆಂಟು, ಇದರ ಮೇಲೆ ಕರ್ಟ್ಮೆನ್ ಮಾಡಿ ಕೊಂಡು ಮಾತನಾಡಬೇಕೆಂದರೆ ಕೆಲವುವೇಳೆ ಕಷ್ಟವಾ ಗುತ್ತದೆ. ಏಕೆಂದರೆ ವಿಲೇಜ್ ಪಂಚಾಯಿತಿಗಳ ವಿಷಯದಲ್ಲಿ ಮಾತನಾಡುವಾಗ, ಈ ತಿದ್ದುಪಡಿ ಕಾನೂ ನಿನ ವಿಷಯದಲ್ಲಿ ಮಾತನಾಡುವಾಗ ಕೆಲವುವೇಳೆ ಸ್ವಲ್ಪ ಆಕಡೆ, ಈ ಕಡೆ ಹೋಗಿ ಮಾತನಾಡುವ ಸಂಭವ ಇರುತ್ತದೆ. ಆದ್ದರಿಂದ ಇವೊತ್ತು ಈ ಜಿಲ್ಲಾಬೋರ್ಡು ಗಳ ಚುನಾವಣೆಯನ್ನು ಈ ವರ್ಷವೇ ಮಾಡುತ್ತೇವೆ ಎಂದು ಏನು ಒಂದು ಘೋಷಣೆ ಮಾಡಿದ್ದೀರಿ, ಅದನ್ನು ಮಾಡುವುದಕ್ಕೆ ಒಂದು ಹಿನ್ನೆಲೆಯನ್ನು ರಚಿಸಬೇಕಾಗು ತ್ತದೆ. ರಚಿಸದೆ ಹೋದರೆ, ಏಕಾಏಕಿ ಚುನಾವಣೆಗ ಳನ್ನು ಪ್ರಾರಂಭಿಸುತ್ತೇವೆ, ಎಂದರೆ ಜನಗಳಿಗೆ ಬಹಳ ಕಷ್ಟವಾಗುತ್ತದೆ. ಕಳೆದ ಗ್ರಾಮ ಪಂಚಾಯಿತಿ ಚುನಾ ವಣೆಯಲ್ಲಿ ಯಾವ ಉಮೇದುವಾರರು ಯಾವ ಕ್ಷೇತ್ರದಲ್ಲಿ ಯಾವ ಸ್ಥಾನಕ್ಕೆ ಚುನಾವಣೆಗೆ ನಿಲ್ಲುತ್ತಾರೆ, ಯಾವಾಗ ಪ್ರಾರಂಭವಾಗುತ್ತದೆ, ಎಂಬುದೇ ಅನೇಕರಿಗೆ ಗೊತ್ತಿರ ಲಿಲ್ಲ; ಎಲ್ಲಿಹೋಗಬೇಕು, ಏನು ಮಾಡಬೇಕು ಎಂಬುದೇ ಗೊತ್ತಿಲ್ಲದೆ ಬಹಳ ತೊಂದರೆಯಾಯಿತು. ಜಿಲ್ಲಾ ಬೋರ್ಡಿನ ಚುನಾವಣೆಗೂ ಅದೇರೀತಿ ಆಗಬಾರದು. ಸರಿಯಾದ ಏರ್ಪಾಡು ಮಾಡಬೇಕು. ಅದಕ್ಕಾಗಿ ಈ ಕಾನೂನನ್ನು ಈ ಅಧಿವೇಶನ ಮುಕ್ತಾಯವಾಗುವುದ ರೊಳಗೇ ಅಂಗೀಕಾರ ಮಾಡುವುದಕ್ಕಾಗಿ ಇದನ್ನು ಒಂದು ಸಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಸಂಪೂರ್ಣ ವಾಗಿ ಈ ಸಭೆಯಲ್ಲಿ ಯಾವ ಒಂದು ಅಭಿಪ್ರಾಯ ಮಾಡಿದೆಯೋ ಆ ಅಭಿಪ್ರಾಯದ ಪ್ರಕಾರ ಮತ್ತಷ್ಟು ತಿದ್ದುಪಡಿಮಾಡಿ, ಸೂಕ್ತ ತಿದ್ದುಪಡಿಗಳೊಡನೆ ಈ ಮಸೂದೆಯನ್ನು ಅಂಗೀಕಾರ ಮಾಡಿಸಿ, ಈ ಚುನಾ ವಣೆಗಳನ್ನು ಅದಷ್ಟು ಜಾಗ್ರತೆ ತಾವು ಹೇಳಿರುವ ಪ್ರಕಾರ ಈ ವರ್ಷವೇ ನಡೆಸಬೇಕೆಂದು ಸರ್ಕಾರದ ವರಿಗೆ ಸಲಹೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

1-30 P.M.

*ಶ್ರೀ ಕೆ. ಲಕ್ಕಪ್ಪ (ಚೆನ್ನರಾಯಪಟ್ಟಣ).—ಸ್ವಾಮಿ ನಿನ್ನೆಯಿಂದಲೂ ಈ ಸಭೆಯ ಮುಂದೆ ಈ ಜಿಲ್ಲಾ ಬೋರ್ಡ್ ತಿದ್ದುಪಡಿ ಮಸೂದೆಯ ಬಗ್ಗೆ ಚರ್ಚೆಗಳ ನಡೆಯುತ್ತಿವೆ. ಹೀಗೆ ಚರ್ಚೆ ನಡೆಯುತ್ತಿರುವ ಸಂದ ರ್ಭದಲ್ಲಿ ನಮ್ಮ ಮುಂದೆ ನಾಲ್ಕೈದು ಬಹಳ ಪ್ರಾಮು ಖ್ಯವಾದ ವಿಷಯಗಳು ನಿಂತಿರುತ್ತವೆ. ಇವುಗಳಲ್ಲಿ ಬಹಳ ಪ್ರಾಮುಖ್ಯವಾದ ಒಂದು ವಿಷಯ ಯಾವು ದೆಂದರೆ, ಈಗ ಈ ಚುನಾವಣೆಗಳ ಬಗ್ಗೆ ಏರ್ಪಡಿಸತಕ್ಕ ಕ್ಷೇತ್ರಗಳು ಸಿಂಗಲ್ ಮೆಂಬರ್ಸ್ ಕಾನ್ಸ್ಟಿಟ್ಯುಯೆನ್ಸಿ ಗಳಾಗಿರಬೇಕೇ ಅಥವಾ ಡಬ್ಬಲ್ ಮೆಂಬರ್ಸ್ ಕಾನ್ಸ್ಟಿ ಟ್ಯುಯೆನ್ಸಿಗಳಾಗಿರಬೇಕೆ ಅನ್ನುವುದು ಒಂದು ಬಹಳ ಪ್ರಾಮುಖ್ಯವಾದಂಥ ವಿಷಯವಾಗಿದೆ. ಆದರೆ, ಹೀಗೆ ಓಟ್ ಮಾಡತಕ್ಕಂಥ ಸಂದರ್ಭಗಳಲ್ಲಿ ಹಿಂದಿ ನಿಂದಲೂ ಯಾವರೀತಿ ಇದು ನಡೆದುಕೊಂಡು ಬರು ತ್ತಿದೆ ಅನ್ನುವುದನ್ನು ನಾವೆಲ್ಲರೂ ನೋಡಿದ್ದೇವೆ. ಆದರೆ ಈಗ ನಮ್ಮ ಈ ಅಸೆಂಬ್ಲಿ ಆಕ್ಟಿನಲ್ಲಿ ಇರುವಹಾಗೆ ಈ ಸದಸ್ಯರನ್ನು ಚುನಾವಣೆ ಮಾಡತಕ್ಕ ಸಂದರ್ಭದಲ್ಲಿ ಅವರಿಗೆ ಕೆಲವು ಡಿಸ್‌ಕ್ವಾಲಿಫಿಕೇಷನ್‌ಗಳನ್ನು ಹಾಕಿ ದ್ದಾರೆ. ಅದೇರೀತಿ ಈ ಚುನಾವಣೆಗಳ ಸಂಬಂಧದ ಲ್ಲಿಯೂ ಕೆಲವು ನಿಯಮಗಳನ್ನು ಹಾಕತಕ್ಕದ್ದು ಅಗತ್ಯ. ಅದಕ್ಕಾಗಿ ಹೀಗೆಲ್ಲಾ ಈ ಕಾನೂನನ್ನು ಮಾರ್ಪಾಡು ಮಾಡುತ್ತಾ ಬಂದಿದ್ದಾರೆ. ಇದೂ ಬಹಳ ಒಳ್ಳೆಯದೆಂದೇ ಹೇಳುತ್ತೇನೆ. ಇದರಲ್ಲಿ ಅಡಕ ಮಾಡತಕ್ಕಂಥ ತಿದ್ದುಪಡಿಗಳಲ್ಲಿ ಬಹಳ ಮುಖ್ಯವಾ ದಂಥ ತಿದ್ದುಪಡಿ ಯಾವುದೆಂದರೆ:—ಈಗ ಸಿಂಗಲ್ ಮೆಂಬರ್ಸ್ ಕಾನ್ಸ್ಟಿಟ್ಯುಯೆನ್ಸಿಗಳು ಇರಬೇಕೇ ಅಥವ ಡಬ್ಬಲ್ ಮೆಂಬರ್ಸ್ ಕಾನ್ಸ್ಟಿಟ್ಯುಯೆನ್ಸಿಗಳಿರಬೇಕೇ ಎನ್ನುವುದು. ಇದು ಬಹಳ ಮುಖ್ಯವಾದದ್ದು ಎನ್ನತಕ್ಕ ದ್ದನ್ನು ಈಗಾಗಲೇ ಕೆಲವು ಮಾನ್ಯ ಸದಸ್ಯರು ಒತ್ತಿ ಹೇಳಿದ್ದಾರೆ. ಆದರೆ ಇನ್ನು ಒಬ್ಬಿಬ್ಬರು ಸದಸ್ಯರು ಇದನ್ನು ವಿರೋಧಿಸುತ್ತಾ ಹೀಗೆ ಇವುಗಳನ್ನು ಸಿಂಗಲ್ ಮೆಂಬರ್ಸ್ ಕಾನ್ಸ್ಟಿಟ್ಯುಯೆನ್ಸಿ ಮಾಡಿದರೆ ಹೆಚ್ಚಿನ ಹಣವನ್ನು ಖರ್ಚುಮಾಡಬೇಕಾಗಿ ಬರುತ್ತದೆ ಎಂದು ಹೇಳಿ ವಾದಮಾಡಿದ್ದಾರೆ. ನನಗೂ ಕೂಡ ಹಾಗೇ ಅನ್ನಿಸುತ್ತಿದೆ. ಆದರೆ ಶ್ರೀ ಎ. ಭೀಮಪ್ಪ ನಾಯಕರು ಮಾತನಾಡುತ್ತಾ ಸಿಂಗಲ್ ಮೆಂಬರ್ಸ್

ಕಾನ್ಸ್ಟಿಟ್ಯುಯೆನ್ಸಿ ಮಾಡಿದರೆ ಅನುಕೂಲ. ಇದರಿಂದ ಖರ್ಚು ಸಹ ಕಡಮೆಯಾಗುತ್ತದೆ ಎಂದು ಹೇಳಿದರು. ಆದರೆ ಖರ್ಚು ಹಾಗೆ ಕಡಮೆಯಾಗುವುದಿಲ್ಲ; ಅದು ಇನ್ನೂ ಹೆಚ್ಚಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಈ ಕಾನ್ಸ್ಟಿಟ್ಯುಯೆನ್ಸಿಗಳು ಚಿಕ್ಕದಾದಷ್ಟು ಓಟುದಾರರನ್ನು ಕಾಣತಕ್ಕಂಥ ಪ್ರದೇಶದ ವಿಸ್ತೀರ್ಣ ಬಹಳ ಕಮ್ಮಿಯಾಗಿರುತ್ತದೆ. ಇದರಿಂದ ಕಡಮೆ ಖರ್ಚಿನಲ್ಲಿ ಚುನಾವಣೆಗಳನ್ನು ನಡೆಸಬಹುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಈಗಾಗಲೇ ಈ ಚುನಾವಣೆಗಳು ಹೇಗೆ ನಡೆಯುತ್ತವೆಯೆಂಬ ಅನುಭವ ನಮ್ಮೆಲ್ಲರಿಗೂ ಸಾಕಷ್ಟು ಗೊತ್ತಾಗಿದೆ. ಈ ದಿವಸ ಇಲ್ಲಿ ಸೇರಿರತಕ್ಕಂಥ ಸದಸ್ಯರೆಲ್ಲರಿಗೂ ಇದರ ಸ್ವಂತ ಅನುಭವವಿದ್ದೇ ಇದೆ. ಈಗ ನಾವೆಲ್ಲರೂ ನೋಡಿರುವಹಾಗೆ ಒಂದು ಚಿಕ್ಕ ಮುನಿಸಿಪಾಲಿಟಿಗೆ 10-12 ಜನರ ಚುನಾವಣೆಗಳು ನಡೆಯಬೇಕಾಗಿ ಬಂದ ಸಂದರ್ಭಗಳಲ್ಲಿ ಆ ಮುನಿಸಿಪಲ್ ಪ್ರದೇಶವನ್ನು ಚಿಕ್ಕಚಿಕ್ಕ ಬ್ಲಾಕುಗಳಾಗಿ ವಿಂಗಡಿಸಿದ್ದಾಗ್ಯೂ ದಿನಬೆಳಗಾದರೆ ಉಮೇದುವಾರರು ಕಾರಿನಲ್ಲಿ ಓಡಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾವು ಎಷ್ಟೇ ಹಿಡಿತಮಾಡಿದರೂ ದುಡ್ಡನ್ನು ಖರ್ಚು ಮಾಡಲೇಬೇಕಾಗುತ್ತದೆ. ಆ ಅನುಭವ ತಮಗೆಲ್ಲರಿಗೂ ಬಂದಿರುತ್ತದೆಂದು ನಾನು ಭಾವಿಸುತ್ತೇನೆ. ಆದುದರಿಂದ ಹೀಗೆ ಕಾನ್ಸ್ಟಿಟ್ಯುಯೆನ್ಸಿ ಚಿಕ್ಕದಾದರೆ ಹಣ ಖರ್ಚು ಮಾಡುವುದು ಕಡಮೆಯಾಗುತ್ತದೆಂಬುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಇದನ್ನು ನಾವು ವಿಧಿಯಿಲ್ಲದೆ ಖರ್ಚು ಮಾಡಲೇ ಬೇಕಾಗಿ ಬರುತ್ತದೆಂಬುದನ್ನು ನಾನು ತಮ್ಮಲ್ಲಿ ಒತ್ತಿ ತಿಳಿಸಬೇಕಾಗಿದೆ. ಈ ಚುನಾವಣಾ ಕ್ಷೇತ್ರಗಳು ಇನ್ನೂ ದೊಡ್ಡವಾದರೆ ಖರ್ಚು ಬಹಳ ಕಡಮೆಯಾಗುತ್ತದೆಂದು ಹೇಳಬೇಕಾಗಿದೆ. ಅಷ್ಟು ಹೊರತು ಹೀಗೆ ಚುನಾವಣಾಕ್ಷೇತ್ರ ಚಿಕ್ಕದಾದರೆ ಖರ್ಚುವೆಚ್ಚಗಳೇನೂ ಕಡಮೆಯಾಗುವುದಿಲ್ಲ. ನಾನು ಚುನಾವಣೆಗೆ ನಿಂತುಕೊಂಡರೆ ನನ್ನ ಮೇಲೆ ಅನೇಕರು ಕಂಟೆಸ್ಟ್ ಮಾಡಬಹುದು. ನಾನು ಚುನಾವಣಾಕ್ಷೇತ್ರದಲ್ಲಿ ಒಂದೆರಡುಸಾರಿ ಪ್ರಚಾರ ಕಾರ್ಯ ನಡೆಸಿಕೊಂಡು ಬಂದರೆ ನನ್ನ ಎದುರು ಪಕ್ಷದವರು ಅವರು ಮೂರು ನಾಲ್ಕು ಸಲ ತಮ್ಮ ಪ್ರಚಾರ ಕಾರ್ಯವನ್ನು ನಡೆಸುತ್ತಾರೆ. ಹಾಗೆ ಅವರು ಮೂರು ನಾಲ್ಕು ಆವರ್ತಿ ಪ್ರಚಾರ ನಡೆಸಿದ್ದಾರೆಂದು ಪುನಃ ನಾನೂ ಸಹ ಮತ್ತೆ ಪ್ರಚಾರಕ್ಕೆ ಹೊರಡಬೇಕಾಗುತ್ತದೆ. ಹೀಗೆ ಇದು ಒಬ್ಬರ ಪ್ರಚಾರದ ಮೇಲೆ ಮತ್ತೊಬ್ಬರ ಪ್ರಚಾರ ಹತ್ತಾರಾವರ್ತಿ ಪ್ರಾರಂಭವಾಗುವುದು ಸಹಜವಾಗೇ ಇರುತ್ತದೆ. ಹೀಗಾಗಿ ಖರ್ಚುವೆಚ್ಚಗಳು ಹೆಚ್ಚಲು ಕಾರಣವಾಗಿರುತ್ತದೆ. ಪ್ರತಿಯೊಬ್ಬ ಉಮೇದುವಾರನಿಗೂ ಆತನ ಚುನಾವಣೆಯ ಕ್ಷೇತ್ರದಲ್ಲಿ ಬಹಳ ಇಂಟೆನ್ಸಿವ್ ಆಗಿ ಪ್ರಚಾರ ನಡೆಸಬೇಕೆಂಬ ಕುತೂಹಲವಿದ್ದೇ ಇರುತ್ತದೆ. ಇದರಿಂದ ಪ್ರತಿಯೊಬ್ಬ ಉಮೇದುವಾರನೂ ಹೆಚ್ಚು ಹಣವನ್ನು ಖರ್ಚುಮಾಡಲೇ ಬೇಕಾಗುತ್ತದೆ. ಆದರೆ ಹೀಗೆ ಮಾಡುವುದಕ್ಕೆ ಬದಲಾಗಿ ಈ ಚುನಾವಣಾಕ್ಷೇತ್ರಗಳನ್ನು ದೊಡ್ಡದಾಗಿ ಮಾಡಿದರೆ ಖರ್ಚು ಇನ್ನೂ ಕಡಮೆಯಾಗುತ್ತದೆ. . . .

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಹಾಗಾದರೆ ಇಡೀ ಜಿಲ್ಲೆಯನ್ನೇ ಒಂದು ಕ್ಷೇತ್ರವನ್ನಾಗಿ ಮಾಡಿ; ತಮಗೆ ಖರ್ಚು ಇನ್ನೂ ಕಡಮೆಯಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈಗ ನಮ್ಮ ಮುಂದೆ ಇರತಕ್ಕದ್ದು ತಾಲ್ಲೂಕು ಬೋರ್ಡುಗಳ ವಿಚಾರ. ಈಗ ಅನೇಕ ಮೈನರ್ ಕಮ್ಯುನಿಟಿಗಳು ಬೇರೆ ಇರುತ್ತವೆ. ಇವರ ಸಂಖ್ಯೆ ಒಂದೇ ಸ್ಥಳದಲ್ಲಿ ಹೆಚ್ಚಿಗೆ ಇರುವುದಿಲ್ಲ. ಅಲ್ಲಲ್ಲೇ ಹರಡಿಕೊಂಡಿರುತ್ತದೆ. ಈ ನಾನಾ ಕಾರಣಗಳಿಂದ ಈ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯನ್ನು ಮಾಡಬೇಕೆಂದು ಹೇಳಿದರೆ ಈ ಮೈನರ್ ಕಮ್ಯುನಿಟಿಗಳವರಿಗೆ ಚುನಾವಣೆಯಲ್ಲಿ ನಿಂತು ಜೈಶೀಲರಾಗಿ ಬರುವುದಕ್ಕೆ ಅನೇಕ ಎಡರುತೊಡರುಗಳು ಇರುತ್ತವೆಂದು ಹೇಳಿದರೆ ತಾವುಗಳೆಲ್ಲರೂ ಒಪ್ಪಿ ಕೊಳ್ಳುತ್ತೀರಿ ಎಂದು ನಾನು ಭಾವಿಸುತ್ತೇನೆ. ಆದರೆ ಈ ಪ್ರಜಾಪ್ರಭುತ್ವಯುಗದಲ್ಲಿ ಕೋಮುವಾರು ಭಾವನೆ ಇರಬಾರದೆಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ಇದು ಬೇಗ ಹೊರಟುಹೋಗಬೇಕೆಂದು ನಾನೂ ಹೇಳುತ್ತೇನೆ. ಆದರೆ ಇದು ಇನ್ನೂ ಅಲ್ಲಲ್ಲೇ ಇರತಕ್ಕದ್ದನ್ನು ನಾನು ನನ್ನ ಅನುಭವದಿಂದ ನೋಡಿ ತಿಳಿದುಕೊಂಡಿದ್ದೇನೆ. ಆದುದರಿಂದ ಈ ಕೋಮುವಾರು ಭಾವನೆ ಅಷ್ಟಾಗಿ ಇನ್ನೂ ನಮ್ಮಲ್ಲಿ ಅಳಿಸಿಹೋಗಿಲ್ಲವೆಂದು ತಿಳಿಸಬೇಕಾಗಿದೆ. ಆದುದರಿಂದ ನಾವು ಈ ದಿವಸ ಈ ಚುನಾವಣೆಗಳನ್ನು ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಮೇಲೆ ನಡೆಸಬೇಕೆಂದರೆ ಅನೇಕ ತೊಂದರೆಗಳುಂಟಾಗಬಹುದು. ಇದಕ್ಕೆ ಬದಲಾಗಿ ಡಬ್ಬಲ್ ಮೆಂಬರ್ಸ್ ಕಾನ್ಸ್ಟಿಟ್ಯುಯೆನ್ಸಿ ಮಾಡಿದರೆ ತಾಲ್ಲೂಕಾಮಳೆ ಹರಿದು ಹಂಚಿರುವಂಥ ಈ ಮೈನರ್ ಕೋಮುಗಳ ಓಟುದಾರರುಗಳ ಓಟನ್ನು ಪಡೆಯಲು ಅನುಕೂಲವಾಗುತ್ತದೆ. ಈ ಓಟುಗಳ ಜೊತೆಗೆ ಇತರ ಕೋಮಿನವರ, ಅಂದರೆ ಜನರಲ್ ಕಾನ್ಸ್ಟಿಟ್ಯುಯೆನ್ಸಿಯವರ ಓಟನ್ನು ಪಡೆಯುವುದಕ್ಕೂ ಸಹ ಇದರಿಂದ ಅನುಕೂಲವಾಗುತ್ತದೆ. ಮೈನರ್ ಕೋಮಿನವರು ಸುಲಭವಾಗಿ ಚುನಾವಣೆಗಳಲ್ಲಿ ಜಯಪಡೆದು ಬರಬಹುದು. ಆದುದರಿಂದ ಈ ಚುನಾವಣೆ ಕ್ಷೇತ್ರಗಳು ದೊಡ್ಡದಾಗಿದ್ದಷ್ಟೂ ಒಳ್ಳೆಯದೆಂದು ಹೇಳುತ್ತೇನೆ. ಆದರೆ ಮತ್ತೆ ಕೆಲವರು ಹೀಗೆ ಮೂರು ಜನಗಳು ಒಂದೇ ಸಲಕ್ಕೆ ಒಂದು ತಾಲ್ಲೂಕಿನಿಂದ ಚುನಾವಣೆಗೆ ನಿಂತರೆ ಆಗ ಉಮೇದುವಾರರನ್ನು ಗುರ್ತಿಸಲಿಕ್ಕೆ ಬಹಳ ಕಷ್ಟವಾಗುತ್ತದೆಂದು ಕೆಲವರು ಹೇಳಿದರು. ಆದರೆ ಹಾಗೇನೂ ತೊಂದರೆ ಆಗುವುದಿಲ್ಲ; ಅದರಲ್ಲಿ ಅಂಥ ಕಷ್ಟವು ಇರುವುದಿಲ್ಲ. ಈಗ ಒಂದೊಂದು ಡಿವಿಜನ್‌ನಲ್ಲಿ ಈ ಮುನಿಸಿಪಾಲಿಟಿಗಳ ಚುನಾವಣೆಗೆ 15-20 ಜನರು ನಿಲ್ಲುತ್ತಾರೆ. ಇದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಹೀಗೆ ಚುನಾವಣೆಗೆ ನಿಲ್ಲುವಂಥ ಜನಗಳಿಗೆ ಹಸು, ಕುದುರೆ ಇತ್ಯಾದಿ ಗುರುತುಗಳನ್ನು ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಓಟುಮಾಡಲು ಅಂಥ ತೊಂದರೆಯೇನೂ ಆಗುವುದಿಲ್ಲ. ಮೇಲಾಗಿ ಈಗ ನಮ್ಮ ಪ್ರಜೆಗಳಿಗೆ ಈ ಚುನಾವಣೆಗಳಲ್ಲಿ ಹೇಗೆ ಓಟ್ ಮಾಡಬೇಕೆಂಬ ತಿಳುವಳಿಕೆ ಬಂದಿದೆ. ಸರಿಯಾಗಿ ಓಟ್ ಮಾಡತಕ್ಕಂಥ ಶಕ್ತಿಯನ್ನು ಈ ದಿವಸ ಅವರು ಸಂಪಾದಿಸಿಕೊಂಡಿರುತ್ತಾರೆ. ಕಾಂಗ್ರೆಸ್ ಸಂಸ್ಥೆಯಿಂದ ಮೂರು ಜನರು ಚುನಾವಣೆಗೆ ನಿಂತರೆ ಅವರೆಲ್ಲರೂ ಒಂದು ಗುರ್ತನ್ನು ಇಟ್ಟುಕೊಳ್ಳುತ್ತಾರೆ. ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಿಂದ ಮೂರು ಜನರು ಚುನಾವಣೆಗೆ ನಿಂತರೆ ಅವರೊಂದು ಗುರುತನ್ನು ಇಟ್ಟುಕೊಳ್ಳುತ್ತಾರೆ. ಅವರವರ ಓಟಿನ ಚೀಟಿಗಳಲ್ಲಿ ಅವರ ಹೆಸರುಗಳು ಮತ್ತು ಅವರು ಇಟ್ಟುಕೊಂಡಿರತಕ್ಕಂಥ ಗುರುತುಗಳು ಇತ್ಯಾದಿ ಎಲ್ಲ ವಿವರಗಳನ್ನೂ ಬರೆದಿರುತ್ತದೆ. ಆದುದರಿಂದ ಈ ಒಂದು ಪದ್ಧತಿಯಿಂದ ಅಂಥ ತೊಂದರೆಗಳೇನೂ ಬರುವುದಿಲ್ಲವೆಂದು ಹೇಳಬಯಸುತ್ತೇನೆ. ಇದೇ ಸಂದರ್ಭದಲ್ಲಿ ಕೆಲವರು

(ಶ್ರೀ ಕೆ. ಲಕ್ಕಪ್ಪ.)

ಇನ್ನೂ ಒಂದು ವಾದವನ್ನು ಎತ್ತಿದ್ದಾರೆ, ಈ ಚುನಾವಣೆಗೆ ಸ್ವತಂತ್ರವಾಗಿ ನಿಲ್ಲತಕ್ಕಂಥ ಉಮೇದುವಾರರಿಗೆ ಬಹಳ ತೊಂದರೆಯಾಗುತ್ತದೆ, ಇವರಿಗೆ ಆ ಇಡೀ ತಾಲ್ಲೂಕನ್ನು ತಿರುಗಲು ಕಾಲ ಹೆಚ್ಚಾಗಿ ಹಿಡಿಯುತ್ತದೆ ಮತ್ತು ಹೆಚ್ಚು ಹಣ ಖರ್ಚಾಗುತ್ತದೆ ಎಂದು. ಆದರೆ ಹಾಗೆ ಸ್ವತಂತ್ರವಾಗಿ ಚುನಾವಣೆಗೆ ನಿಲ್ಲತಕ್ಕಂಥವರಿಗೆ ಈ ದಿವಸ ಅವಕಾಶವೇ ಇಲ್ಲ ಎಂದ ನಾನು ಹೇಳುತ್ತೇನೆ. ಹೀಗೆ ಯಾರಾದರೂ ಸ್ವತಂತ್ರವಾಗಿ ಚುನಾವಣೆಗೆ ನಿಲ್ಲುವುದಾಗಿದ್ದರೆ ಎಲ್ಲರೂ ಸೇರಿ ಹಾಗೆ ನಿಲ್ಲತಕ್ಕದ್ದನ್ನು ತಡೆಗಟ್ಟಬೇಕಾಗಿರುತ್ತೆಂದು ಹೇಳುತ್ತೇನೆ. ಈದಿವಸ ಚುನಾವಣೆಗೆ ನಿಲ್ಲತಕ್ಕವರೆಲ್ಲರೂ ಒಂದಲ್ಲ ಒಂದು ಪಾರ್ಟಿ ಶಿಸ್ತು ನಿಯಮಗಳ ಮೇಲೆ ಚುನಾವಣೆಗೆ ನಿಲ್ಲಬೇಕಾಗಿದೆ. ಇಂಥಾದ್ದನ್ನು ಮಾತ್ರವೇ ನಾವು ಎನ್‌ಕರೇಜ್ ಮಾಡಬೇಕಾಗಿದೆ. ಇನ್ನೊಂದು ಬಹಳ ಮುಖ್ಯವಾದಂಥ ವಿಚಾರವನ್ನು ಶ್ರೀ ಕೆ. ಪಟ್ಟಾಭಿರಾಮನ್‌ರವರು ಎತ್ತಿದ್ದಾರೆ ಅದೇನೆಂದರೆ ಈ ದಿವಸ ಯಾವ ಮನುಷ್ಯನು ಯಾವ ಚುನಾವಣಾಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲುತ್ತಾನೋ ಅವನು ಆ ಚುನಾವಣಾಕ್ಷೇತ್ರದಲ್ಲಿ ವಾಸವಾಗಿದ್ದರೆ ಮಾತ್ರ ಅವಕಾಶವಿರಬೇಕೇ ಹೊರತು ಎಲ್ಲಿಯೋ ವಾಸಮಾಡತಕ್ಕಂಥ ಮನುಷ್ಯನಿಗೆ ಯಾವುದೋ ಒಂದು ಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲುವುದಕ್ಕೆ ಅವಕಾಶ ಕೊಡಬಾರದು ಎಂದು ಒಂದು ವಾದವನ್ನೆತ್ತಿದ್ದಾರೆ. ಆದರೆ ಇದು ಅಷ್ಟು ಸರಿಯಾಗಿರುವಂತೆ ಕಾಣುವುದಿಲ್ಲ. ಚುನಾವಣೆಗೆ ನಿಲ್ಲುವಂಥ ಮನುಷ್ಯ ಯಾವ ಕ್ಷೇತ್ರದಲ್ಲಿ ವಾಸವಾಗಿದ್ದರೇನು ! ಅವನು ಜನಾನುರಾಗಿಯಾಗಿದ್ದರೆ ಮತ್ತು ಜನರೆಲ್ಲರ ಅಭಿಮಾನಕ್ಕೆ ಪಾತ್ರನಾಗಿದ್ದರೆ, ಜನರ ಪ್ರೇಮಗಳಿಸಿಕೊಂಡಿದ್ದರೆ ಸಾಕು. ಆತನು ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಅವಕಾಶವಿರುತ್ತದೆ. ಆದುದರಿಂದ ಚುನಾವಣೆಗೆ ನಿಲ್ಲತಕ್ಕಂಥ ಮನುಷ್ಯನು ಆ ಚುನಾವಣಾಕ್ಷೇತ್ರದಲ್ಲೇ ವಾಸವಾಗಿರಬೇಕು ಎನ್ನತಕ್ಕಂಥ ಒಂದು ನಿರ್ಬಂಧವನ್ನೇನೂ ಹಾಕಬೇಕಾಗಿಲ್ಲ. ಹಾಗೆ ಒಂದು ನಿರ್ಬಂಧವನ್ನು ಹಾಕತಕ್ಕದ್ದೂ ಸಹ ಸರಿಯಾದುದಲ್ಲ. ಈ ದಿವಸ ಈ ಎಲ್.ಎ. ಮತ್ತು ಎಲ್.ಸಿ.ಗಳ ಚುನಾವಣೆಯಲ್ಲಿ ಯಾರು ಎಲ್ಲಿಬೇಕಾದರೂ ನಿಂತು ಚುನಾವಣೆಗಳಲ್ಲಿ ಸ್ಪರ್ಧಿಸಿ ಸದಸ್ಯರಾಗಿ ಆರಿಸಿ ಬರುವುದಕ್ಕೆ ಅವಕಾಶ ಕೊಟ್ಟಿರುತ್ತದೆ. ಹಾಗೆ ಚುನಾವಣೆಗೆ ನಿಲ್ಲತಕ್ಕಂಥ ವ್ಯಕ್ತಿ ದಕ್ಷನಾಗಿಲ್ಲದೆ, ಜನಗಳಿಂದ ಒಂದು ಹೆಸರನ್ನು ಗಳಿಸಿಕೊಳ್ಳದೆ, ಜನರ ಪ್ರೀತಿವಿಶ್ವಾಸಗಳನ್ನು ಸಂಪಾದಿಸದೆ ಮತ್ತು ಜನರ ಸೇವೆಯನ್ನು ಸರಿಯಾಗಿ ಸಲ್ಲಿಸದೆ ಇರತಕ್ಕಂಥ ಮನುಷ್ಯನು ಆತನು ಎಲ್ಲೇ ಇರಲಿ ಅಥವಾ ಯಾವ ಕ್ಷೇತ್ರದಲ್ಲೇ ಚುನಾವಣೆಗೆ ನಿಲ್ಲಲಿ ಅಂಥ ಮನುಷ್ಯನು ಆರಿಸಿ ಬರುವುದಕ್ಕೆ ಸಾಧ್ಯವೇ ಇರುವುದಿಲ್ಲ.

ಇನ್ನು ಕೊನೆಯದಾಗಿ ಈ ಚುನಾವಣೆಗಳ ತಕರಾರುಗಳಿಗೆ ಬಲಿಬಿದ್ದಿರುವಂಥ ಮೂರುಜನ ಸದಸ್ಯರು ಇದೇ ಸಭೆಯಲ್ಲಿ ಈಗ ಇದ್ದಾರೆ. ಆ ಮೂರು ಜನರ ಪೈಕಿ ನಾನೂ ಒಬ್ಬ. ಇನ್ನುಳಿದ ಇಬ್ಬರು ಯಾರಾರೆಂದರೆ ಶ್ರೀ ಟಿ. ಸಿ. ಬಸಪ್ಪನವರು ಒಬ್ಬರು ಮತ್ತು ಶ್ರೀ ಎಚ್. ಎಂ. ಚನ್ನಬಸಪ್ಪನವರೊಬ್ಬರು. ಈ ಚುನಾವಣೆಗಳ ತಕರಾರು ಬಿದ್ದಲ್ಲಿ ಎಷ್ಟು ಸಾರ್ತಿ ಜನರು ಕೋರ್ಟುಕಛೇರಿಗಳಿಗೆ ಹತ್ತಬೇಕಾಗುತ್ತದೆ, ಎಷ್ಟೊಂದು ದುಡ್ಡನ್ನು ವ್ಯಯಮಾಡಬೇಕಾಗುತ್ತದೆ, ಎಷ್ಟು ಕಷ್ಟನಷ್ಟಗಳಿರುತ್ತವೆಂಬುದು ನಮಗೀಗ ಚೆನ್ನಾಗಿ ಮನದಟ್ಟಾಗಿದೆ. ಅನೇಕರು ತಮ್ಮ ಮನೆಮಠಗಳನ್ನೇ ಇದಕ್ಕಾಗಿ ಮಾರಾಟಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಅನೇಕ ಕಷ್ಟಗಳಿರುತ್ತವೆ. ಆದುದರಿಂದ ಮುಂದಾದರೂ ಇಂಥ ಕೊರತೆಗಳಿಗೆ ಅವಕಾಶ ಕೊಡದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಈ ಬಗ್ಗೆ ಕೇಂದ್ರ ಸರ್ಕಾರ ಕೂಡ ಪ್ರಯತ್ನ ನಡೆಸುತ್ತಿದೆಯೆಂದು ಕೇಳುತ್ತೇನೆ. ಇನ್ನು ಮುಂದಕ್ಕೆ ಇಂಥ ತಕರಾರುಗಳು ಬರುವುದಕ್ಕೆ ಅವಕಾಶವಿಲ್ಲದ ಹಾಗೆ ಈ ಚುನಾವಣೆಗಳನ್ನು ನಡೆಸಬೇಕಾದದ್ದು ಅತ್ಯವಶ್ಯಕ. ಜನರನ್ನು ಚುನಾವಣೆಗೆ ನಿಲ್ಲಿಸುವುದಕ್ಕೆ ಮುನ್ನವೇ ಈ ಬಗ್ಗೆ ಸೂಕ್ತ ಎಚ್ಚರಿಕೆಗಳನ್ನು ಕೈಗೊಂಡು ಒಂದು ಖಚಿತವಾದ ತೀರ್ಮಾನಕ್ಕೆ ಬರುವಂಥ ಏರ್ಪಾಡನ್ನು ಮಾಡಬೇಕು. ತಾವು ಈ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕುವಾಗ ಮತ್ತು ಬಂದಂಥ ನಾಮಿನೇಷನ್ ಪೇಪರ್‌ಗಳನ್ನು ಸ್ಕ್ರೂಟಿನಿ ಮಾಡುವಾಗ ಮತ್ತು ಅಬ್‌ಜೆಕ್ಷನ್‌ಗಳನ್ನು ಕಾಲ್ ಫಾರ್ ಮಾಡುವಾಗ ಇವುಗಳಿಗೆಲ್ಲಾ ಒಂದು ಗೊತ್ತಾದ ಕಾಲವನ್ನು ಸೂಚಿಸಿ ಎಲ್ಲಾ ವಿಷಯಗಳನ್ನು ತೀರ್ಮಾನಮಾಡಲು ಒಂದೊಂದು ಡೇಟನ್ನು ನಿರ್ಧರಮಾಡುತ್ತೀರಿ. ಹೀಗೆ ಎಲ್ಲಾ ಆದನಂತರ 10-15 ದಿವಸಗಳು ತಮ್ಮ ತೀರ್ಮಾನ ಕೊಡಲು ಅವಕಾಶವಿರುತ್ತದೆ. ಆ ಅವಧಿಯಲ್ಲೇ ಈ ತಕರಾರುಗಳೇನಿದ್ದರೂ ಫೈಸಲಾಗುವಂತೆ ತಾವು ಒಂದು ನಿರ್ದಿಷ್ಟವಾದ ವ್ಯವಸ್ಥೆಯನ್ನು ಮಾಡಿ ಆ ವೇಳೆಗೆ ಸರಿಯಾಗಿ ಎಲ್ಲಾ ತಕರಾರುಗಳನ್ನೂ ತೀರ್ಮಾನಮಾಡಿ ಮುಂದಕ್ಕೆ ಯಾವ ಅಡ್ಡಿ ಅಡಚಣೆಗಳೂ ಬಾರದಿರುವಂತೆ ಒಂದು ಏರ್ಪಾಡನ್ನು ಮಾಡಬೇಕೆಂದು ಸೂಚಿಸುತ್ತೇನೆ—ಇಷ್ಟು ಅಗತ್ಯವಾದಂಥ ಏರ್ಪಾಡುಗಳನ್ನು ಮಾಡಿದರೆ ಈಗ ತಂದಿರತಕ್ಕಂಥ ಮಸೂದೆ ಬಹಳ ಚೆನ್ನಾಗಿ ಆಗುತ್ತದೆಯೆಂದು ತಿಳಿಸಿ ನಾನು ಇದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈಗ ಸರ್ಕಾರದವರು ಈ ಸಭೆಯಮುಂದೆ ತಂದಿರತಕ್ಕಂಥ ಈ ಒಂದು ತಿದ್ದುಪಡಿಯ ಆಧಾರದ ಮೇಲೆ ಮುಂದಕ್ಕೆ ಈ ಜಿಲ್ಲಾ ಬೋರ್ಡುಗಳಿಗೆ ಡೈರೆಕ್ಟ್ ಎಲೆಕ್ಷನ್‌ಗಳನ್ನು ನಡೆಸಬೇಕೆಂದು ಹೇಳಿರುತ್ತಾರೆ. ಇದೇನೋ ಒಳ್ಳೆಯದೆ. ಆದರೆ ಇಂಡೈರೆಕ್ಟ್ ಎಲೆಕ್ಷನ್ನಿನಲ್ಲಿ ಕೆಲವು ಅನಾಹುತಗಳಾಗುತ್ತವೆಂದೂ ಕೆಲವು ಜನರಿಗೆ ಓಟು ದೊರೆಯದೆ ಅವರಿಗೆ ತೊಂದರೆಯಾಗುತ್ತೆ ಎಂದೂ ಈ ಚುನಾವಣೆಗಳು ಯಾವರೀತಿ ನಡೆಯಬೇಕು ಎನ್ನುವ ವಿಚಾರದಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಬಂದುದರಿಂದ ಈ ದಿವಸ ಸರ್ಕಾರದವರು ಈ ಒಂದು ತೀರ್ಮಾನಕ್ಕೆ ಬಂದು ಹೀಗೆ ಈ ಚುನಾವಣೆಗಳು ಡೈರೆಕ್ಟ್ ಎಲೆಕ್ಷನ್ ಮೂಲಕ ನಡೆಯಬೇಕೆಂದು ಹೇಳಿರತಕ್ಕದ್ದು ಅಷ್ಟು ಸಾಧುವಾದ್ದಲ್ಲ. ಈಗ ಹಾಲಿ ಮೊನ್ನೆತಾನೆ ಗ್ರಾಮಪಂಚಾಯಿತಿಗಳ ಚುನಾವಣೆಗಳು ಹೇಗೆ ನಡೆದುವು ಎಂಬ ಬಗ್ಗೆ ನಾನೀಗ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಟ್ಟಿದ್ದೇನೆ. ಈ ದಿವಸ ಜಾರಿಯಲ್ಲಿರುವ ವಿಲೇಜ್ ಪಂಚಾಯ್ತಿ ಆಕ್ಟಿನ ಪ್ರಕಾರ ಈ ಚುನಾವಣೆಗಳೆಲ್ಲವೂ ಸೀಕ್ರೆಟ್ ಬ್ಯಾಲೆಟ್ಟಿನ ಮೂಲಕ ನಡೆಯಬೇಕೆಂದು ಹೇಳಲಾಗಿದೆ.

ಅಧ್ಯಕ್ಷರು.—ಆ ಚುನಾವಣೆಗಳಿಗೂ ಈ ಮಸೂದೆಗೂ ಏನು ಸಂಬಂಧವಿದೆ ?

ಶ್ರೀ ಡಿ. ದೇವರಾಜ ಅರಸ್.—ಇದರಿಂದಲೂ ನಾವು ಕೆಲವು ತಿಳಿವಳಿಕೆ ಮಾಡಿಕೊಳ್ಳುವಂಥಾ ವಿಚಾರಗಳಿವೆ. ಅವುಗಳನ್ನು ನಾವು ಗಮನಕ್ಕೆ ತೆಗೆದುಕೊಂಡು ಈಗ ತಂದಿರತಕ್ಕ ಮಸೂದೆಯಲ್ಲಿ ಮುಂದಕ್ಕೆ ಅರೀತಿ ಅನಾನುಕೂಲಗಳಿಗೆ ಅವಕಾಶವಿಲ್ಲದ ರೀತಿ

ಯಲ್ಲಿ ಬದಲಾವಣೆ ಮಾಡಲು ಇದರಿಂದ ಅನುಕೂಲವಾಗುತ್ತದೆ. ಅದಕ್ಕಾಗಿ ಒಂದೆರಡು ಮಾತುಗಳನ್ನು ಹೇಳುವುದು ಯುಕ್ತವೆಂದು ಭಾವಿಸಿದ್ದೇನೆ. ಈ ಚುನಾವಣೆಗಳನ್ನು ಸೀಕ್ರೆಟ್ ಬ್ಯಾಲೆಟ್ಟಿನ ಮೂಲಕ ನಡೆಸಬೇಕೆಂದು ತೀರ್ಮಾನಿಸಲಾಯಿತು. ಆದರೆ ಹಾಗೆ ಚುನಾವಣೆಗೆ ನಿಂತ ಎಷ್ಟೋ ಜನ ಸದಸ್ಯರಿಗೆ ಯಾವ ಗುರುತುಗಳನ್ನೂ ಕೊಟ್ಟಿರಲಿಲ್ಲ ಒಂದು ಊರಿನಲ್ಲಿ ಈ ಚುನಾವಣೆಗೆ ಹದಿನೈದು ಇಪ್ಪತ್ತು ಜನರು ನಿಂತುಕೊಂಡರು. ಎಲ್ಲರ ಹೆಸರನ್ನೂ ಒಂದು ಪಟ್ಟಿಯಲ್ಲಿ ಬರೆದು ಅದನ್ನು ಒಂದು ಕ್ರಮದಲ್ಲಿ ಗೊತ್ತು ಮಾಡಿದರು. ಈ ಮಾನ್ಯ ಸಭೆಯವರಿಗೂ ಸಹ ಗೊತ್ತಿರಬಹುದು ಹಾಗೆ ಓಟುದಾರರಿಗೆ ಮತದಾರರ ಪಟ್ಟಿಯನ್ನು ಓದಿಕೊಂಡು ಓಟು ಮಾಡತಕ್ಕಂಥ ಶಕ್ತಿ ಈ ದಿವಸ ನಮ್ಮಲ್ಲಿ ಎಷ್ಟು ಜನಗಳಿಗೆ ಬಂದಿದೆ ? ಈ ರೀತಿಯಲ್ಲಿ ಓಟುಮಾಡುವಂಥಾ ಶಕ್ತಿ ಕೇವಲ ಕಮ್ಮಿ ಜನಗಳಿಗೆ ಇರುತ್ತದೆ. ಕೆಲವರಿಗೆ ಮಾತ್ರ ಇದು ಸಾಧ್ಯವೇ ಹೊರತು ಎಲ್ಲರಿಗೂ ಇದು ಹಿಡಿಸುವುದಿಲ್ಲ.

Sri Kadidal MANJAPPA.—On a point of order. I have no objection to the Hon'ble Member bringing to my notice or to the notice of the concerned Minister these facts. But whether it is relevant at this juncture when we are dealing with this Bill is a point for you, Sir, to consider.

Sri D. DEVARAJ URS.—You were pleased to say when the other Hon'ble Member was speaking that a passing remark might be made whenever there was relevancy in the matter. I feel this is relevant and so I want to bring it to the notice of the Government. The Hon'ble Minister need not be perturbed over this; it will be an enlightenment.

Sri Kadidal MANJAPPA.—I am not at all perturbed. I will listen to you for one hour or even two hours; but, whether it is relevant is the point.

Mr. SPEAKER.—In the Bill it is stated that election will be on the basis of direct election. So, the Hon'ble Member wants to say what precautions should be taken. But, the Hon'ble member may be brief.

Sri D. DEVARAJ URS.—I will be very brief, Sir.

ಆಗ ಓದುವುದಕ್ಕೆ ಬರದೆ ಇದ್ದು 15-20 ಹೆಸರುಗಳಲ್ಲಿ ಯಾರು ಯಾರಿಗೆ ಓಟು ಕೊಡಬೇಕೋ ಅವರ ಹೆಸರನ್ನೆಲ್ಲಾ ಜ್ಞಾಪಕದಲ್ಲಿಟ್ಟುಕೊಂಡು returning officer ಅಥವಾ polling officerಗೆ ಮತದಾರರು ಹೇಳಬೇಕು. ಆ polling officer ನವರಿಗೆ ದೇವರು ಬುದ್ಧಿ ಕೊಟ್ಟರೆ ಅವರು ಹೇಳಿದ ಹೆಸರುಗಳಿಗೆ ಗುರುತು ಹಾಕಬಹುದು. ಹಾಗಿಲ್ಲದೆ ಅನೇಕವೇಳೆ ಬರೀ polling officers ವೋಟು ಮಾಡಿದ್ದಾರೆಂದರೂ ತಪ್ಪಾಗಲಾರದು. ಇಂಥ ಅನಾಹುತಗಳು ವಿಲೇಜ್ ಪಂಚಾಯಿತಿಗಳ ಚುನಾವಣೆಗಳಲ್ಲಿ ನಡೆದಿವೆ. ನಿಜವಾಗಿ ಓಟುದಾರ ಯಾರಿಗೆ ಓಟು ಕೊಡುತ್ತಾನೆ ಎಂಬುದು ಯಾರಿಗೂ ಗೊತ್ತಾಗಕೂಡದೆಂದು ಆ secret ballot ಇಟ್ಟಿರತಕ್ಕಂಥ ಉದ್ದೇಶ ಸಫಲವಾಗಲಿಲ್ಲ. ಸರ್ಕಾರದವರು ಸೂಕ್ತವಾದ ತಿದ್ದುಪಡಿಗಳನ್ನು rules frame ಮಾಡತಕ್ಕ ಕಾಲದಲ್ಲಿ ಮಾಡಬೇಕು ಎಂಬ ವಿಷಯ ಅವರ ಗಮನಕ್ಕೆ ತರಲು ಹೇಳುತ್ತಿದ್ದೇನೆ.

ಆಮೇಲೆ ಈಗ direct elections ಸರ್ಕಾರದವರು ಮಾಡಬೇಕೆಂದು ಇರತಕ್ಕದ್ದು ಸಾಧುವಾಗಿದೆ. Direct elections ನಡೆಯುವಾಗ ತಾಲ್ಲೂಕಿಗೆ ಮೂರು ಸ್ಥಾನಗಳಿಗೆ ಹೆಚ್ಚಿಲ್ಲದ ರೀತಿ ನಿಗದಿ ಮಾಡಬೇಕೆಂದು ಸೂಚನೆ ಇದೆ. ನನ್ನ ಅಭಿಪ್ರಾಯದಲ್ಲಿ multi-member constituency ಮಾಡುವುದಕ್ಕಿಂತ single member constituency ಮಾಡುವುದು ಉತ್ತಮವಾದ ಮಾರ್ಗ, ನ್ಯಾಯವಾದ ಮಾರ್ಗ ಮತ್ತು ಈ ರೀತಿಯಾಗಿ single member constituency ಮಾಡುವುದರಿಂದ ಸ್ಥಳದಲ್ಲಿ ಇರತಕ್ಕ ಜನರಿಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಮುಖ್ಯವಾಗಿ ನಡೆಯಬೇಕಾದಂಥ ಆಯಾ ಕ್ಷೇತ್ರಗಳಿಗೆ ಸಂಬಂಧಪಟ್ಟಹಾಗೆ, ಆಯಾ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಊರಿಂದೂರಿಗೆ ರಸ್ತೆಗಳು, ಆಸ್ಪತ್ರೆಗಳು, ಭಾವಿಗಳು, ಕುಡಿಯುವ ನೀರಿನ ಸೌಕರ್ಯ, ಆರೋಗ್ಯವಿಚಾರ, ಸ್ಕೂಲುಗಳ ವಿಚಾರ ಇಂಥ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇಂಥ ಸಂದರ್ಭದಲ್ಲಿ ನನ್ನ ಮಾನ್ಯ ಸ್ನೇಹಿತರಾದ ಲಕ್ಕಪ್ಪನವರು ಈಗತಾನೇ ಅಪ್ಪಣೆ ಕೊಡಿಸುತ್ತ multi-member constituencies ಆಗಿದ್ದರೆ ಖರ್ಚು ಕಡಿಮೆ, minority constituencyಗೆ ಬಹಳ ಸಹಾಯವಾಗುತ್ತದೆ, ಇತ್ಯಾದಿ ಕೆಲವು ಕಾರಣಗಳನ್ನು ಹೇಳಿದರು. ಅವರು ಹೇಳಿದ್ದರಲ್ಲಿ ಎಲ್ಲದರದಲ್ಲಿಯೂ ವ್ಯತ್ಯಾಸವಿದೆ. ಯಾಕೆಂದರೆ ಒಂದು ತಾಲ್ಲೂಕಿನಲ್ಲಿ ಒಬ್ಬ ಸಾದು ಮನುಷ್ಯನೆಂದರೆ ಹಳ್ಳಿಯಲ್ಲಿರತಕ್ಕ ವಿದ್ಯಾವಂತನಾಗಿದ್ದು ರೈತನಾಗಿರುವ ಮನುಷ್ಯ. ಜನರಲ್ ಎಲೆಕ್ಷನ್ನಲ್ಲಿ ಖರ್ಚು ಮಾಡುವಂತೆ ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ಅವನಿಗೆ ಇದ್ದರೆ ಮಾತ್ರ ಈ ಚುನಾವಣೆಗಳಲ್ಲಿ ಸ್ಪರ್ಧಿಸಬಹುದೇ ಹೊರತು ಹಾಗಿಲ್ಲದೆ ಹೋದರೆ ಸ್ಪರ್ಧಿಸುವುದಕ್ಕೆ ಆಗುವುದಿಲ್ಲ. ಅದು ನಮ್ಮೆಲ್ಲರ ಅನುಭವ. ಮಾನ್ಯ ಸ್ನೇಹಿತರಾದ ಗೋಪಾಲಗೌಡರು ಒಂದು ಮಾತು ಹೇಳಿದರು, ಅದನ್ನು ನಾನು ಒಪ್ಪುತ್ತೇನೆ. ಈ ರೀತಿ ಖರ್ಚು ಮಾಡಿದರೂ ಒಂದು ಭೀತಿ ಹುಟ್ಟುತ್ತದೆ. ಯಾರಾದರೂ ಹಣವಂತರಾದರೆ ಬಾಧಕವಿಲ್ಲ, ಅವರು ಖರ್ಚು ಮಾಡಬಹುದು. ಆದರೆ ಪೂರ್ವಿಕರು ಸಂಪಾದನೆ ಮಾಡಿಟ್ಟಿರಬಹುದಾದ ಅಥವ ಆತನೇ ಸಂಪಾದನೆ ಮಾಡಿಟ್ಟುಕೊಂಡಿದ್ದ ಹಣವನ್ನು ಇಂಥ ಚುನಾವಣೆಗಳಲ್ಲಿ ಖರ್ಚು ಮಾಡಬಹುದು. ಆತನಿಗೆ ಜೀವನೋಪಾಯಕ್ಕೆ ಬೇರೆ ಮಾರ್ಗವಿಲ್ಲದಿದ್ದರೆ ರಾಜಕೀಯವನ್ನೇ ಜೀವನಕ್ಕೆ ಆಧಾರವಾಗಿ ಮಾಡಿಕೊಳ್ಳುವ ಅವಶ್ಯಕತೆ ಬರುತ್ತದೆ. ಹೆಚ್ಚು ಬಡವರಿರುವ ನಮ್ಮ ದೇಶದಲ್ಲಿ ಹೆಚ್ಚು ಹಣ ಖರ್ಚು ಮಾಡಿ ಚುನಾವಣೆಗಳಲ್ಲಿ ನಿಲ್ಲುವುದಕ್ಕೆ ಅನೇಕ ಜನ ಸಿದ್ಧರಾಗಿಲ್ಲ. ಅಂಥ ಜನರ ಸಂಖ್ಯೆಯೂ ಕೂಡ ಕಡಿಮೆ. ಹೀಗಿರುವಾಗ ಒಂದೊಂದು ಡಿಸ್ಟ್ರಿಕ್ಟ್ ಬೋರ್ಡಿಗೆ 25ಜನ, 30ಜನ, 40 ಜನ ಬರತಕ್ಕ ಸಂದರ್ಭದಲ್ಲಿ ಅವರು ಯಾವ ದೊಡ್ಡ ಪಾಲಿಸಿಗಳ ವಿಷಯ, State matters, ಇಂಥವುಗಳನ್ನು ಚರ್ಚೆ ಮಾಡಬೇಕಾಗುತ್ತದೆ ಎಂದು ನನಗೆ ಅರ್ಥವಾಗುವುದಿಲ್ಲ. ಅವರು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಹಳ್ಳಿಯಿಂದ ಹಳ್ಳಿಗೆ

(SRI D. DEVARAJ URS.)

ರಸ್ತೆಗಳು, ಭಾವಿಗಳು ಮುಂತಾದ ಕೆಲಸಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಿಂದ ಮಾಡಿಸಿಕೊಳ್ಳುತ್ತಾರೆಯೇ ಹೊರತು ಅಲ್ಲಿ ಯಾವ ಮುಖ್ಯ ವಿಚಾರಗಳ ಮೇಲೂ ಚರ್ಚೆ ಮಾಡಬೇಕಾದ ಅವಶ್ಯಕತೆ ಇಲ್ಲ. ಹೀಗಿರಬೇಕಾದರೆ ಈ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ನಿಲ್ಲುವವರು, ಜನರಲ್ electionsನಲ್ಲಿ ಖರ್ಚು ಮಾಡುವಂತೆ ಖರ್ಚು ಮಾಡಬೇಕಾದ ಪ್ರಮೇಯವಿಲ್ಲ. ಆದುದರಿಂದ ಒಂದು ತಾಲ್ಲೂಕನ್ನು ಒಂದು ಚುನಾವಣಾ ಕ್ಷೇತ್ರವನ್ನಾಗಿ ಮಾಡಿ, multi-member constituency ಮಾಡಿ ಮೂರು ಜನ ಒಟ್ಟಿಗೆ ನಿಲ್ಲುವಂತೆ ಮಾಡುವುದು ಒಳ್ಳೆಯದಲ್ಲ.

ಇನ್ನೂ ಒಂದು ವಿಚಾರ. ಕೆಲವರು ಮೂರು ಜನ ಉಮೇದುವಾರರೂ ಒಟ್ಟಿಗೆ ಕಲೆತು ಕೆಲಸ ಕಾರ್ಯಗಳನ್ನು ಮಾಡಿದರೆ ಅವರಿಗೆ ಆಗುವ ಖರ್ಚು ಕಡಿಮೆ ಬೀಳುತ್ತದೆಂದು ಹೇಳಿದರು. ಯಾವ ರೀತಿಯಲ್ಲೇ ಯೋಚಿಸಲಿ ಇದು ಸಾಧುವಾದ ಅಭಿಪ್ರಾಯವಲ್ಲ. ಒಂದು ಪಾರ್ಟಿಯವರು ಮೂರು ಜನ, ಇನ್ನೊಂದು ಪಾರ್ಟಿಯವರು ಮೂರು ಜನ ಹೀಗೆ ನಿಲ್ಲುತ್ತಾರೆಂದು ಹೇಳುವುದು ಸರಿಯಲ್ಲ. ಈ ರೀತಿ ಒಟ್ಟಿಗೆ ಕೆಲಸ ಮಾಡುವುದರಿಂದ ಖರ್ಚು ಮಾತ್ರ ಕಡಿಮೆಯಾಗುವುದಿಲ್ಲ. ಇನ್ನೂ ಜಾಸ್ತಿಯಾಗುತ್ತದೆ. ಮತ್ತು ತಮಗೆ ಗೊತ್ತಿರುವಹಾಗೆ, ಮಲೆನಾಡು ಪ್ರದೇಶದಲ್ಲಿ ಒಂದೊಂದು ತಾಲ್ಲೂಕೂ ಎಷ್ಟೋ ಚದರ ಮೈಲಿಗಳ ವಿಸ್ತೀರ್ಣ ಇರುತ್ತದೆ. 10 ಮನೆ, 25 ಮನೆ, 40 ಮನೆ ಹೀಗೆ ಒಂದೊಂದು ಕಡೆ ಇರತಕ್ಕ ಪ್ರದೇಶಗಳೇ ಹೆಚ್ಚು. ಇಲ್ಲಿ ಜನಸಂಖ್ಯೆ ಕಡಮೆಯಾದರೂ ತಿರುಗಬೇಕಾದರೆ ಆಗುವ ಖರ್ಚು ಮತ್ತು ಕಷ್ಟ ಮಾತ್ರ ಒಂದೇ ಎಂದು ಹೇಳಬಹುದು. ಆದುದರಿಂದ ಈ ರೀತಿಯ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ತೀರ್ಮಾನ ಮಾಡಬೇಕಾಗಿದೆ. 25 ಸಾವಿರ ಅಥವ 30 ಸಾವಿರಕ್ಕೆ ಅಥವಾ ಒಂದೊಂದು ಹೋಬಳಿಗೆ ಒಂದೊಂದು ಚುನಾವಣಾ ಕ್ಷೇತ್ರದಂತೆ ಮಾಡಿದರೆ ಬಹಳ ಒಳ್ಳೆಯದು. ಅಲ್ಲದೆ ಈ ರೀತಿ ಹೋಬಳಿ constituency ಮಾಡುವುದರಿಂದ ಆ ಕ್ಷೇತ್ರದಲ್ಲಿರುವ ರೈತರು ತಮ್ಮ ಪೈಕಿ ಯಾರಾದರೊಬ್ಬರನ್ನು ಆರಿಸುವುದಕ್ಕೆ ಇದರಿಂದ ಅವಕಾಶವಾಗುತ್ತದೆ ಮತ್ತು ಮಧ್ಯವರ್ಗದವರು ಮತ್ತು ಕೆಳದರ್ಜೆಯಲ್ಲಿರುವವರು ಇವರುಗಳು ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಈ ರೀತಿ ಕ್ಷೇತ್ರ ವಿಂಗಡಣೆಯಿಂದ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಹಾಗಾಗುತ್ತದೆ. ಈ ಎಲ್ಲ ಕಾರಣಗಳಿಂದ multi-member constituency ಗಿಂತ single-member constituency ಇರಬೇಕಾದ್ದು ಅತ್ಯಗತ್ಯವೆಂದೂ, ಈ ತಿದ್ದುಪಡಿಯಾಗಬೇಕು ಎಂದೂ ಹೇಳಿ ಈಗ ತಂದಿರುವ ಮಸೂದೆಯನ್ನು ಸಮರ್ಥಿಸುತ್ತೇನೆ.

*ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಸರ್ಕಾರದವರು ಈಗ ತಂದಿರತಕ್ಕ ಗ್ರಾಮಪಂಚಾಯಿತಿ ಮತ್ತು ಜಿಲ್ಲಾಬೋರ್ಡುಗಳ ತಿದ್ದುಪಡಿ ಮಸೂದಾ ಕಾನೂನನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಬಹುಕಾಲದಿಂದ ಜನತೆ ಸಂಸ್ಥಾನದಲ್ಲಿ ಜಿಲ್ಲಾಬೋರ್ಡು ಚುನಾವಣೆಯಾಗಬೇಕೆಂದು ನಿರೀಕ್ಷಿಸುತ್ತಿದ್ದರು ಮತ್ತು ಕಾರಣಾಂತರದಿಂದ ಅದು ನಿಂತಿತ್ತು. ಈಗಲಾದರೂ ಕೂಡ ಅದು ಕಾರ್ಯರೂಪಕ್ಕೆ ಬರುವುದಕ್ಕೆ ಅನುಕೂಲವಾಗತಕ್ಕ ರೀತಿಯಲ್ಲಿ ಈ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರದವರು ಮುಂದೆ ಬಂದಿರುವುದು ಸ್ವಾಗತಾರ್ಹವಾದುದೆಂದು ತಿಳಿಸಲಿಚ್ಛಿಸುತ್ತೇನೆ.

ಈ ಸಂದರ್ಭದಲ್ಲಿ ಈ ಮಸೂದಾ ಕಾನೂನಿನಲ್ಲಿ ಮುಖ್ಯವಾದ ಕೆಲವು ಅಂಶಗಳ ಬಗ್ಗೆ ವಿವಾದಾಸ್ಪದವಾಗಿ ಚರ್ಚೆ ನಡೆಯುತ್ತಿರುವುದನ್ನು ನಿನ್ನೆ ಮತ್ತು ಈ ದಿನ ನಾನು ಕೇಳಿದ್ದೇನೆ. ಇದರಲ್ಲಿ ಮುಖ್ಯವಾಗಿರತಕ್ಕದ್ದು ಜಿಲ್ಲಾ ಬೋರ್ಡುಗಳಿಗೆ ನೇರವಾದ ಚುನಾವಣಾ ಪದ್ಧತಿ ಮತ್ತು single member constituency ಇರಬೇಕೇ multi-member constituency ಇರಬೇಕೇ ಎಂಬ ವಿಚಾರ. ಈ ಮಸೂದಾ ಕಾನೂನಿನಲ್ಲಿರುವ ಪ್ರಕಾರ multi-member constituency ಇರಬೇಕೆಂಬ ಸೂಚನೆ ಇದೆ. ಇದರ ಬಗ್ಗೆ ಮಾನ್ಯ ಸದಸ್ಯರು ವಿವಿಧಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನಾದರೋ ಈ ನೇರವಾದ ಚುನಾವಣಾ ಪದ್ಧತಿಯನ್ನು ಜಾರಿಗೆ ತರಬೇಕು, ಅದರ ಪ್ರಕಾರ ಚುನಾವಣೆಗಳನ್ನು ನಡೆಸಬೇಕು ಎಂದು ಸರ್ಕಾರದವರು ತಂದಿರುವುದು ಬಹಳ ಒಳ್ಳೆಯದು ಎನ್ನುವ ಅಭಿಪ್ರಾಯವನ್ನು ಹೊಂದಿದ್ದೇನೆ. ನೇರವಾದ ಚುನಾವಣಾ ಪದ್ಧತಿಯನ್ನು ವಿರೋಧ ಮಾಡತಕ್ಕ ಸಂದರ್ಭದಲ್ಲಿ ಅನೇಕರು ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಆದರೆ ನನಗೆ ತೋರುವುದರಲ್ಲಿ ಪ್ರಜಾ ಪ್ರಭುತ್ವವನ್ನು ನಾವು ಪ್ರತಿಪಾದಿಸುತ್ತಿದ್ದೇವೆಂದು ಹೇಳಿಕೊಳ್ಳತಕ್ಕ ಪ್ರತಿಯೊಬ್ಬರೂ ಕೂಡ ಆ ತತ್ವವನ್ನನುಸರಿಸಬೇಕಾಗಿದೆ. ಈ ರೀತಿಯಾಗಿ ಪರಿಶೀಲನೆ ಮಾಡಿ ನೋಡಿದಲ್ಲಿ ಪರೋಕ್ಷವಾದ ಚುನಾವಣೆಯನ್ನು ಈ ಜಿಲ್ಲಾ ಬೋರ್ಡುಗಳಲ್ಲಿ ಜಾರಿಗೆ ತರುವುದು ಪ್ರಜಾ ಪ್ರಭುತ್ವತತ್ವಕ್ಕೆ ಹೊಂದಿಕೊಳ್ಳುವುದಿಲ್ಲವೆಂದು ನಾನು ಖಚಿತವಾಗಿ ಹೇಳಬಹುದಾಗಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೆಲ್ಲರೂ ತಮಗೆ ಬೇಕಾಗಿರತಕ್ಕ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವುದಕ್ಕೆ, ವಯಸ್ಸಾಗಿರುವ ಪ್ರತಿಯೊಬ್ಬನೂ ಕೂಡ ತನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸುವುದಕ್ಕೆ ಅವಕಾಶವಿರಬೇಕು. ಈ ವಿಚಾರಗಳ ಮೇಲೆ ಪ್ರತಿಯೊಬ್ಬ ಸದಸ್ಯರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದರಿಂದ ನಾನೂ ಸಹ ಎರಡು ಮಾತುಗಳನ್ನು ಹೇಳಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಬಹಳ ದೂರ ತಪ್ಪು ಮಾಡಿದಂತಾಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇದು ಜಿಲ್ಲಾಬೋರ್ಡುಗಳಿಗೆ ಸಂಬಂಧಪಟ್ಟ ವಿಚಾರ. ತಾಲ್ಲೂಕು ಬೋರ್ಡುಗಳ ರಚನೆ ಮಾಡತಕ್ಕ ಬಗ್ಗೆ ವಿರೋಧ ಪಕ್ಷದವರು ಮತ್ತು ಸ್ವತಂತ್ರರೂ ಕೂಡ ಅದರ ತತ್ವ. ರಚನೆ ಮತ್ತು ಅದರ ಕಾರ್ಯಗಳಬಗ್ಗೆ ಸರಿಯಾದ ಒಂದು ಅಭಿಪ್ರಾಯವನ್ನು ತಾಳಿದಂತೆ ಇಲ್ಲ. ಅದನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲಿಲ್ಲವೋ ಏನೋ ಎಂದು ಭಾವಿಸುತ್ತೇನೆ. ತಾಲ್ಲೂಕು ಬೋರ್ಡುಗಳು, ಹಿಂದೆ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳು ರಚನೆಯಾಗಿ ಅವುಗಳ ಕೆಲಸಕಾರ್ಯಗಳು ನಡೆದು ನಾವುಗಳನೇಕರು ಕಣ್ಣಾರೆ ಕಂಡಿದ್ದೆವು ಮತ್ತು ಅನೇಕರು ಇದರಲ್ಲಿ ಭಾಗವಹಿಸಿ ಕೆಲಸ ಮಾಡಿದ್ದೆವು, ಸರಿಯಾದ ರೀತಿಯಲ್ಲಿ ಅವುಗಳನ್ನು ನಡೆಸಿಕೊಂಡು ಬಂದು ಕೆಲಸ ಮಾಡಿದರೆ ಒಂದು ಸುಖೀ ರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೆ ಈ ಸಂಸ್ಥೆಯಿಂದ ಸಹಾಯವಾಗುತ್ತದೆನ್ನುವುದು ನಿರ್ವಿವಾದವಾದುದು. ಹಿಂದೆ Development Committee ಗಳು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ, ಈ ದಿವಸ ಟೀಕೆ ಮಾಡಿದವರಲ್ಲಿ ಅನೇಕರು ಆಗಲೂ ಕೂಡ ಮಾಡಿರುವ ಟೀಕೆಗಳನ್ನು ಗಮನಿಸಿದ್ದೇನೆ. ಇದರಲ್ಲಿ ಒಂದೇ ಒಂದು ಹೆಚ್ಚು ವಿಷಯ

ಕಂಡುಬರುತ್ತದೆ. ಅದೇನೆಂದರೆ ಈ ಸಂಸ್ಥೆಗಳು ಸರ್ಕಾರದಿಂದ ನಾಮಿನೇಟ್ ಮಾಡಲ್ಪಟ್ಟ ಸದಸ್ಯರಿಂದ ಕೂಡಿದ್ದು. ಕೆಲಸ ಕಾರ್ಯಗಳನ್ನು ನಡೆಸುತ್ತಾ ಹೋದರೆ ಸರ್ಕಾರದವರು ತಮ್ಮ ಪಕ್ಷವನ್ನು ಪ್ರಬಲಗೊಳಿಸುವುದಕ್ಕೆ ಸಹಾಯವಾಗುತ್ತದೆ ಮತ್ತು ಬೇರೆ ಪಕ್ಷದವರಿಗೆ ಜನತೆಯಲ್ಲಿ prominence ಗಳಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ಒಂದು ಶಂಕೆ ಮಾತ್ರ ಬೇರೆಯವರಲ್ಲಿದೆಯೇ ಹೊರತು ಯಾವುದೋ ಒಂದು ಆಧಾರಭೂತವಾಗಿರತಕ್ಕದ್ದು ಅದರಲ್ಲಿ ಕಾಣುವುದಿಲ್ಲವೆನ್ನುವುದು ನನ್ನ ನಿರ್ದಿಷ್ಟವಾದ ಅಭಿಪ್ರಾಯ.

ಇನ್ನು constituency ರಚನೆ ಬಗ್ಗೆ single member constituency ಇರಬೇಕೇ, ಅಥವಾ multi-member constituency ಇರಬೇಕೇ ಎನ್ನುವ ವಿವಾದ ಬಂದು, multi-member constituency ಇರುವುದರಿಂದ ಬಹಳ ತೊಂದರೆಯಾಗುತ್ತದೆ, ಸರಿಯಾದ ಪ್ರತಿನಿಧಿಗಳು ಬರುವುದಕ್ಕೆ ಅವಕಾಶವಾಗುವುದಿಲ್ಲವೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನನಗೇನೋ ಇದರಲ್ಲಿ ಅಷ್ಟಾಗಿ ತಿರುಳಿದೆಯೆಂದು ಅರ್ಥವಾಗಲಿಲ್ಲ. I fail to under stand if there is any real difficulty in getting real representatives in the case of Multi-member Constituencies. ಇದು ಕೇವಲ ತಾಲ್ಲೂಕು ಮಟ್ಟದಲ್ಲಿ ನಡೆಯತಕ್ಕದು; ಡಿಸ್ಟ್ರಿಕ್ಟ್ ಮಟ್ಟದಲ್ಲಿಲ್ಲ ಅಥವಾ State ಮಟ್ಟದಲ್ಲಿಲ್ಲ ಅಲ್ಲಿರತಕ್ಕ ಪ್ರಜಾಸಂಖ್ಯೆಯಾದರೂ 10,000 ವಿರಬಹುದು.

2 P.M.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಮೈಸೂರು ದೇಶದಲ್ಲಿ ಎಲ್ಲಿಯಾದರೂ ನೋಡಿದ್ದೀರಾ ಅಥವಾ ಕೇಳಿದ್ದೀರಾ 10,000 ಪ್ರಜಾಸಂಖ್ಯೆಯಿರುವ ತಾಲ್ಲೂಕನ್ನು?

ಶ್ರೀ ವಿ. ಮಸಿಯಪ್ಪ.—ಮಾನ್ಯ ಗೋಪಾಲಗೌಡರು ಮಾತನಾಡುವಾಗ ಮಾನ್ಯ ಸದಸ್ಯರು ಇಲ್ಲಿರಲಿಲ್ಲ. ಇಲ್ಲಿ ನಡೆದಿರತಕ್ಕ ವಿದ್ಯಮಾನಗಳನ್ನು ತಿಳಿಯದೆ ನಾವು ಹೇಳುವುದನ್ನು ಅಷ್ಟು ಸುಲಭವಾಗಿ ಟೀಕೆ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ 10 ಸಾವಿರ ಅಥವಾ 15 ಸಾವಿರ ಪ್ರಜೆಗಳಿರುವ ಒಂದು ತಾಲ್ಲೂಕನ್ನು ಯೂನಿಟ್ಟಾಗಿಟ್ಟುಕೊಂಡು ಅಲ್ಲಿಂದ ಮೂರು ಜನರನ್ನು ಆರಿಸತಕ್ಕದ್ದು ನಮ್ಮ ಮತದಾರರಿಗೆ ಅಷ್ಟೇನೂ ಕಷ್ಟವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಚುನಾವಣಾ ಪದ್ಧತಿಯ ವಿಚಾರದಲ್ಲಿ Secret Ballot ನಿಂದ ತೊಂದರೆಯಿದೆಯೆಂಬ ವಿಚಾರವನ್ನು ಶ್ರೀ ದೇವರಾಜ ಅರಸ್‌ನವರು ಬಹಳ ಮಟ್ಟಿಗೆ ಸೂಚಿಸಿದ್ದಾರೆ. ಅದರಲ್ಲೂ 3 ಜನರಿಗಿಂತ ಜಾಸ್ತಿ ಇರುವಾಗ ಗುರುತುಗಳನ್ನು ಕೊಡದೆ ಇದ್ದರೆ ಬಹಳ ತೊಂದರೆಯಾಗುತ್ತದೆಯೆಂದು ಹೇಳಿದರು. ಆದರೆ ಒಂದು ವಿಷಯ Secret ಬ್ಯಾಲೆಟ್ ಎನ್ನುವುದೇನಿದ್ದರೂ ಒಂದು relative term. ಏಕೆಂದರೆ ಮೊನ್ನೆ ನಡೆದ ಅಸೆಂಬ್ಲಿ ಚುನಾವಣೆಗಳಲ್ಲೂ ಕುರುಡರು ಮುಂತಾದವರಿಗೆ ಪೆಟ್ಟಿಗೆ ನೋಡಿ ಹಾಕುವುದಕ್ಕೆ ಆಗದಿರುವವರಿಗೆ ಸಹಾಯ ಮಾಡುವುದಕ್ಕಾಗಿ ಬೇರೆಯವರು ಹೋಗಿದ್ದೂ ಉಂಟು. ಅವಿದ್ಯಾವಂತರು, ಅನಕ್ಷರಸ್ಥರು ವೋಟುಮಾಡುವುದಕ್ಕೆ ಹೋದರೆ ಪೋಲಿಂಗ್ ಆಫೀಸರು ಅವರಿಗೆ ಸಹಾಯ ಮಾಡುವುದಕ್ಕೆ ಅಭ್ಯಂತರವಿಲ್ಲವೆಂದು ಮೊದಲಿನಿಂದಲೂ ಹೇಳಿದೆ. ಆದ್ದರಿಂದ ನಮ್ಮ ದೇಶದಲ್ಲಿ ಎಲ್ಲಿಯವರೆಗೆ ಅವಿಧ್ಯಾವಂತರಿದ್ದಾರೋ ಅಲ್ಲಿಯವರೆಗೂ Secrecy of Ballot ಎಂಬುದು ಕೇವಲ ಹೆಸರಿಗೆ ಮಾತ್ರ ಇರುತ್ತದೆ ಅಷ್ಟೆ. ಆದ್ದರಿಂದ ಮೂರು ಜನರು ಇರತಕ್ಕ ಕಡೆಗಳಲ್ಲೂ ಕೂಡ ಉಮೇದುವಾರರನ್ನು ಆರಿಸುವುದರಲ್ಲಿ ಕಷ್ಟವಾಗುತ್ತದೆಂಬುದಾಗಲಿ, ಬಣ್ಣದ ಪೆಟ್ಟಿಗೆಗಳಿದ್ದರೂ ಅವುಗಳನ್ನು ಗುರುತು ಮಾಡುವುದು ಕಷ್ಟವಾಗುತ್ತದೆಂಬುದನ್ನು ಹೇಳುವುದಾಗಲಿ ನಿಲ್ಲತಕ್ಕವಾದವಲ್ಲ. ಆದ್ದರಿಂದ ಈಗ ತಂದಿರತಕ್ಕ ರೀತಿಯಲ್ಲಿ ಈ ಮಸೂದೆಯಲ್ಲಿರತಕ್ಕ ತಿದ್ದುಪಡಿ ಅಂಶಗಳು ಬಹಳ ಸೂಕ್ತವಾಗಿವೆ. ಇದಕ್ಕೆ ಮಾನ್ಯ ಸದಸ್ಯರು ಅನುಮತಿ ಕೊಟ್ಟು ಜಾರಿಗೆ ತರುವುದಕ್ಕೆ ಅವಕಾಶ ಕೊಡುವುದು ಒಳ್ಳೆಯದು.

ಇನ್ನು ವರಮಾನದ ಬಗ್ಗೆ ಶೇಕಡ 6 1/4 ನಷ್ಟು ಖೋತಾ ಮಾಡಿರುವ ಬಗ್ಗೆ ಕೆಲವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜಿಲ್ಲಾ ಬೋರ್ಡುಗಳ ಆಡಳಿತ ಎಲ್ಲಾ ಕಡೆಯಲ್ಲೂ ಸರ್ವ ಸಮರ್ಪಕವಾದ ರೀತಿಯಲ್ಲಿ, ಮೆಚ್ಚಿಕೆಯನ್ನು ಪಡೆಯತಕ್ಕ ರೀತಿಯಲ್ಲಿ ನಡೆದಿದೆಯೆಂದು ಯಾರೂ ಹೇಳುವ ಸ್ಥಿತಿಯಲ್ಲಿಲ್ಲ. ಅವರಿಗೆ ಕೊಟ್ಟಿರತಕ್ಕ ಒಂದೊಂದು ಕಾಸನ್ನೂ ಸದ್ವಿನಿಯೋಗವಾಗಿದೆಯೆಂದು ಯಾರೂ ಹೇಳಲಾರರು. ಈ ಸಭೆಯಲ್ಲಿ ಬಂದಿದ್ದ ಪ್ರಶ್ನೆಗಳಿಗೆ ಒದಗಿಸಲಾಗಿದ್ದ ಉತ್ತರಗಳನ್ನು ಕ್ರೋಢೀಕರಿಸಿ ಹೇಳುವುದಾದರೆ, ಅವು ಸರಿಯಾಗಿ ಕೆಲಸ ನಡೆಸಿಲ್ಲವೆಂದು ಅರ್ಥವಾಗುತ್ತದೆ. ಆದ್ದರಿಂದ ಅಲ್ಲಿ ಇನ್ನೂ ಮಾರ್ಪಾಟಾಗುವುದರ ಅವಶ್ಯಕತೆಯಿದೆ. ಎಲ್ಲಿ ನಾಲ್ಕಾರು ಪ್ರತಿನಿಧಿಗಳು ಸೇರಿ ಕೆಲಸ ಮಾಡುತ್ತಾರೋ, ಅಲ್ಲಿ ಮಾನವ ಸಹಜವಾದ ಲೋಪದೋಷಗಳು ಬಂದೇ ಬರುತ್ತವೆ. ಆದ್ದರಿಂದ ಅಲ್ಲಿಗೆ ಹಾಕುತ್ತಿದ್ದ ಹಣವನ್ನು ಕಡಮೆ ಮಾಡುವುದು ಸರಿಯಾದದ್ದಲ್ಲವೆಂದು ವಾದ ಮಾಡುವುದಾಗಲಿ, ಅವರು ಕೈಕೊಂಡ ಕೆಲಸಕಾರ್ಯಗಳಿಗೆ ಹಣ ಸಾಲದಾಗುತ್ತದೆಂದು ಹೇಳುವುದಾಗಲಿ ಪ್ರಧಾನವಾದ ಕಾರಣವಲ್ಲ. ಈಗ ನಮ್ಮ ಮುಂದಿರುವ ಒಂದನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳ ಸಂದರ್ಭದಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಕೆಲಸಕಾರ್ಯಗಳನ್ನು ಮಾಡಬೇಕಾಗಿರುವಾಗ, ಪ್ರತಿಯೊಂದು ಹಳ್ಳಿಗೂ ಬೇಕಾದ ನಾಗರಿಕ ಸೌಕರ್ಯವನ್ನು ಒದಗಿಸಿಕೊಡಬೇಕೆಂಬ ಯೋಜನೆಯನ್ನು ಸರ್ಕಾರದವರಿಟ್ಟುಕೊಂಡಿರುವಾಗ ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡತಕ್ಕ ಹಣವನ್ನು ಸ್ವಲ್ಪ ಕಡಮೆ ಮಾಡಿ, ಅದೇ ಹಣವನ್ನು ಇನ್ನೂ ಜಾಗ್ರತೆ ಮತ್ತು ಸುಲಭದಲ್ಲಿ ಹಳ್ಳಿಗಳ್ಳಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುವುದಾಗಲಿ ಅಥವಾ ಈಗ ತಾವು ಮನಸ್ಸು ಮಾಡಿರುವಂತೆ ತಾಲ್ಲೂಕ್ ಬೋರ್ಡಿಗೆ ಕೊಟ್ಟು ಆ ಮುಖಾಂತರ ಹಳ್ಳಿಗಳಿಗೆ ಸೌಕರ್ಯವುಂಟಾಗುವಂತೆ ಮಾಡುವುದಾಗಲಿ ತಪ್ಪಾಗಲಾರದು. ಈ ದೃಷ್ಟಿಯಿಂದ, ವೆಂಕಟಪ್ಪ ಕಮಿಟಿಯವರ ಶಿಫಾರಸಿನಂತೆ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ $12\frac{1}{2}$ ಕೊಡಬೇಕೆಂದಿದ್ದುದನ್ನು ಶೇಕಡ $6\frac{1}{4}$ ಗೆ ಇಳಿಸಿರುವುದು ನ್ಯಾಯವಾಗಿದೆ. ಪಂಚವಾರ್ಷಿಕ ಯೋಜನೆಯ ದೃಷ್ಟಿಯಿಂದ ಮಾಡಿರುವ ಈ ಬದಲಾವಣೆಯೇ ಒಂದು ದೊಡ್ಡ ಬದಲಾವಣೆಯೆಂದು ಭಾವಿಸಕೂಡದು. ಇದಲ್ಲದೆ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಬೇಕಾದರೆ, ಅವರು ಕೈಕೊಳ್ಳುವ ಕೆಲಸಗಳಿಗೆ, ಇಲ್ಲ Statuteನಲ್ಲಿ ಕೊಟ್ಟಿರುವುದೇ ಅಲ್ಲದೆ, ಡಿಸ್ಟ್ರಿಕ್ಟ್ ಬೋರ್ಡಿನಿಂದ ಅಂಗೀಕೃತವಾದ ಒಂದು ನಿರ್ಣಯದ ಮೇಲೆ ಸರ್ಕಾರಕ್ಕೆ ಶಿಫಾರಸು ಬಂದರೆ, ಅದರ ಮೇಲೆ ಸರ್ಕಾರದವರು ಅದಕ್ಕೆ ಹೆಚ್ಚಿಗೆ ದುಡ್ಡು ಕೊಡಬಹುದೆಂದೂ ಇದೆ. ಜೊತೆಗೆ ಸೆಸ್ಸು ವಗ್ಯೆರೆ

(ಶ್ರೀ ವಿ. ಮುನಿಯಪ್ಪ.)

ಗಳನ್ನು ಬೇಕಾದರೂ ಹಾಕಿ ಹಣ ಬರಮಾಡಿಕೊಳ್ಳ ಬಹುದು. ಆದ್ದರಿಂದ ಶೇಕಡ $6\frac{1}{4}$ ಮಾಡಿದ್ದರಿಂದ ಡಿಸ್ಟ್ರಿಕ್ಟ್ ಬೋರ್ಡಿನ ಕೆಲಸಕಾರ್ಯಗಳಿಗೆ ಧಕ್ಕೆ ತಂದಂತಾಗಲಿಲ್ಲವೆಂದು ನನ್ನ ಅಭಿಪ್ರಾಯ.

ಆಮೇಲೆ, ಇನ್ನೊಂದು ಮುಖ್ಯವಾದ ವಿಷಯ, ಯಾರು ಉಮೇದುವಾರರಾಗಿ ನಿಲ್ಲಬಹುದು ಎಂಬುದು. ಈ ತಿದ್ದುಪಡಿ ಮಸೂದೆಯಲ್ಲಿ ವೋಟುದಾರರು ಯಾರೆಂಬುದನ್ನು ತಿಳಿಸಿದ್ದಾರೆ. ಉಮೇದುವಾರರಾಗಿ ನಿಲ್ಲುವವರು ಯಾವ ಪ್ರದೇಶದಿಂದಲಾದರೂ ನಿಲ್ಲಬಹುದೆಂಬ ಅಭಿಪ್ರಾಯವಿದೆ. ಇದು ಹಿಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿ ಬಿಲ್ಲು ಆಕ್ಟ್ ಆಗುವಾಗ ಬಹಳ ಚರ್ಚೆ ಮಾಡಲ್ಪಟ್ಟು ಕೊನೆಗೇನೋ ಒಂದು ತೀರ್ಮಾನಕ್ಕೆ ಬಂದದ್ದಾಗಿದೆ. ಆಗ ಅವರು ಯಾವ ಉದ್ದೇಶದಿಂದ ನಗರ ಮತ್ತು ಕಾರ್ಪೊರೇಷನ್ ಪ್ರದೇಶದಲ್ಲಿರುವವರೂ ಉಮೇದುವಾರರಾಗಬಹುದೆಂದೂ, ವೋಟುದಾರರು ಮಾತ್ರ ಆಗಕೂಡದೆಂದು ಮಾಡಿದರೋ ಗೊತ್ತಿಲ್ಲ. ಅಂತೂ ಇದೊಂದು ವಿರೋಧಾಭಾಸವಾಗಿದೆ. ಒಂದು ವೇಳೆ ಅಲ್ಲಿಂದ ಒಬ್ಬನು ಉಮೇದುವಾರನಾಗುವುದಕ್ಕೆ ಅರ್ಜಿ ಕೊಟ್ಟರೆ, ಅದರ ಮೇಲೆ, ಆ ಮನುಷ್ಯನಿಗಿರುವ ಹಕ್ಕೇನು, ಅವನು ಆ ನಗರದಲ್ಲಿ ವಾಸಮಾಡುತ್ತಿದ್ದಾನೆಯೇ ಇಲ್ಲವೇ ಅಥವಾ ಅವನು domiciled ಮೈಸೂರಿನವನೇ—ಈ ಅಂಶಗಳನ್ನಾದರೂ ನಿರ್ಧರಿಸುವುದಕ್ಕೆ ಮಾರ್ಗ ಯಾವುದು? 25 ವರ್ಷ ಆಗಿದೆಯೇ ಇಲ್ಲವೇ, disqualification ಇಲ್ಲದಿರುವ ಆ ಉಮೇದುವಾರ ಮೈಸೂರಿನವನೇ ಅಲ್ಲವೇ, ತಾಲ್ಲೂಕು ಪ್ರದೇಶದಲ್ಲಿ ವಾಸವಾಗಿದ್ದಾನೆಯೇ ಇಲ್ಲವೇ ಎಂಬುದನ್ನಾದರೂ ನಿರ್ಧಾರಮಾಡುವುದಕ್ಕೆ ರಿಟರ್ನಿಂಗ್ ಆಫೀಸರಿಗೆ ಇರುವ basis ಆದರೂ ಏನು? ಅರ್ಜಿಯನ್ನು ಅಂಗೀಕಾರ ಮಾಡುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಅವನಿಗಿರುವ ಆಧಾರವೇನು? ಹಿಂದಿದ್ದ ಕಾನೂನಿನಲ್ಲಿರುವುದನ್ನೇ ಉಳಿಸಿಕೊಂಡಿದ್ದೇವೆಂದು ನಿನ್ನೆ ಹೇಳಿದರು. ಅದಿರಬಹುದು. ಆದರೂ ಹಿಂದಿದ್ದ ಕಾನೂನಿನಲ್ಲಿ ಏನಾದರೂ ಕ್ಲಿಷ್ಟ ಸಮಸ್ಯೆಯಿದ್ದರೆ ಅದನ್ನು, ಈಗಿನ ಸಂದರ್ಭದಲ್ಲಿ ಬದಲಾಯಿಸುವುದು ಅತ್ಯಾವಶ್ಯಕವಾಗಿದ್ದರೆ ಆ ರೀತಿ ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಇಷ್ಟು ಹೇಳಿ ಮಾನ್ಯ ಸದಸ್ಯರು ಈ ಮಸೂದೆಯನ್ನು ಜಾಗ್ರತೆ pass ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಹರಿಯಾಪಟ್ಟಣ).—ಅಧ್ಯಕ್ಷರೇ, ಜಿಲ್ಲಾಬೋರ್ಡಿಗೆ ಸಂಬಂಧಪಟ್ಟ ಈ ತಿದ್ದುಪಡಿ ಮಸೂದಾ ಕಾನೂನಿನಲ್ಲಿ ಮುಖ್ಯವಾಗಿ ಎರಡು ಅಂಶಗಳು ಮಾತ್ರ ಪ್ರತಿಪಾದಿಸಲ್ಪಟ್ಟಿವೆ. ಒಂದನೆಯದಾಗಿ Direct Election ಆಗಬೇಕೆಂಬುದು. ಜನಗಳಿಂದ ನೇರವಾಗಿ ಚುನಾಯಿತರಾಗಿ ಬಂದಂಥ ಪ್ರತಿನಿಧಿಗಳು ಜಿಲ್ಲಾ ಬೋರ್ಡಿನಲ್ಲಿ ಕೆಲಸಮಾಡಬೇಕೆಂಬುದು ಮುಖ್ಯವಾದ ಒಂದು ತಿದ್ದುಪಡಿ.

ಶ್ರೀ ವೆಂಕಟಪ್ಪ ಕಮಿಟಿಯವರು ಈ ವಿಷಯವಾಗಿ ಒಂದು ರೀತಿಯ ಸಲಹೆ ಮಾಡಿದ್ದರು. ಆ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಆ ಸಂದರ್ಭದಲ್ಲಿ Indirect Election ಅಂದರೆ, ಪಂಚಾಯಿತಿಗಳು ನೇರವಾಗಿ ಪ್ರಜೆಗಳಿಂದ ಚುನಾಯಿತರಾಗಿ ಬರಲಿ, ಅನಂತರ ಪಂಚಾಯಿತಿ ಸದಸ್ಯರಿಂದ ಚುನಾಯಿತರಾದ ಸದಸ್ಯರು ಜಿಲ್ಲಾಬೋರ್ಡಿನಲ್ಲಿ ಕೆಲಸ ಮಾಡಬೇಕೆಂದು ಹೇಳಿ ಸಲಹೆ ಮಾಡಿದ್ದರು. ಆ ಸಲಹೆಯನ್ನು ಅಂಗೀಕಾರಮಾಡಿ ಒಂದು ಶಾಸನವನ್ನು ತಯಾರುಮಾಡಿದೆವು. ಆ ಶಾಸನ 1952ರಲ್ಲಿ ಮಂಜೂರಾಗಿದ್ದರೂ ಇವೊತ್ತಿನವರೆಗೂ ಅದಕ್ಕನುಗುಣವಾಗಿ ಚುನಾವಣೆಯೇ ನಡೆಯಲಿಲ್ಲ.

ಈ ಸಂದರ್ಭದಲ್ಲಿ ಒಂದಂಶವನ್ನು ಮಾತ್ರ ನಾನು ಸರ್ಕಾರಕ್ಕೆ ಸಲಹೆಮಾಡಲು ಇಷ್ಟಪಡುತ್ತೇನೆ. ಯಾವ ಶಾಸನವೇ ಆಗಲಿ ಅದು ಈ ಮಾನ್ಯ ಸಭೆಯಿಂದ ಅಂಗೀಕಾರವಾದಮೇಲೆ ಆ ಶಾಸನವನ್ನು ಜಾರಿಗೆ ಕೊಟ್ಟು ಅದರಿಂದ ಬರತಕ್ಕ ಕಷ್ಟಸುಖಗಳ ಆಧಾರದ ಮೇಲೆ ತಿದ್ದುಪಡಿಗಳನ್ನು ತರುವುದು ಒಂದು ಸತ್ಸಂಪ್ರದಾಯ. ಹಾಗಿಲ್ಲದೆ, ಶಾಸನವನ್ನು ಮಾಡಿ ಅದನ್ನು ಜಾರಿಗೆ ಕೊಡುವುದರ ಮುನ್ನವೇ ತಿದ್ದುಪಡಿಯನ್ನು ತರುವುದು ಸತ್ಸಂಪ್ರದಾಯವಲ್ಲವೆಂದು ಹೇಳಿದರೆ ಸಾಕು.

ನೇರವಾದ ಚುನಾವಣೆ ಬೇಡ, indirect ಆಗಿ ಪಂಚಾಯಿತಿ ಸದಸ್ಯರುಗಳಿಂದ ಚುನಾವಣೆಯಾಗಬೇಕೆಂಬುದರ ಉದ್ದೇಶವೇನೆಂಬುದು ಎಲ್ಲರಿಗೂ ಗೊತ್ತೇ ಇದೆ. ಎಂದು ಸ್ಥಳೀಯ ಸರ್ಕಾರ ಆ ಸ್ಥಳದ ಸರ್ಕಾರದ ಪರವಾಗಿ ಕಾರ್ಯಕ್ರಮ ನಡೆಸತಕ್ಕ ಸರ್ಕಾರವಾಗಿದೆಯೋ, ಅಂದು, ಅಲ್ಲಿ ಕೆಲಸಮಾಡತಕ್ಕ ಪ್ರತಿನಿಧಿಗಳು ಆಯಾ ಸ್ಥಳದ ಮೂಲೆ ಮೂಲೆಗಳಿಂದ ಬರತಕ್ಕ ಪ್ರತಿನಿಧಿಗಳಾಗಿರಬೇಕು ಮತ್ತು ಪಂಚಾಯಿತಿ ಜಿಲ್ಲಾ ಬೋರ್ಡು ಮತ್ತು ತಾಲ್ಲೂಕ್ ಬೋರ್ಡು ಇವು ಮೂರಕ್ಕೂ ಒಂದು ವಿಧವಾದ ನಿಕಟ ಸಂಪರ್ಕವಿರಬೇಕು, ಪರಸ್ಪರ ಸೌಹಾರ್ದ, ಸಹಕಾರ, ಸಹಾಯಗಳಿಂದ ಕೆಲಸ ಮಾಡಬೇಕು; ಇದು ಸ್ಥಳೀಯ ಸಂಸ್ಥೆಗಳ ಮೂಲ ತತ್ವ. ಎಷ್ಟು ಸಂಸ್ಥೆಗಳೇ ಇರಲಿ, ಆ ಸಂಸ್ಥೆಗಳು ಪರಸ್ಪರ ಪೈಪೋಟಿಯಿಂದ ಕೆಲಸ ಮಾಡತಕ್ಕದ್ದಲ್ಲ, ಪರಸ್ಪರ ವೈಮನಸ್ಯಗಳಿಂದ ಅಧಿಕಾರಗಳಿಗೆ ಹೋರಾಟ ಮಾಡತಕ್ಕದ್ದಲ್ಲ, ಪರಸ್ಪರ Co-ordination ಮತ್ತು ಕೋ-ಆಪರೇಷನ್ನಿನಮೇಲೆ ಕೆಲಸಮಾಡುವುದು ಸೂಕ್ತವೆಂಬ ಮೂಲೋದ್ದೇಶದಿಂದ ವೆಂಕಟಪ್ಪ ಕಮಿಟಿಯವರು ಶಿಫಾರಸು ಮಾಡಿದರು. ಈಗಿರುವ ರೀತಿಯಲ್ಲಿ ನೇರವಾಗಿ ಪಂಚಾಯಿತಿಗಳಿಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಯಾವ ಸಂಬಂಧವೂ ಇಲ್ಲ; ಪಂಚಾಯಿತಿಯ ಸದಸ್ಯರಿಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರಿಗೂ ಸಂಪರ್ಕವಿಲ್ಲ; ಅಲ್ಲಿನ ವ್ಯವಹಾರಗಳಿಗೂ ಇಲ್ಲಿನ ವ್ಯವಹಾರಗಳಿಗೂ ಸಂಪರ್ಕವಿಲ್ಲ. ಈ ರೀತಿಯಾಗಿದ್ದರೆ ಸ್ಥಳೀಯ ಸರ್ಕಾರದ ಬೆಳವಣಿಗೆ ಸರ್ವಸಮರ್ಪಕವಾಗಿ ಆಗಲು ಸಾಧ್ಯವಿಲ್ಲ ಎಂಬುದನ್ನು ಮನಗಂಡು ಅವರಿಗೂ ಇವರಿಗೂ ಸಂಪರ್ಕವುಂಟಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಈಗ ಒಂದು ತಿದ್ದುಪಡಿ ಮಾಡಿದ್ದಾರೆ. ಈಗ ಪ್ರಜಾಭಿಪ್ರಾಯ ರೂಪುಗೊಂಡಿರುವ ಪ್ರಕಾರ ಮಾಡಬೇಕೆಂದು ಸರ್ಕಾರದವರು ಉತ್ಸಾಹದಿಂದ ನಮ್ಮ ಮುಂದೆ ತಿದ್ದುಪಡಿ ಮಸೂದೆಯನ್ನಿಟ್ಟಿದ್ದಾರೆ. ಇದು ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬ ವಿಚಾರದಲ್ಲಿ ಬೇಕಾದಷ್ಟು ಹೇಳಲು ಅವಕಾಶವಿದ್ದರೂ ಕೂಡ ಅದಕ್ಕೆ ಅಷ್ಟು ಗಮನ ಕೊಡಬಾರದು. $1\frac{1}{2}$ ವರ್ಷದಿಂದ ದೇಶಾದ್ಯಂತ ಜಿಲ್ಲಾ ಬೋರ್ಡು ಕೆಲಸ ಕಾರ್ಯನಿಂತು ದೇಶದ ಪ್ರಗತಿ ಸಾಧನೆ ನಿಂತಿರುವುದನ್ನು ನೋಡಿದರೆ ಜಾಗ್ರತೆ ಚುನಾವಣೆಯಾಗಬೇಕು, ಜಿಲ್ಲಾ ಬೋರ್ಡಿನ ರಚನೆಯಾಗಬೇಕ ಎಂಬ ಉದ್ದೇಶ ಎಲ್ಲರ ಮನಸ್ಸಿನಲ್ಲೂ ಇದೆ. ಆದ್ದರಿಂದ ಈಗೇನಾದರೂ ಅಡ್ಡಿ ಆತಂಕಗಳನ್ನು ನಾವು ತಂದೊಡ್ಡಿದರೆ ಜಿಲ್ಲಾ ಬೋರ್ಡು ಚುನಾವಣೆ ಎರಡು ಮೂರು ವರ್ಷಗಳಿಂದ ನಿಂತಿರುವುದು ಇನ್ನೂ ಎರಡು ಮೂರು

ವರ್ಷಗಳವರೆಗೆ ನಿಲ್ಲಬಹುದು. ಆದ್ದರಿಂದ ಬಂದಿರುವ ಸಲಹೆ ಒಪ್ಪಿಕೊಂಡು ಜಾಗ್ರತೆಯಾಗಿ ಚುನಾವಣೆ ನಡೆಯಲು ಅವಕಾಶ ಕಲ್ಪಿಸಬೇಕಾಗುತ್ತದೆ. ಮೂಲೆ ಮೂಲೆಗಳಿಂದ ಬರುವ ಜನರಿಗೆ ಅವಕಾಶವಿರಬೇಕು, ಆದರೆ ಚುನಾವಣೆಗಳಲ್ಲಿ ಸಾವಿರಾರು ರೂಪಾಯಿ ಖರ್ಚುಮಾಡಿ ಮೂಲೆಗಳಲ್ಲಿರುವವರು ಚುನಾಯಿತರಾಗಿ ಬರಲು ಅವಕಾಶವಿಲ್ಲ ಎಂದು ವೆಂಕಟಪ್ಪ ಸಮಿತಿ ವರದಿಯಲ್ಲಿ ಹೇಳಿದ್ದಾರೆ. ಈಗ ನೇರವಾಗಿ ಚುನಾವಣೆಯಾಗಬೇಕೆಂದು ಸರ್ಕಾರ ಮತ್ತು ಸದಸ್ಯರು ಅಭಿಪ್ರಾಯಪಟ್ಟು ಏರ್ಪಾಡು ಮಾಡಿದ್ದಾರೆ. ಹೀಗೆ ನೇರವಾಗಿ ಚುನಾವಣೆ ಮಾಡುವಾಗ ಕಷ್ಟವೇನು ಬರುತ್ತದೆಂಬುದನ್ನು ದೃಷ್ಟಿಯಲ್ಲಿಟ್ಟು ಅದಕ್ಕೆ ತಕ್ಕ ಪರಿಹಾರೋಪಾಯವನ್ನು ಈ ಕಾನೂನಿನಲ್ಲಿ ಒದಗಿಸದೇ ಇದ್ದರೆ ಮುಂದೆಬರುವ ಅನರ್ಥಗಳಿಗೆ ನಾವು ಗುರಿಯಾಗಬೇಕಾಗುತ್ತದೆ ಎಂದು ಶ್ರೀ ದೇವರಾಜ ಅರಸ್‌ನವರು ಹೇಳಿದರು. ಇದು ಅನುಭವ ಪೂರಿತವಾದ ಮಾತು. ಪಂಚಾಯಿತಿ ಚುನಾವಣೆ ನಡೆಯುವಾಗ ಅಲ್ಲಿನ ಸದಸ್ಯರು ಓಟುದಾರರಿಂದ ಚುನಾಯಿಸಲ್ಪಡದೆ ಪೋಲಿಂಗ್ ಆಫೀಸರಿಂದಲೇ ಚುನಾಯಿತರಾಗಿದ್ದಾರೆಂಬುದು ಸತ್ಯವಾದ ಮಾತು. ಏಕೆಂದರೆ, ಓದುವುದಕ್ಕೆ ಕೂಡ ಬಾರದಿರುವ ಓಟುದಾರರಿಗೆ ತಿಳಿಯುವಂತೆ ಆನೆ, ಸಿಂಹ, ಮುಂತಾದ ಗುರುತುಗಳು ಕೂಡ ಚುನಾವಣೆಗೆ ನಿಂತಿರುವ ಸದಸ್ಯರ ಚೀಟಿಗಳಲ್ಲಿರಲಿಲ್ಲ. ಓದುಬರಹ ಬಾರದಿರುವವರಿಗೆ ಪೋಲಿಂಗ್ ಆಫೀಸರು ಅವರಿಗೆ ಬೇಕಾದ ಪಟ್ಟಿ ಕೊಡದೆ—ಯಾವುದನ್ನು ಕೊಟ್ಟರೂ ಅದನ್ನು ಪರೀಕ್ಷಿಸುವ ಶಕ್ತಿಯಿರುವುದಿಲ್ಲ.—ಅನೇಕ ಕಡೆ ಪೋಲಿಂಗ್ ಆಫೀಸರು ತಮಗೆ ಯಾರುಬೇಕೋ ಅವರನ್ನೇ ಚುನಾವಣೆ ಮಾಡಿಸಿದ್ದಾರೆ. ಇಂಥ ಗೊಂದಲ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಆಗಬಾರದೆಂಬ ಅಭಿಪ್ರಾಯವಿದೆ. ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಬೇಡ, ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಬೇಕು ಎಂಬ ಅಭಿಪ್ರಾಯವಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಮೂರು ಜನ ಮಾತ್ರ ಇರಬೇಕೆಂಬ ಅಭಿಪ್ರಾಯವಿರುವುದು ಸರಿಯಲ್ಲ. ಪ್ರತಿ ತಾಲ್ಲೂಕಿನಲ್ಲೂ, ವೆಂಕಟಪ್ಪ ಸಮಿತಿ ಶಿಫಾರಸುಮಾಡಿರುವ ಹಾಗೆ, 25 ಸಾವಿರ ಜನಸಂಖ್ಯೆಗೆ ಒಂದು ಸ್ಥಾನ ಮಾಡುವುದು ಆವಶ್ಯಕವಾಗಿದೆ. ಮೂರು ಜನ ಇರಬಾರದೆಂದು ಹೇಳಿದರೂ 9-10 ಜನ ನಿಲ್ಲುವುದು ಅಸಂಭವವಲ್ಲ. ಹತ್ತು ಜನ ನಿಂತರೆ ಅವರ ಗುರುತನ್ನು ನೋಡಿ ಓಟು ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದಲೇ ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಮಾಡಬೇಕೆಂಬುದು ಬಹಳ ಸೂಕ್ತವಾದ ಸಲಹೆ. ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡುವುದರಿಂದ ತೊಂದರೆಯೇನಿದೆಯೆಂಬುದನ್ನು ಮನಗಂಡು ತಕ್ಕ ವ್ಯವಸ್ಥೆ ಮಾಡುವುದು ಒಳ್ಳೆಯದು. ಪ್ರತಿ ತಾಲ್ಲೂಕಿನ ಮೂಲೆ ಮೂಲೆಗಳಲ್ಲೂ ಬಡವರನೇಕರಿರುತ್ತಾರೆ, ಸೇವೆ ಮಾಡುವ ದೃಷ್ಟಿ ಆ ಪ್ರದೇಶದವರಿಗಿರುತ್ತದೆ. ಆದರೆ ಸೇವಾ ಕ್ಷೇತ್ರಕ್ಕಿಳಿಯಲು ಸಾಕಾದಷ್ಟು ಹಣ ಅವರಿಗಿರುವುದಿಲ್ಲ. ಇಡೀ ತಾಲ್ಲೂಕಿನಲ್ಲಿ ಒಂದು ಕ್ಷೇತ್ರ ಮಾಡಿದರೆ ಜನರಲ್ ಎಲೆಕ್ಷನ್ ಆಗುವಾಗ ಎಷ್ಟು ವೆಚ್ಚವಾಗುತ್ತದೋ ಜಿಲ್ಲಾ ಬೋರ್ಡು ಚುನಾವಣೆಯಾಗುವಾಗಲೂ ಅಷ್ಟೇ ವೆಚ್ಚವಾಗುತ್ತದೆಂಬುದನ್ನು ಹೇಳುವುದು ಅನಾವಶ್ಯಕ. ಅಷ್ಟು ಹಣ ಖರ್ಚುಮಾಡುವುದಕ್ಕೆ ಸಿದ್ಧವಾಗಿದ್ದರೆ ಒಬ್ಬ ಮನುಷ್ಯ ಜಿಲ್ಲಾ ಬೋರ್ಡಿಗೆ ನಿಲ್ಲಲು ಸಾಧ್ಯ; ಮಿಕ್ಕವರಿಗೆ ಸಾಧ್ಯವಿಲ್ಲ. ಬಲಾಢ್ಯರಿಗೆ, ಧನಿಕರಿಗೆ, ಪ್ರಭಾವಶಾಲಿಗಳಿಗೆ ಮಾತ್ರ ತುಂಬ ಅವಕಾಶವಿರುತ್ತದೆಯೇ ವಿನಾ ಬಡವರಿಗೆ ಮತ್ತು ಸೇವಾ ಆಸಕ್ತಿಯಿರುವವರಿಗೆ ಹಳ್ಳಿಗಳಲ್ಲಿ ಚುನಾವಣೆಯಾಗಿ ಬರುವುದಕ್ಕೆ ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ಮೂಲ ತತ್ವ ಹಳ್ಳಿ ಹಳ್ಳಿಗಳಲ್ಲೂ ತಮ್ಮ ಕೆಲಸ ತಾವೇ ಮಾಡಿಕೊಳ್ಳುವ ಶಕ್ತಿ ಬೆಳೆಸಬೇಕು ಎಂದಿರುವಾಗ ಸಾಧ್ಯವಾದ ಪ್ರಯತ್ನಮಾಡಿ ಮೂಲೆ ಮೂಲೆಗಳಲ್ಲಿರುವ ಸೇವಾಸಕ್ತಿಯಿರುವ ಜನರಿಗೆ ಚುನಾಯಿತರಾಗಿ ಬಂದು ಸೇವೆ ಮಾಡಲು ಅವಕಾಶ ಕಲ್ಪಿಸುವ ದೃಷ್ಟಿಯಿರಬೇಕು. ಒಂದೊಂದು ಕ್ಷೇತ್ರದಲ್ಲಿ ನಾಲ್ಕು ಜನರಿದ್ದರೆ ನಾಲ್ಕು ಕ್ಷೇತ್ರ ಮಾಡುವುದರಿಂದ ಕಾಲ ವಿಳಂಬವಾಗುವುದು ನಿಜ, ಒಪ್ಪಬಹುದು. ಸರ್ಕಾರ ಡೀಲಿಮಿಟ್ ಮಾಡಿ ಅಬ್ಜೆಕ್ಷನ್ಸ್ ಕಾಲ್‌ಫಾರ್ ಮಾಡಿ ತೀರ್ಮಾನ ಮಾಡಿದ ಮೇಲೆ ಯಾವ ಯಾವ ಕ್ಷೇತ್ರ ಇರಬೇಕೆಂದು ನಿಗದಿಮಾಡಿ ಚುನಾವಣೆ ಮಾಡಬೇಕು. ಇದಕ್ಕೆ ಕೆಲವು ಕಾಲ ನಿಧಾನವಾಗುತ್ತದೆ ನಿಜ. ಈಗಿರುವ ಪ್ರಶ್ನೆ ನಿಧಾನವಾದರೂ ಚಿಂತೆಯಿಲ್ಲ, ಸತ್ಸಂಪ್ರದಾಯವನ್ನನುಸರಿಸಿ ರಕ್ಷಣೆ ಕೊಡಲು ಈ ವಿಧಾನ ಮಾಡುವುದು ಒಳ್ಳೆಯದು ಎಂಬ ಅಭಿಪ್ರಾಯವಿದೆ. ಒಂದುವೇಳೆ ಮಲ್ಟಿ ಮೆಂಬರ್ ಕ್ಷೇತ್ರ ಆಗಬೇಕು, ತಕ್ಷಣ ಚುನಾವಣೆಯಾಗಬೇಕು ಎಂದು ಹೇಳಿದರೆ, ಒಂದು ದೃಷ್ಟಿಯಿಂದ, ಏನಾದರೂ ಮಾಡಲಿ, ಜಿಲ್ಲಾ ಬೋರ್ಡ್ ಚುನಾವಣೆಯಾಗಿ ಬೋರ್ಡ್ ರಚನೆಯಾಗಿ ಜನರಿಗೆ ಸೇವೆ ಪ್ರಾರಂಭವಾಗಲಿ ಎಂದು ಅದನ್ನು ಒಪ್ಪಬೇಕೇ ವಿನಾ ಅನ್ಯಥಾ ಅಲ್ಲ.

ಮತ್ತೊಂದು, ಈ ಮಸೂದೆಯಲ್ಲಿ ತಿಳಿಸದೇ ಇದ್ದಾಗ್ಯೂ ಕೂಡ ಒಂದು ವಿಷಯವನ್ನು ಮಾನ್ಯ ಮಂತ್ರಿಗಳು ಹೇಳಿದರು. ತಾಲ್ಲೂಕು ಲೆವಲ್‌ನಲ್ಲಿ ಒಂದು ಸಂಸ್ಥೆ ಏರ್ಪಾಡು ಮಾಡಬೇಕೆಂದು ಹೇಳಿದರು. ಈ ವಿಷಯದಲ್ಲಿ ಹೆಚ್ಚು ಚರ್ಚೆಮಾಡುವುದು ಅನಾವಶ್ಯಕ. ಒಟ್ಟಿನಲ್ಲಿ ಸಾರ್ವಜನಿಕ ಸಂಸ್ಥೆಗಳು ಹಳ್ಳಿಗಳ ಮಟ್ಟದಲ್ಲಿ, ತಾಲ್ಲೂಕುಗಳ ಮಟ್ಟದಲ್ಲಿ, ಜಿಲ್ಲಾಗಳ ಮಟ್ಟದಲ್ಲಿ ಇರಬೇಕಾದದ್ದು ತತ್ವಶಃ ಸರಿಯಲ್ಲ. ನಾವು ಇವುಗಳನ್ನು ಸೃಷ್ಟಿಮಾಡಿ ಇವುಗಳಿಗೆ ತಕ್ಕಷ್ಟು ಕೆಲಸ ಕಾರ್ಯ ಸಿಬ್ಬಂದಿ ಹಣ, ಒದಗಿಸಿ, ಇವುಗಳ ಮೇಲ್ವಿಚಾರಣೆ ನೋಡಿ ಕೊಂಡು ತಮ್ಮ ಕೆಲಸ ಕಾರ್ಯಗಳನ್ನು ಇವುಗಳೇ ನೋಡಿಕೊಳ್ಳಬೇಕೆಂದು ಹೇಳುವುದು ತತ್ವಶಃ ಸರಿಯಲ್ಲ. ಈಗಿರುವ ಪರಿಸ್ಥಿತಿಯಲ್ಲಿ ಜಿಲ್ಲಾ ಬೋರ್ಡಿನ ಮಟ್ಟದಲ್ಲಿ ಮತ್ತು ತಾಲ್ಲೂಕು ಬೋರ್ಡಿನ ಮಟ್ಟದಲ್ಲಿ ಎರಡು ಸಂಸ್ಥೆಗಳಿರಬೇಕೆ, ಬೇಡವೆ ಎಂದು ಬೇಕಾದಷ್ಟು ಸಲ ಚರ್ಚೆಯಾಗಿದೆ. ಒಟ್ಟಿನಲ್ಲಿ ಇದರ ಗೊಂದಲಕ್ಕೆ ಹೋಗುವುದು ಅನಾವಶ್ಯಕ. ಈಗ ಪ್ರಾಸಂಗಿಕವಾಗಿ ತಾಲ್ಲೂಕು ಲೆವಲ್‌ನಲ್ಲಿ ಒಂದು ಸಂಸ್ಥೆ ಏರ್ಪಾಡು ಮಾಡಬೇಕೆಂಬ ಒಂದು ದೃಷ್ಟಿಯಿರುವುದರಿಂದ ಕೆಲವು ಸಲಹೆ ಕೊಡಬೇಕೆಂದಿದ್ದೇನೆ. ಈಗ ಜಿಲ್ಲಾ ಬೋರ್ಡಿಗೆ ಬರಬೇಕಾದ ಹಣಕಾಸನ್ನು ತೆಗೆದು ಅದನ್ನು ಹೇಗೆ ವಿನಿಯೋಗಿಸಬೇಕೆಂದು ಈ ಮಸೂದೆಯಲ್ಲಿ ಹೇಳಿದೆ. ಇದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ರಸ್ತೆಗಳ ವಿಚಾರ ಬಂದಾಗ ಅವುಗಳ ಸ್ಥಿತಿಗತಿ ಎಷ್ಟು ಶೋಚನೀಯವಾಗಿದೆಯೆಂಬುದನ್ನು ಹೇಳಿ ಸದಸ್ಯರು ಕಟುವಾಗಿ ಟೀಕೆ ಮಾಡಿದರು. ಸರ್ಕಾರ ಅದನ್ನು ನಂಬಬೇಕಾಗಿ ಬಂತು. ರಸ್ತೆಯ ಉದ್ದ ಪ್ರತಿ ದಿನವೂ ಹೆಚ್ಚುತ್ತಿದೆ. ದೇಶದ ನಾನಾ ಬಾಬುಗಳಿಂದ ಹಣವನ್ನೊದಗಿಸಿ ಅಥವಾ ಗ್ರಾಮಸ್ಥರು ಸ್ವಂತವಾಗಿ ಖರ್ಚುಮಾಡಿ ರಸ್ತೆ ಮಾಡುತ್ತಿದ್ದಾರೆ. ಎನ್. ಇ. ಎಸ್. ಸ್ಕೀಂ ಮತ್ತು ಕಮ್ಯೂನಿಟಿ ಪ್ರಾಜೆಕ್ಟ್ ಸ್ಕೀಂ ಪ್ರಕಾರ ರಸ್ತೆ ಮಾಡುತ್ತಿದ್ದಾರೆ. ಅವನ್ನು ನಾವು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳಬೇಕು; ಇಲ್ಲದಿದ್ದರೆ ದೇಶಕ್ಕೆ ಅಪಾರ ನಷ್ಟವಾಗುತ್ತದೆ.

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಪರಿಸ್ಥಿತಿ ಹೀಗಿರುವಾಗ ಇದಕ್ಕಾಗಿ ಜಿಲ್ಲಾ ಬೋರ್ಡಿಗೆ ಅಥವಾ ತಾಲ್ಲೂಕು ಬೋರ್ಡಿಗೆ ಸಾಕಾದಷ್ಟು ಹಣ ಒದಗಿಸದೇ ಹೋದರೆ ರಸ್ತೆ ಚೆನ್ನಾಗಿಟ್ಟುಕೊಳ್ಳಲು ಸಾಧ್ಯವಿಲ್ಲ. ಸರ್ಕಾರ ಕೈಕಟ್ಟಿಕೊಂಡು ಕುಳಿತು ಈ ರಸ್ತೆ ನಮ್ಮದಲ್ಲ ಎಂದು ಹೇಳುವುದು ಸರಿಯಲ್ಲ. ಸರ್ಕಾರಕ್ಕೂ ಜವಾಬ್ದಾರಿಯಿದೆ. ಜಿಲ್ಲಾ ಬೋರ್ಡು ಬೇರೆ ಸರ್ಕಾರ ಬೇರೆ ಎಂದು ಹೇಳಬಾರದು. ಜಿಲ್ಲಾ ಬೋರ್ಡು ಅಥವಾ ತಾಲ್ಲೂಕು ಬೋರ್ಡು ಮುಂತಾದ ಸ್ಥಳೀಯ ಸಂಸ್ಥೆಗಳೆಲ್ಲವೂ ಸರ್ಕಾರದ್ದೇ. ಸರ್ಕಾರ ಮಾಡಬೇಕಾದ ಕೆಲಸ ಕಾರ್ಯವನ್ನು ಸ್ಥಳೀಯ ಸಂಸ್ಥೆಗಳು ಸರ್ಕಾರದ ಪರವಾಗಿ ಮಾಡುತ್ತವೆಯೇ ಹೊರತು ಅವು ಬೇರೆಯಲ್ಲ ಎಂದು ತಿಳಿಯಬೇಕು. ಹೀಗಿರುವಾಗ ಈಗ ಕೊಡುತ್ತಿರುವ ಹಣವನ್ನೇ ತೆಗೆದುಕೊಳ್ಳುತ್ತೇವೆಂದು ಹೇಳುವುದರಲ್ಲಿ ಅರ್ಥವಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಒಂದು ಹೆಜ್ಜೆ ಮುಂದೆ ಹೋಗಿ ಮಾನ್ಯ ಸದಸ್ಯರಿಗೂ ಮತ್ತು ಸರ್ಕಾರಕ್ಕೂ ಸಲಹೆ ಮಾಡುವುದು ಏನೆಂದರೆ ಈ ಸಂಸ್ಥೆಗಳ ಕೆಲಸದ ಮಟ್ಟವೆಷ್ಟು ಅವಕ್ಕೆ ಎಷ್ಟು ಹಣ ಬೇಕು ಎಂದು ಅಂದಾಜು ಮಾಡಿ ಅವುಗಳಿಗೆ ಬೇಕಾಗುವಷ್ಟು ಹಣವನ್ನು ಉತ್ಪನ್ನ ಮಾಡಿ ಒಂದು ರೀತಿಯಲ್ಲಿ ಒದಗಿಸಬೇಕು. ತಾಲ್ಲೂಕು ಬೋರ್ಡ್ ಆಗಿರಲಿ, ಯಾವುದೇ ಆಗಿರಲಿ ಹಣ ಒದಗಿಸದೆ ಕಾನೂನಿನಲ್ಲಿ ಒಂದು ಲಿಸ್ಟ್ ಬರೆದರೆ ಹಲ್ಲಿದ್ದವನಿಗೆ ಕಡ್ಲೆಯಿಲ್ಲ, ಕಡ್ಲೆಯಿದ್ದವನಿಗೆ ಹಲ್ಲಿಲ್ಲ ಎಂಬಂತಾಗುತ್ತದೆ. ಅದರಿಂದೇನೂ ಅಷ್ಟು ಪ್ರಯೋಜನವಾಗುವುದಿಲ್ಲ. ಆದ್ದರಿಂದ ಸಲಹೆ ಮಾಡುವುದು ಶೇಕಡ 6¼ ಲ್ಯಾಂಡ್ ರೆವೆನ್ಯೂನಲ್ಲಿ ತೆಗೆದು ಬೇರೆ ಸಮಿತಿಗಳಿಗೆ ಕೊಡಬೇಕೆಂದು ಮಾಡಿರುವುದು ಸರಿಯಲ್ಲ. ಈಗ ಜಿಲ್ಲಾ ಬೋರ್ಡುಗಳಿಗೆ ಅಧಿಕೃತವಾಗಿ ಕೊಡುವ ಹಣವೇನಿದೆ ಅದನ್ನು ಮುಟ್ಟಬೇಡಿ. ಸಾಧ್ಯವಾದರೆ ಹೆಚ್ಚು ಪ್ರಮಾಣದಲ್ಲಿ ಗ್ರಾಂಟು ರೂಪವಾಗಿ ಅಥವಾ ಬೇರೆ ರೂಪವಾಗಿ ಕೊಟ್ಟು ಅವುಗಳ ಉತ್ಪತ್ತಿ ಹೆಚ್ಚಿಸುವುದಕ್ಕೆ ತಕ್ಕ ವಾತಾವರಣ ಕಲ್ಪಿಸಿ. ಕೆಲಸ ಸಮರ್ಪಕವಾಗಿ ಮಾಡುವುದಿಲ್ಲವೆಂದು ಸದಸ್ಯರು ಟೀಕೆ ಮಾಡುತ್ತಿದ್ದಾರೆ. ಕೆಲಸ ಸಮರ್ಪಕವಾಗಿ ನಡೆಯಲೆಂಬ ಉದ್ದೇಶದಿಂದ ಅಧಿಕಾರ ಅಥವಾ ಹಣ ಕೊಡುವುದನ್ನು ತಪ್ಪಿಸುವುದು ನೀತಿಯಲ್ಲ. ತಕ್ಕಷ್ಟು ಅಧಿಕಾರ ಮತ್ತು ಹಣ ಸಾರ್ವಜನಿಕ ಸಂಸ್ಥೆಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಇರಬೇಕಾದ್ದು ಅಗತ್ಯ. ತಪ್ಪು ಮಾಡುವ ಕಡೆ ಸೂಕ್ತಕಾರ್ಯಕ್ರಮ ತೆಗೆದುಕೊಳ್ಳಲು ಈ ಕಾನೂನಿನಲ್ಲಿ ತಕ್ಕ ರಕ್ಷಣೆಯಿದೆ. ಹಾಗಿರುವುದರಿಂದ ಹೆಚ್ಚು ಅವಕಾಶ ಈ ಸಂಸ್ಥೆಗಳಿಗೆ ಕಲ್ಪಿಸಿ ಕೊಡಬೇಕು. ಹೀಗೆ ಹೇಳುವಾಗ ಹಳ್ಳಿಗಳ ಸಂಸ್ಥೆಗಳಿಗೆ ಏನು ಮಾಡಬೇಕೆಂದು ಕೇಳಬಹುದು. ಹಳ್ಳಿಗಳಲ್ಲಿ ಆಗಬೇಕಾದ ಕೆಲಸಕಾರ್ಯಗಳ ಪಟ್ಟಿ ಮಾಡಿರಬಹುದು. ಪಂಚಾಯಿತಿಯವರಿಗೇನು ಕಾರ್ಯಕ್ರಮವಿದೆಯೋ ಅದೇ ತರಹ ಕಾರ್ಯಕ್ರಮ ಡಿಸ್ಟ್ರಿಕ್ ಬೋರ್ಡುಗಳಿಗೂ ಇದೆ. ನಾಲೆ ಕೆಲಸ, ರಸ್ತೆ ಕೆಲಸ, ರೂರಲ್ ಪ್ರಾಪೊಗ್ಯಾಂಡ ಮುಂತಾದುವು ಎಲ್ಲ ಕಡೆಯೂ ಇವೆ. ಡೂಪ್ಲಿಕೇಷನ್ ತಪ್ಪಿಸಬೇಕೆಂಬುದೇ ಮೂಲೋದ್ದೇಶ. ಯಾವ್ಯಾವ ಕ್ಷೇತ್ರಗಳಲ್ಲಿ, ಯಾವ್ಯಾವ ಭಾಗಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಕೆಲಸ ಕಡಮೆ ಮಾಡಿ ತಾಲ್ಲೂಕು ಬೋರ್ಡುಗಳಿಗೆ ವಹಿಸಬೇಕೆಂಬ ಸೂಚನೆ ನಮ್ಮ ಮುಂದಿಲ್ಲ. ಆ ಸೂಚನೆಗಳು ಇಲ್ಲದೇ

2-30 P.M.

ಇರುವುದರಿಂದ ಯಾವ ಭಾಗದ ಕೆಲಸಕಾರ್ಯಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಿಂದ ತೆಗೆದು ಹಾಕುತ್ತೀರಿ ಎಂಬುದು ನಮಗೆ ಗೊತ್ತಿಲ್ಲ. ಆದ್ದರಿಂದ ನನ್ನ ಸಲಹೆ ಏನೆಂದರೆ, ಈಗ ತಾವು ವಯಸ್ಕರ ಶಿಕ್ಷಣ ವ್ಯವಸ್ಥೆ ಮಾಡಿದ್ದೀರಿ. 45 ಲಕ್ಷ ರೂಪಾಯಿ ಖರ್ಚು ಮಾಡುತ್ತಾ ಇದ್ದೀರಿ. ಅದೇ ರೀತಿ ರೂರಲ್ ಡೆವಲಪ್‌ಮೆಂಟ್ ಸ್ಕೀಂ ಮಾಡಿದ್ದೀರಿ. ಜನಗಳಲ್ಲಿ ಸಂಸ್ಕೃತಿ ಬೆಳೆಸಬೇಕೆಂದು ಸಂಸ್ಕೃತಿ ಪ್ರಚಾರಕ್ಕಾಗಿ 4-5 ಲಕ್ಷ ರೂಪಾಯಿ ಖರ್ಚು ಮಾಡುತ್ತ ಇದ್ದೀರಿ.

Mr. SPEAKER.—The Hon'ble Member is dilating on the functions of the taluk boards. He will be perfectly right if he says: "Provide more funds for the District Boards" but not when he says: "Provide for taluks boards."

Sri H. M. CHANNABASAPPA.—I am only indicating how else it is possible to provide.

Mr. SPEAKER.—The Hon'ble Member has already indicated it.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸದಸ್ಯರ ಸಂಖ್ಯೆ 3 ಇರಬೇಕೆಂದು ಮಾಡಿರುವುದು ಸರಿಯಲ್ಲ. ಮೊದಲೇ ಹೇಳಿದಂತೆ ಈ ದಿನ ತಾಲ್ಲೂಕಿನಲ್ಲಿರತಕ್ಕ ಪ್ರಜಾಸಂಖ್ಯೆಗನುಗುಣವಾಗಿ ಮಾಡತಕ್ಕದ್ದು ಸೂಕ್ತ. ಏಕೆಂದರೆ ಮೂರಕ್ಕೇ ಲಿಮಿಟ್ ಮಾಡುವುದಾದರೆ 2 ಲಕ್ಷ ಪ್ರಜಾಸಂಖ್ಯೆ ಇರತಕ್ಕ ಪ್ರದೇಶಕ್ಕೆ 3, ಒಂದು ಲಕ್ಷ ಪ್ರಜಾಸಂಖ್ಯೆ ಇರತಕ್ಕ ಪ್ರದೇಶಕ್ಕೂ 3 ಆಗುತ್ತದೆ. ಒಟ್ಟಿನಲ್ಲಿ ಹಳ್ಳಿಯ ಮೂಲೆಮೂಲೆಗಳಿಂದ ಜನಗಳು ಬಂದು ಆಯಾಯ ಕ್ಷೇತ್ರದಲ್ಲಿ ಕೆಲಸ ಮಾಡಿ ತಮ್ಮ ಪ್ರದೇಶಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಉದ್ದೇಶವಿರುವುದರಿಂದ ಎಲ್ಲರಿಗೂ ಪ್ರಾತಿನಿಧ್ಯವಿರಬೇಕಾದ್ದು ಅವಶ್ಯಕ. ಆದ್ದರಿಂದ ವೆಂಕಟಪ್ಪನವರ ಕಮಿಟಿಯವರು ಮಾಡಿರತಕ್ಕ ಶಿಫಾರಸು ಸೂಕ್ತವಾಗಿದೆ. ಅದನ್ನು ಅಂಗೀಕಾರ ಮಾಡಬೇಕು.

ಈ ಚುನಾವಣೆ ನಡೆಯುವಾಗ ಅರ್ಜಿಗಳನ್ನು ನಿರಾಕರಣೆ ಮಾಡಿ, ಚುನಾವಣೆಗೆ ಮುಂಚೆಯೇ ಅವುಗಳ ಪರಿಶೀಲನೆ ಮಾಡಬೇಕೆನ್ನುವ ಒಂದು ಬಹಳ ಒಳ್ಳೆಯ ಸಲಹೆ ಕೊಟ್ಟರು. ಶ್ರೀ ಪಟ್ಟಾಭಿರಾಮನ್‌ರವರು ಹೇಳಿದಂತೆ ಪಾರ್ಲಿಮೆಂಟ್‌ನಲ್ಲಿ Representation of the Peoples Actನ್ನು ಸೂಕ್ತ ಬದಲಾವಣೆ ಮಾಡಬೇಕೆಂದು ಯೋಚನೆಮಾಡಿದೆ. ಈಗಶಾಸನ ಮಾಡುತ್ತಿರುವಾಗ ಹಿಂದಿನ ಅನುಭವದಿಂದ ಸೂಕ್ತವಾದ ಬದಲಾವಣೆಗಳನ್ನು ಇದರಲ್ಲಿ ಅಳವಡಿಸುವುದು ಒಳ್ಳೆಯದು. ಇದಕ್ಕೆ ತಕ್ಕ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಕೊನೆಯದಾಗಿ, ಮಲ್ಟಿಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಆದರೂ ಮಾಡಿ. ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಆದರೂ ಮಾಡಿ, ಅಂತು ಯಾವುದಾದರೂ ಒಂದು ತೀರ್ಮಾನ ಮಾಡಿ ಚುನಾವಣೆಗಳನ್ನು ನಡೆಸಬೇಕಾದುದು ಮುಖ್ಯ. ನನ್ನ ಅಭಿಪ್ರಾಯ ಒಟ್ಟಿನಲ್ಲಿ Single-Member Constituency ಮಾಡುವುದು ಸೂಕ್ತ. Number one. 6¼% ಹಿಡಿಯುವುದು ಸರಿಯಲ್ಲ, Number two. ಚುನಾವಣಾ ತಕರಾರು ಅರ್ಜಿಗಳನ್ನು ನಿರಾಕರಣೆಮಾಡಿ ಚುನಾವಣೆ ಆಗುವುದರ ಮುನ್ನವೇ ಅರ್ಜಿ ತೀರ್ಮಾನ ಮಾಡಿ ಚುನಾವಣೆ ಮಾಡಿಸಬೇಕಾದ್ದು number three. ಈ ಮೂರು ಸಲಹೆಗಳನ್ನು ಕೊಟ್ಟಿದ್ದೇನೆ. ಚುನಾವಣೆಗಳನ್ನು ಆದಷ್ಟು ಬೇಗ ಮಾಡಿ ಜಿಲ್ಲಾ ಬೋರ್ಡಿನ

ಯೋಜನೆಗಳು, ಕೆಲಸಕಾರ್ಯಗಳು ಸುಸೂತ್ರವಾಗಿ ಜರುಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ನನ್ನ ಅಭಿಪ್ರಾಯ ಬಹುಮಟ್ಟಿಗೆ ನಾನು ಅಧ್ಯಕ್ಷನಾಗಿದ್ದ ಸಮಿತಿಯ ವರದಿಯಲ್ಲಿ ಅಳವಡಿಸಲ್ಪಟ್ಟಿದೆ ಎಂದು ಹೇಳಿದರೆ ತಪ್ಪಾಗಲಾರದು. ಆ ಸಮಿತಿಯ ಸದಸ್ಯರು ಬಹುಮಟ್ಟಿಗೆ ನನ್ನ ಅಭಿಪ್ರಾಯವನ್ನೇ ಅನುಮೋದಿಸಿದರು. ಅದಕ್ಕೆ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ನನ್ನ ಮತ್ತು ಆ ಸಮಿತಿಯವರ ಉದ್ದೇಶ ಬಹುಮಟ್ಟಿಗೆ ಈ ಪಂಚಾಯಿತಿಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಇರಬೇಕು, ಕೆಲಸ ಮಾಡುವುದಕ್ಕೆ ಅವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡಬೇಕು, ಈ ಸಂಸ್ಥೆಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸದೇ ಹೋಗುವ ಪಕ್ಷಕ್ಕೆ, ಇವಕ್ಕೆ ಪ್ರಾಮುಖ್ಯತೆ ಕೊಡದೇ ಹೋಗುವ ಪಕ್ಷಕ್ಕೆ, ನಿಜವಾದ ಏನು ಒಂದು ದೇಶ ಕಾರ್ಯ ನಡೆಯಬೇಕು ಅಥವಾ ಹಳ್ಳಿಗಳ ಉದ್ಧಾರವಾಗಬೇಕು ಎಂದು ಹೇಳುತ್ತಾ ಇದ್ದೇವೆಯೋ ಅದು ಆಗಲಾರದು ಎಂದೆನ್ನುವ ಅಭಿಪ್ರಾಯವನ್ನು ನಾನು ಸದಾ ಉಳ್ಳವನು. ಯಾವ ಇತರ ಕಾರಣಗಳಿಂದಲೇ ಆಗಲಿ ಪಂಚಾಯಿತಿಗಳ ಸ್ಥಿತಿಗತಿಗಳನ್ನು ಉತ್ತಮಪಡಿಸದೆ, ಅವಕ್ಕೆ ತಮ್ಮ ಸ್ಥಳೀಯ ಕಾರ್ಯವನ್ನು ತಾವೇ ಮಾಡಿಕೊಳ್ಳತಕ್ಕ ಒಂದು ಯೋಗ್ಯತೆಯನ್ನು ಸಂಪಾದನೆಮಾಡಿ ಕೊಡದೆ ನಾವು ಸ್ಥಳೀಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುತ್ತೇವೆ ಎಂದು ಹೇಳಿದರೆ ಅದು ಪೂರ್ಣವಾಗಲಾರದು ಎಂದು ನಾನು ನಂಬಿಕೊಂಡಿದ್ದೇನೆ. ಕಾರಣಾಂತರದಿಂದ, ಆ ಸಮಿತಿಯ ಅಭಿಪ್ರಾಯಗಳನ್ನು ಬಹುಮಟ್ಟಿಗೆ ಬದಲಾವಣೆ ಮಾಡಿದರು. ಮತ್ತು ಇದೇ ಸಂಬಂಧವಾಗಿ ಮತ್ತೊಂದು ಸಮಿತಿಯನ್ನು ಕೂಡ ಸ್ಥಾಪನೆ ಮಾಡಿದರು. ನಾನು ಯಾವ ಒಂದು ಸಮಿತಿಯ ಅಧ್ಯಕ್ಷನಾಗಿದ್ದೆನೋ ಆ ಸಮಿತಿಯ ಶಿಫಾರಸುಗಳ ಮೇಲೆ ಒಂದು ಕಾನೂನಾದರೂ ಆಯಿತು ; ಈ ಎರಡನೆ ಸಮಿತಿಯಿಂದ ಯಾವ ಕೆಲಸವಾಗಿದೆಯೆಂದರೆ ಈ ವಿಷಯದ ಮೇಲೆ ಕಾನೂನು ಮಾತ್ರವೇ ಅಲ್ಲ ಇದು ಏನಾಗಿದೆ ಎಂಬುದನ್ನು ಕೂಡ ನೋಡುವುದಕ್ಕೆ ಅವಕಾಶವಿಲ್ಲದ ಹಾಗೆ ಆಗಿದೆ. ಅದರ ಆಗುಹೋಗುಗಳೇನು ಎಂಬುದನ್ನು ಪರಿಶೀಲನೆಮಾಡುವುದಕ್ಕೂ ಕೂಡ ಅವಕಾಶವಾಗಲಿಲ್ಲ. ಈಗ ಬಂದಿರತಕ್ಕ ಬಿಲ್ಲಿನ ಮೇಲೆ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟ ವಿಷಯಗಳನ್ನು ಬಹಳವಾಗಿ ಚರ್ಚೆ ಮಾಡಿದ್ದಾರೆ. ಪಂಚಾಯಿತಿಗೆ ಸಂಬಂಧಪಟ್ಟ ಒಂದು ಸೂಚನೆ ಇದರಲ್ಲಿ ಇದೆ. ಅದೇನೆಂದರೆ :

> "The expenses of such examination of accounts and audit shall be debitable to and be paid out of the Panchayat Fund in such manner as the Government may direct"

ಎಂದು ಹೇಳಿದೆ. ಇದುವರೆಗೂ ಪಂಚಾಯಿತಿಗಳ ಲೆಕ್ಕಗಳನ್ನು ಆಡಿಟ್ ಮಾಡುವುದಕ್ಕೆ ಸರ್ಕಾರದವರೇ ದುಡ್ಡು ಕೊಡುತ್ತಾ ಇದ್ದರು. ಸ್ವಾಮಿ, ಪಂಚಾಯಿತಿಗಳಿಗೆ ಸಾಕಾದಷ್ಟು ಹಣವಿಲ್ಲ. 100 ರೂಪಾಯಿ ವರಮಾನ ಇರತಕ್ಕ ಪಂಚಾಯಿತಿಗಳೂ ಇವೊತ್ತು ಇವೆ; 25 ರೂಪಾಯಿ ವರಮಾನ ಇರತಕ್ಕ ಪಂಚಾಯಿತಿಗಳೂ ಕೂಡ ಇವೆ ಎಂದು ಹೇಳುತ್ತಾರೆ. ಬರೀ ನಾವಮ್ಕಾವಾಸ್ತೆ ಪಂಚಾಯಿತಿಗಳಿವೆ ಎಂದು ಹೇಳಿ, ನಾವು ಸ್ಥಳೀಯ ಸಂಸ್ಥೆಗಳನ್ನು ನಡೆಸುತ್ತೇವೆ ಎಂದು ಹೇಳಿದರೆ ಅದರಿಂದ ಏನೂ ಪ್ರಯೋಜನವಾಗಲಾರದು. ಅದಕ್ಕೆ 4-6 ಹಳ್ಳಿಗಳನ್ನಾದರೂ ಸೇರಿಸಿ, ಸಾಕಾದಷ್ಟು ಉತ್ಪನ್ನ ಬರುವಂತೆಮಾಡಿ, ಆ ತಾಲ್ಲೂಕಿಗೆ ವಿಳಪಟ್ಟಂಥ ಲ್ಯಾಂಡ್ ರೆವಿನ್ಯೂನಲ್ಲಿ ಇಷ್ಟನೇ ಒಂದು ಭಾಗವನ್ನು ಅದಕ್ಕೆ ಕೊಡತಕ್ಕದ್ದು ಎಂದು ಸೂಚನೆಮಾಡಿ, ಅಷ್ಟಾದರೂ ಹಣವನ್ನು ಅದಕ್ಕೆ ದೊರಕಿಸಿಕೊಟ್ಟು, ಆ ಹಣವನ್ನು ಖರ್ಚುಮಾಡತಕ್ಕ ಜವಾಬ್ದಾರಿ ಏನಿದೆಯೋ ಅದನ್ನು ಅವರ ಮೇಲೆ ಹೊರಿಸಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅವಕಾಶ ಕಲ್ಪನೆಮಾಡಿ ಕೊಡಬೇಕು. ಅಲ್ಲಿ ಸ್ಥಳದವರು ತಾವೇ ನಿಂತು ಕೆಲಸ ಮಾಡಿದರೆ ಅಭಿಮಾನ ಬರುತ್ತದೆ. ಇವೊತ್ತಿನ ದಿವಸ ಈ ಪಂಚಾಯಿತಿಗಳಿಂದ ಯಾವ ಕೆಲಸವೂ ನಡೆಯುತ್ತಿಲ್ಲ. 1928-29ನೇ ಇಸವಿಯಲ್ಲಿ ಏನು ಮಾತು ಹೇಳಿದ್ದೆನೋ ಇವೊತ್ತು ಕೂಡ ಅದನ್ನೇ ಹೇಳಬೇಕಾಗಿದೆ. ಹೀಗಿರುವಾಗ ಪಂಚಾಯಿತಿಯನ್ನು ಉದ್ಧಾರ ಮಾಡುತ್ತೇವೆ, ಉತ್ತಮಪಡಿಸುತ್ತೇವೆ, ಜನಗಳಿಂದ ರಚಿತವಾದ ಸರ್ಕಾರ ಬಂದಿದೆ, ಇದು ಜನತಾ ಸರ್ಕಾರ ಎಂದು ಹೇಳಿದರೆ ನನಗೇನೋ ಇದರಲ್ಲಿ ನಂಬಿಕೆ ಕಡಿಮೆಯಾಗುತ್ತಾ ಇದೆ. ಈ ದೃಷ್ಟಿಯಿಂದ ಪಂಚಾಯಿತಿಗಳಿಗೆ ಸಾಕಾದಷ್ಟು ಹಣವನ್ನು ಒದಗಿಸಬೇಕೆಂದು ಹೇಳಿದರೆ ಅದಕ್ಕೆ ಒಂದು ವಿಚಿತ್ರವಾದ ಅರ್ಥವನ್ನು ಕಲ್ಪನೆಮಾಡಿ . . . .

Sri Kadidal MANJAPPA.—There is no such provision in this Bill.

ಶ್ರೀ ವಿ. ವೆಂಕಟಪ್ಪ.—ಮತ್ತೆ ಅದೇ ಉತ್ತರ ಏಕೆ ಹೇಳುತ್ತೀರೋ ಅರ್ಥವಾಗುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು "ನಮ್ಮ ಮನಸ್ಸಿಗೆ ಬಂದಂತೆ ಕೊಡುತ್ತಾ ಇದ್ದೇವೆ" ಎಂದು ಹೇಳಿದ್ದಾರೆ; ಇದೇ ಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ಅದನ್ನು ನಾನು ತೋರಿಸಿ ಕೊಡುತ್ತೇನೆ.

Mr. SPEAKER.—The point is: there relevant provision in the amending Bill . . . .

ಶ್ರೀ ವಿ. ವೆಂಕಟಪ್ಪ.—ತಾವು ಹೇಳುವುದು ನನಗೆ ಅರ್ಥವಾಗಲಿಲ್ಲ.

Mr. SPEAKER.—I mean, the administration of the Village Panchayet or the allotment of funds from the Government treasuries to the various Panchayets is not relevant to this discussion, because there is no provision in the present Amending Bill relating to that subject matter.

ಶ್ರೀ ವಿ. ವೆಂಕಟಪ್ಪ.—ಬಹಳ ಚೆನ್ನಾಗಿದೆ, ಸ್ವಾಮಿ. ನಾನು ಏನು ಹೇಳುತ್ತಾ ಇದ್ದೆ ಎಂದರೆ, ಈ ಪಂಚಾಯಿತಿಗಳಿಗೆ ಆಡಿಟ್‌ಫೀಜು ಹಾಕಬೇಕೆಂದು ಹೇಳಿದ್ದೀರಿ. ಇವಕ್ಕೆ ಸಾಕಾದಷ್ಟು ಹಣ ಇಲ್ಲ. ಹೀಗಿರುವಾಗ ಅವುಗಳು ಈ ಫೀಜನ್ನು ಯಾವ ರೀತಿ ಕೊಡಬೇಕು ಎಂಬುದನ್ನು ತಾವು ಸ್ವಲ್ಪ ಯೋಚನೆಮಾಡಬೇಕು. ಆಡಿಟ್‌ಫೀಜು ಕೊಡಬೇಕು ಎಂದು ಹೇಳುವುದರಲ್ಲಿ ಏನು ಕಷ್ಟ ಬಂದಿದೆ ಎಂಬುದು, ಕೋ-ಆಪರೇಟಿವ್ ಸೊಸೈಟಿಗಳಿಗೆ ಹಾಕಿದ ಸಂದರ್ಭದಲ್ಲಿ ಏನಾಯಿತು ಎನ್ನುವುದನ್ನು ಜ್ಞಾಪಿಸಿಕೊಂಡರೆ ತಮಗೇ ಗೊತ್ತಾಗು

(ಶ್ರೀ ವಿ. ವೆಂಕಟಪ್ಪ.)

ತ್ತದೆ. ಮೊನ್ನೆ ಒಂದು ಸೊಸೈಟಿಯ ಮೀಟಿಂಗಿಗೆ ಹೋಗಿದ್ದೆ. 999 ರೂಪಾಯಿ ಅದಕ್ಕೆ ವರ್ಷದ ನಿವ್ವಳ ಆದಾಯ, ಆಡಿಟ್‌ಫೀಜು 224 ರೂಪಾಯಿ. ಈ ರೀತಿ ಮಾಡಿದರೆ ಪಂಚಾಯಿತಿಗಳ ಗತಿ ಏನು ? ಏನೂ ಹಣ ಇಲ್ಲದೇ ಇರತಕ್ಕ ಪಂಚಾಯಿತಿಗಳು ಇವೊತ್ತು ಇರುವಾಗ ಅವರು ಎಲ್ಲಿಂದ ಹಣ ಕೊಡುವುದು ? ಆದ್ದರಿಂದ ಈದಿನ ಅವುಗಳ ಲೆಕ್ಕವನ್ನು ಆಡಿಟ್‌ಮಾಡುವ ಒಂದು ಪರಿಸ್ಥಿತಿಗೆ ತರುವಂತೆ ಅವುಗಳನ್ನು ಅಭಿವೃದ್ಧಿ ಸ್ಥಿತಿಗೆ ತರಬೇಕೆಂದು ಹೇಳುತ್ತಾ ಇದ್ದೇನೆ.

ಆಮೇಲೆ ಷೆಡ್ಯೂಲ್‌ನಲ್ಲಿ ಇಂಥಿಂಥ ಡಿಸ್ಟ್ರಿಕ್ಟ್ ಬೋರ್ಡಿಗೆ ಇಷ್ಟಿಷ್ಟು ಜನ ಮೆಂಬರುಗಳು ಇರಬೇಕು ಎಂದು ಹೇಳಿರುವ ಒಂದು ಪಟ್ಟಿಯನ್ನು ಇಲ್ಲಿ ಹಾಕಿದ್ದೀರಿ. ಸರ್ಕಾರದವರು ನೋಟಿಫಿಕೇಷನ್ ಮೂಲಕ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮೆಂಬರುಗಳಿರಬೇಕೆಂಬುದನ್ನು ನಿರ್ದೇಶ ಮಾಡಬೇಕೆಂದು ಹೇಳಿದ್ದೀರಿ. ನನಗೆ ಅರ್ಥವೇ ಆಗಲಿಲ್ಲ. ಯಾವ ಆಧಾರದ ಮೇಲೆ ? ಬಹುಶಃ ಪ್ರಜಾಸಂಖ್ಯೆ ಏನಿದೆಯೋ ಅದಕ್ಕನುಗುಣವಾಗಿ ಇಷ್ಟಿಷ್ಟು ಇರಬೇಕೆಂದು ಮಾಡಿರಬಹುದು. ಇಷ್ಟಿಷ್ಟು ಸ್ಥಾನಗಳು ಬೇಕು ಎನ್ನುವುದನ್ನು ನಾವು ತೀರ್ಮಾನಮಾಡಿ ಗೆಜೆಟ್ಟಿನಲ್ಲಿ ಪಬ್ಲಿಷ್‌ಮಾಡುತ್ತೇವೆ ಎಂದು ಹೇಳಿದ್ದೀರೇ ವಿನಾ ಅದಕ್ಕೆ ಕಾರಣವನ್ನು ಕೊಟ್ಟಿದ್ದೀರೋ ಎಂದರೆ ಇದರಲ್ಲಿ ಕಾರಣ ಏನೇನೂ ಇಲ್ಲ.

ಸೆಕ್ಷನ್ ಏಳರಲ್ಲಿ ಒಂದು ತಿದ್ದುಪಡಿ ಸೂಚನೆ ಮಾಡಿದ್ದೀರಿ. ಅದು ಏನು ಎಂಬುದು ನನಗೆ ಅರ್ಥವಾಗಲಿಲ್ಲ. ಅದರಲ್ಲಿ

> In sub-section 3 of section 54 of the principal Act for the words "any person is disqualified under this section or disabled from continuing as a member," the words, figure and brackets "a vacancy has occurred under sub-section (2)" shall be substituted

ಎಂದು ಹೇಳಿದ್ದೀರಿ. ಏನೇನು ಹೊಂದಿಸಿ ನೋಡಿದರೂ ಅದು ಅರ್ಥವಾಗಲಿಲ್ಲ. ಏಕೆ ಅದನ್ನು ಹಾಕಿದ್ದೀರಿ ಎಂಬುದನ್ನು ಹೇಳಬೇಕು.

ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಚುನಾವಣೆಯ ವಿಷಯದಲ್ಲಿ ಈಗ ಬಹಳವಾಗಿ ಚರ್ಚೆ ನಡೆದಿದೆ. Fundamental ಆಗಿ ಇದರಲ್ಲಿ ನನಗೆ ವ್ಯತ್ಯಾಸ ಕಂಡುಬಂದಿರುವುದರಿಂದ, ಅಪ್ರತ್ಯಕ್ಷ ಚುನಾವಣೆ ಇರಬೇಕಾದ್ದಕ್ಕೆ ಕಾರಣ ಏನಿತ್ತು ಎಂಬುದನ್ನು ಹಿಂದೆಯೇ ಸೂಚನೆ ಮಾಡಿದ್ದೇವೆ. ಇವೊತ್ತು ಕೂಡ ಅದನ್ನು ನಮ್ಮ ಮಿತ್ರರು ಹೇಳಿದ್ದಾರೆ. ಈ ಡಿಸ್ಟ್ರಿಕ್ಟ್ ಬೋರ್ಡುಗಳಿಗೂ, ವಿಲೇಜ್ ಪಂಚಾಯಿತಿಗಳಿಗೂ ಯಾವ ವಿಧವಾದ ಸಂಬಂಧವೂ ಇಲ್ಲದಂತೆ ಮಾಡುವುದಾದರೆ ಪ್ರತ್ಯಕ್ಷ ಚುನಾವಣೆ ಇಟ್ಟುಕೊಳ್ಳಬಹುದು. ಅದರಲ್ಲೇನೂ ಅಭ್ಯಂತರವಿಲ್ಲ.

ಈ ಜಿಲ್ಲಾ ಬೋರ್ಡುಗಳಿಗೂ ಮತ್ತು ಗ್ರಾಮ ಪಂಚಾಯಿತಿಗಳಿಗೂ ಒಂದು ಸಂಬಂಧವಿರಬೇಕು. ಆದರೆ ಈಗ ತಾವು ಅದಕ್ಕೆ ಅವಕಾಶ ಕೊಟ್ಟಿಲ್ಲವೆಂದು ಕೆಲವರು ಆಕ್ಷೇಪಣೆ ಮಾಡಿರಬಹುದು. ಆದರೆ ಹಾಗೆ ಅವರು ಹೇಳಿರತಕ್ಕದ್ದು ಸರಿಯೇ ಅಥವಾ ಅಲ್ಲವೇ ಎನ್ನುವುದನ್ನು ಈಗ ಹೇಳುವುದಕ್ಕೆ ಸಮಯವಲ್ಲ. ನೀವು ಯಾವರೀತಿಯಲ್ಲೇ ಮಾಡಿ, ಯಾವ ಏರ್ಪಾಡನ್ನೇ ಮಾಡಿ, ಈ ಕಾನ್ಸಿಟ್ಯುಯೆನ್ಸಿಗಳು ಯಾವ ರೂಪದಲ್ಲೇ ಇರಲಿ—ನಮಗೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಈ ಜಿಲ್ಲಾ ಬೋರ್ಡುಗಳ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತವೆಯೇ ಇಲ್ಲವೇ ಎನ್ನುವುದನ್ನು ನೋಡಬೇಕೆಂಬುದು. ಇದು ಬಹಳ ಮುಖ್ಯ. ಈ ಸ್ಥಳೀಯ ಸಂಸ್ಥೆಗಳ ಕೆಲಸಕಾರ್ಯಗಳನ್ನು ಯಾರೋ ಒಬ್ಬರು ಸರಿಯಾಗಿ ಮಾಡಲಿಲ್ಲವೆಂಬ ಕಾರಣದಮೇಲೆ ಈ ರೀತಿ ಮಾಡಿದ್ದೇವೆಂದು ಹೇಳುವುದು ಸರಿಯಲ್ಲ. ಈ ಸಾರ್ವಜನಿಕ ಕ್ಷೇತ್ರದಲ್ಲಿ ನಡೆಯಬೇಕಾದಂಥ ಕೆಲಸಕಾರ್ಯಗಳನ್ನು ಯಾರು ನಡೆಸಲು ದಕ್ಷರಾಗಿರುತ್ತಾರೋ ಅಂಥ ಜನರೇ ಈ ಸ್ಥಾನಗಳಿಗೆ ಬರುವಂತೆ ನಾವು ಏರ್ಪಾಡುಗಳನ್ನು ಮಾಡಬೇಕು. ಮತ್ತು ಅಂಥ ದಕ್ಷರಾಗಿರತಕ್ಕ ಜನಗಳನ್ನೇ ಚುನಾಯಿಸಿ ಕಳುಹಿಸುವಂಥ ಒಂದು ಭಾವನೆ ಸಾರ್ವಜನಿಕರಲ್ಲಿ ಹುಟ್ಟುವಂತೆ ಮಾಡಬೇಕೆಂಬುದೇ ಇದರ ಮೂಲೋದ್ದೇಶ. ಇಂಥ ಒಂದು ಮನೋಭಾವವನ್ನು ಜನರಲ್ಲಿ ಬೆಳೆಸುವುದಕ್ಕೆ ನಾವು ಒಂದು ಸರಿಯಾದ ಏರ್ಪಾಡನ್ನು ಈ ಹಿಂದೆಯೇ ಮಾಡಿದ್ದೆವು. ಇಂಥ ಒಂದು ಮನೋಭಾವ ಜನರಲ್ಲಿ ಎಲ್ಲಿಯತನಕ ಬೆಳೆಯುವುದಿಲ್ಲವೋ ಅಲ್ಲಿಯವರೆಗೂ, ಈ ಸಂಸ್ಥೆಗಳಿಗೆ ಉದ್ಧಾರವಿಲ್ಲ. ಆದುದರಿಂದ ಇಂಥ ಒಂದು ಅನುಕೂಲವಾದ ರಾಜ್ಯವನ್ನು ಸ್ಥಾಪನೆ ಮಾಡಬೇಕೆಂದು ಮೊದಲಿನಿಂದಲೂ ಸೂಚನೆಗಳನ್ನು ಮಾಡುತ್ತಲೇ ಬಂದಿದ್ದೇವೆ. ಆದರೆ ತಾವು ಈಗ ಈ ರೀತಿಯಾಗಿ ಇದನ್ನು ಮಾಡಿದ್ದೀರಿ. ಆದರೆ ಇದರ ಫಲಿತಾಂಶ ಮುಂದೇನಾಗುತ್ತದೆಯೋ ಅದನ್ನು ನಾನೀಗಲೇ ಹೇಳುವುದಕ್ಕೆ ಸಾಧ್ಯವಿಲ್ಲ.

ಇನ್ನು ಈ ಮಲ್ಟಿ ಮೆಂಬರ್ಸ್ ಕಾನ್ಸ್ಟಿಟ್ಯೂಯೆನ್ಸಿ ವಿಚಾರವಾಗಿ ಅನೇಕ ಸದಸ್ಯರುಗಳು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಈ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಮಾಡಿದರೆ ಹೆಚ್ಚು ಅನುಕೂಲವೂ ಮತ್ತು ಕಡಮೆ ತೊಂದರೆಗಳೂ ಇರುತ್ತವೆಂದು ಕೆಲವರು ಹೇಳಿದ್ದಾರೆ. ನಾವು ಹೀಗೆ ಬರೀ ಒಂದು ಎಲೆಕ್ಷನ್ನಲ್ಲಿ ಚುನಾವಣೆಯಾಗಿ ಬರತಕ್ಕದ್ದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಈ ರೀತಿಯಾಗಿ ಮಾಡುವುದಾಗಿದ್ದರೆ ಇದೂ ಕೂಡ ಒಂದು ಉತ್ತಮವಾದ ದಾರಿ ಎಂದೇ ನಾನೂ ಕೂಡ ತಿಳಿದುಕೊಂಡಿದ್ದೇನೆ. ಮುಂದೆ ಈ ಸಂಬಂಧವಾಗಿ ತೊಂದರೆಗಳು ಕಡಮೆಯಾಗುತ್ತ ಹೋಗುವುದಕ್ಕೆ ಯಾವುದು ಸೂಕ್ತವಾದ ಹಾದಿಯೋ ಆ ದಾರಿಯಲ್ಲಿ ನಾವು ಮುಂದುವರಿಯತಕ್ಕದ್ದು ಒಳ್ಳೆಯದು. ಆದರೆ ಈ Multi-members Constituency ಮಾಡುವುದರಲ್ಲಿ ಏನೊಂದು ತೊಂದರೆಯಾಗುತ್ತದೆಯೆಂಬ ಅಂಶವನ್ನು ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮೊನ್ನೆ ತಾನೆ ನಡೆದ ಈ ಗ್ರಾಮ ಪಂಚಾಯಿತಿಗಳ ಚುನಾವಣೆಗಳಲ್ಲಿ ನೋಡಿ ಅನುಭವ ಪಡೆದುಕೊಂಡಿರುತ್ತಾರೆ. ಈಗಾಗಲೇ ನಾವು ಅಡಲ್ಟ್ ಫ್ರಾಂಚೈಜನ್ನು ಒಪ್ಪಿಕೊಂಡಿದ್ದೇವೆ. ಇದಕ್ಕೆ ಯಾವ ತೊಂದರೆಯೂ ಬಾರದಂತೆ ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯ. ನನ್ನ ಮಿತ್ರರಾದಂಥ ಶ್ರೀಮಾನ್ ಎಚ್. ಸಿ. ನಾಗಯ್ಯರೆಡ್ಡಿಯವರೂ ಮತ್ತು ನಾನೂ ಹಿಂದೆ ಒಂದಾವರ್ತಿ ನಡೆಸಿದ ಚುನಾವಣೆಯಲ್ಲಿ ಭಾಗವಹಿಸಿದ್ದೆವು. ಇದರ ಪರಿಣಾಮ ಏನಾಯಿತೆಂಬುದನ್ನು ಉದಾಹರಣೆಗಾಗಿ ಈಗ ಹೇಳಬೇಕೆಂದಿದ್ದೇನೆ. ಈ ಹಿಂದೆ ಒಂದಾವರ್ತಿ ಒಂದು ಜಿಲ್ಲಾ ಬೋರ್ಡಿಗೆ ಚುನಾವಣೆಗಳು ನಡೆಯಬೇಕಾದಂಥ ಕಾಲದಲ್ಲಿ ನಮ್ಮ ಪಕ್ಷದ ಪರವಾಗಿ ಮೂರುನಾಲ್ಕು ಜನ ಉಮೇದು

ವಾರರು ಚುನಾವಣೆಗೆ ಆಗ ನಿಂತಿದ್ದರು. ಆದರೆ ಆಗೇನೋ ಅಕಸ್ಮಾತ್ತಾಗಿ ಆ ಮೂವರ ಹೆಸರುಗಳೂ ಆ ಓಟರ್ಸ್ ಪಟ್ಟಿಯಲ್ಲಿ ಮೊದಲೇ ಪ್ರಕಟ್ಟಿಸಲ್ಪಟ್ಟಿದ್ದವು. ಇನ್ನು ಉಳಿದ ಉಮೇದುವಾರರುಗಳ ಹೆಸರನ್ನು ಈ ಮೂವರ ಕೆಳಗೆ ಮುದ್ರಿಸಲಾಗಿತ್ತು. ಆದರೆ ಓಟ್ ಮಾಡತಕ್ಕಂಥ ಕಾಲದಲ್ಲಿ ಪೋಲಿಂಗ್ ಆಫೀಸರು ಆ ಓಟರ್ಸ್ ಪಟ್ಟಿಯನ್ನು ಓಟ್‌ದಾರರ ಕೈಗೆ ಕೊಡುವಾಗ ತಲೆ ಕೆಳಕಾಗಿ ಕೊಟ್ಟಿದ್ದರಿಂದ ನಮ್ಮ ಪಕ್ಷದ ಉಮೇದುವಾರರಿಗೆ ಓಟ್ ಮಾಡಬೇಕೆಂದು ಹೋಗಿದ್ದ ಜನರು ನಮ್ಮ ಪಕ್ಷದ ಉಮೇದುವಾರರು ಇಟ್ಟುಕೊಂಡಿದ್ದಂಥ ಹಸುವಿನ ಗುರುತು ತಲೆಕೆಳಗಾಗಿ ಅವುಗಳು ಏಕೋ ಪಾಪ ! ಕಾಲು ಮೇಲಕ್ಕೆ ಮಾಡಿಕೊಂಡಿರುತ್ತವೆಂದು ಹೇಳಿ ಆ ಓಟರ್ಸ್ ಪಟ್ಟಿಯ ಕೊನೆಯಲ್ಲಿದ್ದಂಥ ಬೇರೆ ಮೂರುಜನ ಉಮೇದುವಾರರಿಗೆ ಓಟನ್ನು ಕೊಟ್ಟುಬಂದಿದ್ದರು. (ಸಭೆಯಲ್ಲಿ ನಗು !). ಆದರೆ, ಇನ್ನು ಮುಂದಕ್ಕೆ ಹೀಗಾಗುವುದು ಬೇಡ. ಜನರು ತಮಗೆ ಯಾರು ಬೇಕೋ ಅವರನ್ನು ಸುಲಭವಾಗಿ ಚುನಾವಣೆ ಮಾಡುವುದಕ್ಕೆ ಅವಕಾಶವಿರುವಹಾಗೆ ಮಾಡುವುದು ಒಳ್ಳೆಯದು. ಈಗಾಗಲೇ ನಡೆದಿರತಕ್ಕಂಥ ಈ ವಿಲೇಜ್ ಪಂಚಾಯಿತಿಗಳ ಚುನಾವಣೆಯಲ್ಲಿ ಏನೇನು ನ್ಯೂನಾತಿರಿಕ್ತಗಳು ಕಂಡುಬಂದಿರುತ್ತವೆಯೋ ಅವುಗಳು ಮುಂದಕ್ಕೆ ಉದ್ಭವಿಸದಿರುವಂತೆ ಯಾವರೀತಿ ಮಾಡಬೇಕೋ ಹಾಗೆ ಮಾಡತಕ್ಕದ್ದು ಆವಶ್ಯಕವೆಂದು ಹೇಳುತ್ತೇನೆ. ಹಾಗೆ ನಾವು ಈ ದಿವಸ ಈ ಒಂದು ಎಚ್ಚರಿಕೆಯನ್ನು ತೆಗೆದುಕೊಳ್ಳದೆ ಮುಂದುವರಿದರೆ ಮುಂದೆಯೂ ಸಹ ಇದೇ ರೀತಿ ತೊಂದರೆಗಳು ಉಂಟಾಗಲು ಪುನಃ ನಾವೇ ಅವಕಾಶ ಕಲ್ಪಿಸಿಕೊಟ್ಟಂತೆ ಆಗುತ್ತದೆ. ಆದರೆ ಈಗ ಈ ಸಿಂಗಲ್ ಮೆಂಬರ್ಸ್ ಕಾನ್ಸಿಟ್ಯೂಯೆನ್ಸಿ ಇಟ್ಟುಕೊಂಡರೆ ಅನಾನುಕೂಲವಾಗುತ್ತದೆಂದು ಸುಮ್ಮನೆ ಹೇಳಿದ್ದಾರೆಯೇ ಹೊರತು ಏನು ಅಂಥ ಅನಾನುಕೂಲಗಳಾಗುತ್ತವೆ ಎಂಬುದನ್ನು ಇಲ್ಲಿಯವರೆಗೆ ಯಾರೂ ವಿಶದಪಡಿಸಿ ತಿಳಿಸಿರುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—'ಅನುಕೂಲ ಆಗುತ್ತದೆ' ಎಂದು ಹೇಳಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಏನು ಅನಾನುಕೂಲ ಆಗುತ್ತದೆ ಎನ್ನತಕ್ಕ ಬಗ್ಗೆ ಇಷ್ಟನ್ನೂ ಹೇಳಿಲ್ಲ. ಈ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೊಡತಕ್ಕ ಶೇಕಡ ಆರೂಕಾಲು ಭಾಗದ ಕಂದಾಯದ ಉತ್ಪತ್ತಿಯೇನಿತ್ತೋ ಅದನ್ನು ಈ ಜಿಲ್ಲಾ ಬೋರ್ಡುಗಳಿಗೆ ಕೊಡಬೇಕೆಂದು ಹೇಳುತ್ತಿದ್ದೆವು. ಆದರೆ ಈಗ ಈ ಮಸೂದೆಯಲ್ಲಿ 'ಕೊಡಬೇಕಾಗಿಲ್ಲ' ಎಂದು ತಿಳಿಸಿದ್ದಾರೆ. ಆದರೆ ಹೀಗೆ ಯಾರಿಗೇ ಆಗಲಿ ಯಾವ ಹಣವನ್ನೂ ಕೊಡದೆ ನೀವು ಯಾವ ಕೆಲಸವನ್ನೇ ಆಗಲಿ ಮಾಡಿಕೊಂಡು ಹೋಗಬೇಕೆಂದು ಹೇಳುವುದು ಅಷ್ಟು ಸರಿಹೋಗಲಾರದೆಂದು ನನಗೆನ್ನಿಸುತ್ತಿದೆ. ಸರ್ಕಾರದವರು ಯಾವ ಕೆಲಸಗಳನ್ನೇ ಕೈಗೊಂಡರೂ, ಆ ಕೆಲಸಗಳನ್ನು ಈ ಸ್ಥಳೀಯ ಸಂಸ್ಥೆಗಳ ಮೂಲಕ ಮಾಡಿಸುವುದರಿಂದ ಜನರ ಒಂದು ಹೆಚ್ಚಿನ ಸಂಪರ್ಕವನ್ನು ಸರ್ಕಾರ ಇಟ್ಟುಕೊಳ್ಳಲು ಅನುಕೂಲವಾಗಿರುತ್ತದೆ ಎಂಬ ಒಂದು ದೃಷ್ಟಿಕೂಡ ಇದರಲ್ಲಿ ಅಡಕವಾಗಿದೆ. ಇಲ್ಲಿಯತನಕ ಈ ಜಿಲ್ಲಾ ಬೋರ್ಡುಗಳು ಬಹಳ ಆಸೆಯಿಂದ ಅನೇಕ ರಾಷ್ಟ್ರಾಭಿವೃದ್ಧಿಯ ಕೆಲಸಕಾರ್ಯಗಳನ್ನು ಕೈಗೊಂಡು ಅವುಗಳನ್ನು ನಡೆಸಿದ್ದಾರೆ. ದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಹರಡಲು ಸಂಸ್ಥಾನಾದ್ಯಂತವೂ ಹೈಸ್ಕೂಲುಗಳನ್ನು ತೆರಿದಿದ್ದಾರೆ. ಇದರಿಂದ ನಮ್ಮ ನಾಡಿನ ವಿದ್ಯಾಭಿವೃದ್ಧಿಗೆ ಬಹಳ ಉಪಕಾರ ಮಾಡಿದಂತಾಗಿದೆ. ಈ ಕೆಲಸ ಕಾರ್ಯಗಳನ್ನೆಲ್ಲಾ ಜಿಲ್ಲಾ ಬೋರ್ಡಿನವರು ಮಾಡದಿದ್ದರೆ ಸರ್ಕಾರದವರೇ ಮಾಡಬೇಕಾಗಿತ್ತು. ಆದರೆ ಸರ್ಕಾರದವರು ಈ ಕೆಲಸಗಳನ್ನು ಬಹಳ ನಿಧಾನ ಮಾಡಿದ್ದರಿಂದ ಜಿಲ್ಲಾ ಬೋರ್ಡುಗಳೇ ಈ ಕೆಲಸಕ್ಕೆ ಕೈಹಾಕಬೇಕಾಗಿ ಬಂತು. ಆದರೆ ಈ ದಿವಸ ಈ ಜಿಲ್ಲಾ ಬೋರ್ಡುಗಳು ಬೇಕಿಲ್ಲ ಎಂದು ಹೇಳಬಹುದು ; ತಾಲ್ಲೂಕು ಬೋರ್ಡುಗಳೂ ಕೆಲಸ ಮಾಡಬಹುದು. ಆದರೆ ಅದನ್ನು ನಾನು ಈಗಲೇ ಹೇಳಲು ತಯಾರಿಲ್ಲ. ಮುಂದೆ ಅವುಗಳಲ್ಲಿ ಒಂದೆರಡರ ಹೆಸರೇನಾದರೂ ಕೆಟ್ಟುಹೋದಲ್ಲಿ ಆಗ ನೀವೇ ಈ ತಾಲ್ಲೂಕು ಬೋರ್ಡು ಬೇಕೆಂದು ಹೇಳಿದ್ದಿರಿ ಎಂದು ಸರ್ಕಾರದವರು ಕೇಳಬಹುದು. ಆದರೆ ಮುಂದೆ ಯಾರೂ ಕೆಲಸ ಮಾಡಲಿಲ್ಲ ಎಂದು ಹೇಳಿದರೆ ಅದಕ್ಕೆಲ್ಲಾ ಸರ್ಕಾರವೇ ಜವಾಬ್ದಾರಿ ಹೊರಬೇಕು. ಈ ದಿವಸ ಯಾರು ಸರಿಯಾಗಿ ಕೆಲಸ ಮಾಡುತ್ತಿದ್ದರೋ ಅವರನ್ನು ಬದಲಾಯಿಸಿ ಬೇರೆ ಸಂಸ್ಥೆಗಳಿಗೆ ಕೆಲಸ ನಿರ್ವಹಿಸಲು ಏರ್ಪಾಡು ಮಾಡಿದರೆ ಆ ಸಂಸ್ಥೆಗಳು ಹೇಗೆ ಕೆಲಸ ಕಾರ್ಯಗಳನ್ನು ನೆರವೇರಿಸಬಲ್ಲವು ಎನ್ನುವುದೆಲ್ಲಾ ಸರ್ಕಾರದವರ ಜವಾಬ್ದಾರಿಯ ಮೇಲೆ ನಿಲ್ಲುತ್ತದೆ. ಅಥವಾ ಇನ್ನು ಮುಂದಕ್ಕೆ ಈ ಹೊಸ ಸಂಸ್ಥೆಗಳನ್ನು ಮಾಡುವುದೂ ಬೇಡ, ಈ ದಿವಸದ ತನಕ ಇದ್ದಂಥ ಸಂಸ್ಥೆಗಳೂ ಬೇಡ, ನೀವೆಲ್ಲಾ ಸುಮ್ಮನೆ ಕುಳಿತಿರಿ ಎಂದು ಹೇಳಿದರೆ ಅದೂ ಕೂಡ ಆಗಬಹುದು. ಈ ಕೆಲಸಗಳನ್ನೂ ಸರ್ಕಾರವೇ ವಹಿಸಿಕೊಳ್ಳಲಿ; ಈ ಸಂಸ್ಥೆಗಳನ್ನೆಲ್ಲಾ ತೆಗೆದುಹಾಕಿಬಿಡಲಿ. ಅದಕ್ಕೂ ನಾನು ಬೇಡವೆಂದು ಹೇಳುವುದಿಲ್ಲ. ಒಟ್ಟಿನಲ್ಲಿ ಯಾವ ದೃಷ್ಟಿಯಿಂದಲಾದರೂ ಸರಿ, ಕೆಲಸ ನಡೆದುದೆಲ್ಲಾ ಒಂದು. ನಾಲ್ಕು ಜನರು ಎಲೆಕ್ಷನ್ನಿಗೆ ಬರಬೇಕು, ನಾಲ್ಕು ಜನರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರುಗಳಿರಬೇಕೆಂದು ಹೇಳುವುದರಿಂದ ದೇಶಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲ ; ಇದರಿಂದ ದೇಶಕ್ಕೂ ಒಳ್ಳೆಯದಾಗುವುದಿಲ್ಲ. ತಾಲ್ಲೂಕು ಬೋರ್ಡುಗಳಿಗೆ ಶೇಕಡ 6 1/4 ರೆವಿನ್ಯೂ ಒದಗಿಸುವಂತೆ ಹೇಳಿದ್ದಾರೆ. ಅವುಗಳಿಗೂ ಸರ್ಕಾರದವರು ಈ ಹಣದ ವರಮಾನಕ್ಕೆ ಅಗತ್ಯವಾಗಿ ದಾರಿ ತೋರಿಸಲಿ. ಅದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಈ ಸಂಸ್ಥೆಗಳಿಗೆ ಬರುತ್ತಿದ್ದ ಉತ್ಪತ್ತಿಯಲ್ಲಿ ಈ ಶೇಕಡ 6 1/4 ಬಿಟ್ಟುಕೊಡಬೇಕೆಂದು ಹೇಳಿರುವುದು ಸರಿಯಾದದ್ದಲ್ಲ ಎಂದು ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಜೆ. ಮಹಮ್ಮದ್ ಇಮಾಂ.—ಸ್ವಾಮಿ ಸುಮಾರು ಇಲ್ಲಿಗೆ ಎರಡು ಮೂರು ದಿವಸಗಳಿಂದಲೂ ಈ ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಬೋರ್ಡುಗಳ ವಿಚಾರವಾಗಿ ಬಹಳ ತೀವ್ರವಾದ ಚರ್ಚೆಗಳು ನಡೆಯುತ್ತಿವೆ. ಆದರೆ ಹೀಗೆ ಇವುಗಳ ವಿಚಾರವಾಗಿ ಚರ್ಚೆ ನಡೆಯುತ್ತಿರುವುದು ಈ ಎರಡು ದಿವಸಗಳಿಂದಲೇ ಅಲ್ಲ ; ಸುಮಾರು ಮೂರು ದಿವಸಗಳಿಂದಲೂ ಅಲ್ಲ, ಈ ಜಿಲ್ಲಾ ಬೋರ್ಡು ಮಸೂದೆಯನ್ನು ಯಾವ ರೀತಿಯಾಗಿ ತಿದ್ದುಪಡಿ ಮಾಡಬೇಕೆಂಬುದರ ಬಗ್ಗೆ ಸುಮಾರು ಮೂರು ವರ್ಷಗಳಿಂದಲೂ ಹೀಗೆಯೇ ಚರ್ಚೆಗಳು ನಡೆಯುತ್ತಲೇ ಇವೆ. ಈ ವಿಚಾರದಲ್ಲಿ ಈ ಸಭೆಯ ಮಾನ್ಯ ಸದಸ್ಯರುಗಳಿಗೆಲ್ಲಾ ಮನಸ್ಸು ತುಂಬ ಬಾಧಿಸುತ್ತಿದೆ. ಈ ಸರ್ಕಾರದ ಪೀಠವನ್ನು ಮಂತ್ರಿಗಳು ಅಲಂಕಾರ ಮಾಡಿ

(ಶ್ರೀ ಜೆ. ಮಹಮ್ಮದ್ ಇಮಾಂ.)

ಇಷ್ಟು ದಿನಗಳಾದರೂ ಈ ಕಾರ್ಯ ನೆರವೇರಲಿಲ್ಲ ವಲ್ಲಾ ಎಂಬುದಕ್ಕಾಗಿ ನನಗೆ ದುಃಖವೂ ಬರುತ್ತಿದೆ, ಕೋಪವೂ ಬರುತ್ತಿದೆ ಮತ್ತು ನಾಚಿಕೆಯೂ ಆಗುತ್ತಿದೆ. ನನ್ನ ಅಭಿಪ್ರಾಯದಲ್ಲಿ ನಿನ್ನೆಯ ದಿನ ಮತ್ತು ಈ ದಿವಸ ಈ ಸಭೆಯಲ್ಲಿ ನಡೆದಿರತಕ್ಕಂಥ ಚರ್ಚೆಯನ್ನು ನೋಡಿದ್ದರೆ, ಸದಸ್ಯರುಗಳು ಕೊಟ್ಟಿರತಕ್ಕಂಥ ಅಭಿಪ್ರಾಯಗಳನ್ನೆಲ್ಲಾ ಕ್ರೋಡೀಕರಿಸಿ ನೋಡಿದರೆ 'ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ' ಅನ್ನುವ ಹಾಗೆ ನನಗೆ ಕಂಡು ಬರುತ್ತಿದೆ. ನಾನು ಈ ರಾಜಕೀಯಕ್ಕೆ ಪ್ರವೇಶಮಾಡಿ ಇಲ್ಲಿಗೆ 25 ವರ್ಷಗಳಾದವು. ಶ್ರೀ ವಿ. ವೆಂಕಟಪ್ಪನವರು ನನಗಿಂತಲೂ ಸೀನಿಯರ್. ನಾನೂ ಮತ್ತು ಶ್ರೀ ಟಿ. ಮರಿಯಪ್ಪನವರೂ ಈ ಪಾಲಿಟಿಕ್ಸ್‌ಗೆ ಇಳಿಯುವಾಗ ಆಗಲೇ ಶ್ರೀ ವಿ. ವೆಂಕಟಪ್ಪನವರು ಭರ್ಜರಿಯಾಗಿ ಸೂಟ್ ಹಾಕಿಕೊಂಡು ಪಾಲಿಟಿಕ್ಸ್‌ನಲ್ಲಿ ಆಗಲೇ ಬಹಳ ಮುಂದುವರಿದಿದ್ದರು. ಅಂಥ ಹಳೇ ರಾಜಕೀಯ ಪಟುಗಳೂ ಸಹ ಈ ದಿವಸ ನಾನು 'ಯಾವ ಸಂದರ್ಭದಲ್ಲೂ ಯಾವ ಒಂದು ಮಸೂದೆಯೇ ಆಗಲೀ ಇಷ್ಟೊಂದು ವಿವಾದಕ್ಕೆ ಇಟ್ಟುಕೊಂಡಿರಲಿಲ್ಲ' ಎಂದು ಹೇಳಿದರೆ ಅವರೂ ಸಹ ಇದನ್ನು ಒಪ್ಪಿಕೊಳ್ಳುತ್ತಾರೆಂದು ಖಂಡಿತ ಹೇಳಬಲ್ಲೆ. ಇದನ್ನೆಲ್ಲಾ ನೋಡಿದರೆ ನನ್ನ ಮನಸ್ಸಿಗೆ ತುಂಬಾ ವ್ಯಸನವಾಗುತ್ತಿದೆ. ಇದು ಒಂದು ಸಾವಿರನ್ ಪ್ರಶ್ನೆ. ಇದರಲ್ಲಿ ದೇಶಕ್ಕೆ ಸುಖವನ್ನುಂಟುಮಾಡುವಂಥ ವಿಚಾರಗಳು ಅಡಕವಾಗಿರುತ್ತವೆ. ಇಂಥ ಒಂದು ಮಹತ್ತರವಾದ ವಿಚಾರದಲ್ಲಿ ಇಷ್ಟೊಂದು ಜನ ಮಂತ್ರಿಗಳಿದ್ದಾಗ್ಯೂ ಇವರೆಲ್ಲಾ ಸೇರಿ ಒಂದು ನಿರ್ಧಾರಕ್ಕೆ ಇಲ್ಲಿಯವರೆಗೂ ಬರಲಿಲ್ಲವಲ್ಲಾ ಎಂದು ಹೇಳಲು ನನಗೆ ತುಂಬಾ ವ್ಯಸನವೂ ಮತ್ತು ದುಃಖವೂ ಆಗುತ್ತಿದೆ. ಇದರಿಂದ ಇಂದು ದೇಶಕ್ಕೆ ಎಷ್ಟು ಹಾನಿ, ದುಡ್ಡೆಷ್ಟು ಲುಕ್ಸಾನಾಗುತ್ತಿದೆ, ದೇಶಾಭಿವೃದ್ಧಿಗೆ ಎಷ್ಟು ಹಾನಿಯುಂಟಾಯಿತು, ಎಂಬುದಕ್ಕಾಗಿ ನಾವೀಗ ವ್ಯಸನಪಡುತ್ತಿದ್ದೇವೆ. ಆದರೆ ಇಷ್ಟಕ್ಕೆಲ್ಲಾ ಕಾರಣ ಸರ್ಕಾರ ಅನುಸರಿಸುತ್ತಿರುವ ನೀತಿಯೇ ಎಂದು ಹೇಳಬೇಕಾಗಿದೆ. ಆದರೆ ಈ ವಿಚಾರದಲ್ಲಿ ಇಲ್ಲಿಯವರೆಗೆ ಸರ್ಕಾರದವರು ಯಾವ ಒಂದು ನಿರ್ದಿಷ್ಟವಾದಂಥ ನೀತಿ—ನಿಯಮಗಳನ್ನೂ ಅನುಸರಿಸಿಲ್ಲ. ನಾವೆಲ್ಲರೂ ಒಮ್ಮತದಿಂದ ಈ ಡಿಸ್ಟ್ರಿಕ್ಟ್ ಬೋರ್ಡುಗಳು ಬೇಕೇ ಬೇಕು ಇವುಗಳಿಂದ ಪ್ರಜೆಗಳಿಗೆ ಹೆಚ್ಚಿನ ಪ್ರಯೋಜನ ಆಗುತ್ತದೆ ಎಂದು ಹೇಳಿದ್ದೆವು. ನಮ್ಮ ಉದ್ದೇಶ ಹೀಗಿರುವಾಗ ತಮ್ಮ ಪಾರ್ಟಿಯವರು ತಮ್ಮ ಸ್ವಾರ್ಥಾಭಿಪ್ರಾಯಗಳನ್ನಿಟ್ಟುಕೊಂಡು ಇವುಗಳಿಂದ ಕೆಲಸ ಕಾರ್ಯಗಳು ಆಗಬೇಕಾದರೆ ಬಹಳ ಕಷ್ಟವಾಗುತ್ತದೆ ಎಂದು ಹೇಳುತ್ತಿದ್ದಾರೆ. ಹೀಗೆ ಸ್ವಾರ್ಥಪರರಾದಂಥ ಪಾರ್ಟಿಗಳು ಇಲ್ಲಿ ಕುಳಿತು ಇದನ್ನು ತೀರ್ಮಾನ ಮಾಡಲು ಹೊರಟರೆ ಅಡ್ಡಿ ಅಡಚಣೆಗಳು ಬಂದೇ ಬರುತ್ತವೆ. ಆದುದರಿಂದಲೇ ಸರ್ಕಾರದವರ ಮನೋಭಾವ ಮತ್ತು ಅವರ ಕಾರ್ಯ ನೀತಿ ಒಂದೂ ನಿರ್ದಿಷ್ಟವಾಗಿಲ್ಲ ಎಂದು ಹೇಳುತ್ತಿದ್ದೇನೆ. ಅದರಿಂದಲೇ ಇಲ್ಲಿಯವರೆಗೂ ಈ ಜಿಲ್ಲಾ ಬೋರ್ಡಿನ ಕೆಲಸ ಕಾರ್ಯಗಳು ಕಾರ್ಯರೂಪಕ್ಕೆ ಬರಲು ಆಗಿಲ್ಲ. ಹೀಗೆ ನಿಮ್ಮ ಪಾರ್ಟಿಯಲ್ಲೇ ಇಂಥ ದ್ವಂದ್ವಾಭಿಪ್ರಾಯಕ್ಕೆ ಬಂದಿರುವುದರಿಂದ ಈ ಬಗ್ಗೆ ಒಂದು ನಿರ್ಧಾರಕ್ಕೆ ಬರಲು ಇನ್ನೂ ಸಾಧ್ಯವಾಗಿಲ್ಲ. ಇಂಥ ವಿಚಾರಗಳಲ್ಲಿ ಈ ಸಭೆಯು ಒಂದು ತೀರ್ಮಾನಕ್ಕೆ ಬರಬೇಕಾಗಿದ್ದರೆ ಯಾವ ಒಬ್ಬ ವಿರೋಧ ಪಕ್ಷದ ಸದಸ್ಯರಾಗಲಿ ಅಥವಾ ಟ್ರೆಜುರಿ ಬೆಂಚಿನಲ್ಲಿರತಕ್ಕಂಥಾ ಸದಸ್ಯರಾಗಲಿ ಅವರೆಲ್ಲಾ ಸರ್ಕಾರದವರ ಅಭಿಪ್ರಾಯವೆತ್ತಿದೆ ಎಂದು ಆ ಕಡೆಗೇ ನೋಡುತ್ತಿರುತ್ತಾರೆ. ಹೀಗೆ ಸರ್ಕಾರದವರ ಸೂತ್ರಾಡಳಿತ ಯಾವ ಕಡೆ ಹೋದರೆ ನಾವೂ ಆ ಕಡೆ ಹೋಗಬೇಕು. ಆ ರೀತಿ ನಾವೆಲ್ಲರೂ ಬೇಗ ಒಂದು ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುತ್ತದೆ. ಆದರೆ ಈ ದಿವಸ ತಮ್ಮ ಪಾರ್ಟಿ ಈ ಅಭಿಪ್ರಾಯಕ್ಕೆ ವಿರುದ್ಧವಾಗಿರುವುದಾಗಿದ್ದರೆ ತಾವು ಇದನ್ನು ಬೇಗ ಮಾರ್ಪಾಡು ಮಾಡಿಕೊಳ್ಳಬೇಕಾಗಿದೆ ಯೆಂದು ಹೇಳುತ್ತೇನೆ.

3 P.M.

ಆದರೆ ನಮ್ಮ ಸರ್ಕಾರ ಹೇಗಿದೆ ಎಂದರೆ, ಇದೇ ಸರ್ಕಾರವೇ ಅಲ್ಲ, ಯಾವ ಪ್ರಜಾ ಸರ್ಕಾರವೇ ಆಗಲಿ, ಜನರ ಆಶೋತ್ತರಗಳ ಜವಾಬ್ದಾರಿಯನ್ನು ವಹಿಸಿರುವವರು ಅವರು Cabinetನಲ್ಲಿ, ಮಂತ್ರಿ ಮಂಡಲದಲ್ಲಿ ಚರ್ಚೆಮಾಡಿ ಈ ವಿಷಯವಾಗಿ ಒಂದು ಅಭಿಪ್ರಾಯಕ್ಕೆ ಬಂದಿದ್ದು, ಒಂದು ತೀರ್ಮಾನಕ್ಕೆ ಬಂದಿದ್ದು, ಆ ತೀರ್ಮಾನವನ್ನು ಸಭೆಯಮುಂದೆ ಇಟ್ಟು ನಾವು ಅದನ್ನು ಪಾಸ್ ಮಾಡಿಸಲೇಬೇಕು ಎಂಬ ತೀರ್ಮಾನಕ್ಕೆ ಬಂದು ಅದನ್ನು ಈ ಸಭೆಯಮುಂದೆ ಇಟ್ಟರೆ ಆ ತೀರ್ಮಾನವನ್ನು ಅವರಿಗಿರುವ majority ಪ್ರಾಬಲ್ಯದಿಂದ ಜಾರಿಗೆ ತರುವುದರಲ್ಲಿ ಯಾವ ಅಡಚಣೆಯೂ ಇರುವುದಿಲ್ಲ. ಆದರೆ ನಮ್ಮ ಸರ್ಕಾರದವರು ಅವರ ಸ್ವಂತ ಅಭಿಪ್ರಾಯವನ್ನು ಕೊಡುತ್ತಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಈ ವಿಷಯದಲ್ಲಿ ಮಾತ್ರವಲ್ಲ, ಯಾವ ವಿಷಯದಲ್ಲಾಗಲಿ, ಕೂಲಂಕಷವಾಗಿ ಅದರ ಸಾಧಕ ಬಾಧಕಗಳನ್ನು ಯೋಚನೆಮಾಡಿ ಅದರ ತೊಂದರೆಗಳೇನು ಎಂಬುದನ್ನು ಚರ್ಚೆಮಾಡಿ ಒಂದು ಅಭಿಪ್ರಾಯಕ್ಕೆ ಬರುವುದಕ್ಕೆ ಸರ್ಕಾರದವರಿಗೆ ಸರಿಯಾದ ಸಲಕರಣೆಗಳು ಇರುವುದರಿಂದ ಎಲ್ಲವನ್ನೂ ವಿಚಾರಮಾಡಿ ಇಂಥ ಅಭಿಪ್ರಾಯಕ್ಕೆ ಸಭೆಯವರು ಬರಬಹುದು, ಎದುರು ಬೆಂಚಿನವರೂ ಇದನ್ನು ಪುಷ್ಟೀಕರಿಸಬಹುದು ಎಂದು ನಿರ್ದಿಷ್ಟವಾದ ಅಭಿಪ್ರಾಯವನ್ನು ಸಭೆಯಲ್ಲಿ ಇಟ್ಟರೆ ಎಂಥ ಕೆಲಸವಾದರೂ ಸುಲಲಿತವಾಗಿ ನಡೆಯುತ್ತದೆ. ಅದನ್ನು ಬಿಟ್ಟು ಸರ್ಕಾರಿ ಬೆಂಚಿನಲ್ಲಿರತಕ್ಕ ಮಂತ್ರಿಗಳು ಅವರ ಸ್ವಂತ ಅಭಿಪ್ರಾಯವನ್ನು ಕೊಡದೆ ಮೊದಲಿನಿಂಥ ಇಲ್ಲಿಯವರೆಗೂ ಅವರ ನೀತಿ ಅವರ principles, ಬದಲಾಯಿಸುತ್ತ ಬಂದಿರುವುದರಿಂದ ಇಷ್ಟು ತೊಂದರೆಗೆ ಕಾರಣವಾಗಿದೆ, ಇಷ್ಟು ಅಡಚಣೆಗೆ ಕಾರಣವಾಗಿದೆ ಎಂದು ಹೇಳಬಹುದಾಗಿದೆ. ಸದಸ್ಯರ ವಿವಿಧಾಭಿಪ್ರಾಯ ಕೇಳಿದರೆ ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಲಿಗೆ ಮುಕ್ತಿ ಇಲ್ಲವೆಂದು ಕಾಣುತ್ತದೆ. ಈಗ ಈ ಸಭೆಯಲ್ಲಿ ಮೂರು ನಾಲ್ಕು ಅಭಿಪ್ರಾಯಗಳು ಬಂದಿವೆ. ಮೊದಲನೆಯದು, ಶ್ರೀಮಾನ್ ವೆಂಕಟಪ್ಪನವರ ಸಮಿತಿಯವರು ಯಾವ ಯಾವ ಸಲಹೆಗಳನ್ನು ಕೊಟ್ಟರೋ ಯಾವ ಸಲಹೆಗಳು ಒಂದು Act ರೂಪವಾಗಿ ಜಾರಿಗೆ ಬಂದವೋ ಅವನ್ನು ಜಾರಿಗೆ ಕೊಡಬೇಕೆಂಬುದು. ಎರಡನೆಯದು, Multi-member Constituencies ಇರಬೇಕು ಮತ್ತು ಸಾರ್ವತ್ರಿಕ ಚುನಾವಣೆಗಳು ನಡೆಯಬೇಕು. ಮೂರನೆಯದು ಡಿಸ್ಟ್ರಿಕ್ ಬೋರ್ಡಿನ ಸ್ವಲ್ಪ ಹಣ, ಪಂಚಾಯಿತಿಯ ಸ್ವಲ್ಪ ಹಣ ಹಾಕಿ ಇನ್ನೊಂದ ಸಂಸ್ಥೆ ಮಾಡಬೇಕೆಂಬುದು. ನಾಲ್ಕನೆಯದು, multi-member ಅಥವಾ single-member constituency ಇರಬೇಕೇ ಎಂಬುದು ಈ ರೀತಿಯಾಗಿ 3-4 ಅಭಿಪ್ರಾಯಗಳಿವೆ. ಈ ಅಭಿಪ್ರಾಯಗಳು ನಮ್ಮ ಪಾರ್ಟಿಯಲ್ಲಲ್ಲ,

ಎಲ್ಲ ಸದಸ್ಯರಲ್ಲೂ ಇದೆ. I do not blame them; they have come to an honest decision in accordance with their conscience. ಈ ವಿವಿಧಾಭಿಪ್ರಾಯಗಳಿರುವುದರಿಂದ ಸರ್ಕಾರದವರ ಅಭಿಪ್ರಾಯ ಯಾವುದು, ಅಥವ ಆಡಳಿತವಹಿಸಿರುವವರ ಅಭಿಪ್ರಾಯ ಯಾವುದು, ನಮ್ಮ ಅಭಿಪ್ರಾಯ ಯಾವುದು, ಯಾವುದನ್ನು ಪುಷ್ಟೀಕರಿಸಬೇಕು ಎಂಬುದೇ ಕಷ್ಟವಾಗಿದೆ. ಮೊದಲಿನ ರಾಗಾಯಿತು ಇದೇ ನೀತಿಯಿದೆ. ಮೊದಲು ಶ್ರೀಮಾನ್ ವಿ. ವೆಂಕಟಪ್ಪನವರ ಸಮಿತಿಯ ರಿಪೋರ್ಟು ಬಂತು. ನಾವೆಲ್ಲರೂ ಅದನ್ನು ಪುಷ್ಟೀಕರಿಸಿ ಸ್ವಾಗತಿಸಿದೆವು. ಆಗ ನಮ್ಮ ಸ್ನೇಹಿತರೊಬ್ಬರು ಮಾತ್ರ ಸಾರ್ವತ್ರಿಕ ಚುನಾವಣೆ ಬೇಕು ಎಂದು ಹೇಳಿದರು. ಬಾಕಿಯವರೆಲ್ಲರೂ ಶ್ರೀಮಾನ್ ವೆಂಕಟಪ್ಪನವರ ವರದಿಯನ್ನು ಒಪ್ಪಿದೆವು. ಅದರ ಪ್ರಕಾರ 1951ರಲ್ಲಿ ಒಂದು ಮಸೂದೆ ಬಂದು ದೀರ್ಘ ಚರ್ಚೆ ನಡೆದು ಸರ್ವಾನುಮತದಿಂದ ನಾವೆಲ್ಲರೂ ಅದನ್ನು ಒಪ್ಪಿದೆವು. ಮುಖ್ಯವಾದ ತತ್ವವೇನೆಂದರೆ, ಶ್ರೀಮಾನ್ ವಿ. ವೆಂಕಟಪ್ಪನವರ ಸಮಿತಿಯ report ಪ್ರಕಾರ ಡಿಸ್ಟ್ರಿಕ್ಟ್ ಬೋರ್ಡಿಗೂ, ಪಂಚಾಯಿತಿಗೂ ಒಂದು ನಿಕಟ ಸಂಬಂಧವನ್ನು ಉಂಟು ಮಾಡಬೇಕೆಂಬುದು. It was received with unanimous support without any dissenting minute.

ಈಗ, ಡಿಸ್ಟ್ರಿಕ್ಟ್ ಬೋರ್ಡ್ ಕಾರ್ಯಾಂಗವೇ ಬೇರೆಯಾಗಿದೆ, ಪಂಚಾಯಿತಿಯ ಕಾರ್ಯಾಂಗವೇ ಬೇರೆಯಾಗಿದೆ. ಇವೆರಡಕ್ಕೂ ಯಾವ ಸಂಬಂಧವೂ ಇಲ್ಲ. ಈ ಸಂಬಂಧವನ್ನುಂಟು ಮಾಡುವುದಕ್ಕೋಸ್ಕರ ಪಂಚಾಯಿತಿ ಸದಸ್ಯರುಗಳ ಒಂದು ಕ್ಷೇತ್ರವನ್ನು ಮಾಡಿ ಅಲ್ಲಿಂದ ಡಿಸ್ಟ್ರಿಕ್ಟ್ ಬೋರ್ಡಿಗೆ ಸದಸ್ಯರನ್ನು ಚುನಾಯಿಸಬೇಕು ಎಂಬ ತತ್ವವನ್ನು ನಾವು ಒಪ್ಪಿಕೊಂಡಿದ್ದೆವು. ಅದು ಕಾರ್ಯಾಂಗಕ್ಕೂ ಬಂದು ಪಂಚಾಯಿತಿ ಗ್ರೂಪ್ ಮಾಡುವುದಕ್ಕೆ ತಾಲ್ಲೂಕಿನ ಸದಸ್ಯರನ್ನು ಕರೆಸಿಕೊಂಡು ಅದನ್ನು ಜಾರಿಗೆ ತಂದರು. ಆ ಸಮಯಕ್ಕೆ ಹೊಸ ಮಂತ್ರಿಮಂಡಲ ಅಧಿಕಾರಕ್ಕೆ ಬಂತು. ಆಗ ಏನಾಯಿತೆಂದರೆ ಇದು ಹಳೆಯದು ಹಿಂದಿನ ಸರ್ಕಾರ ಯಾವುದೋ ಒಂದು ಉದ್ದೇಶದಿಂದ ಹೀಗೆ ಮಾಡಿದೆ, ಇದರಿಂದ ಸಂಸ್ಥೆಗೇ ಧಕ್ಕೆ ಬರುತ್ತದೆಯೋ ಏನೋ ಎಂಬ ಒಂದು ರೀತಿಯ ಭಯ ಹುಟ್ಟಿ, ಶ್ರೀಮಾನ್ ಟಿ. ಚನ್ನಯ್ಯನವರು proceedings ನೋಡದೆ ಕೆಲವು ತಿದ್ದುಪಡಿಗಳನ್ನು ತೆಗೆದುಕೊಂಡು ಬಂದರು. ಅದರಲ್ಲಿ ಮಧ್ಯೆ "delete that clause of indirect elections" ಎಂದು ಮೇಲ್ಗಡೆ ಸೇರಿಸಿದರು, ಶ್ರೀ ಎ. ಭೀಮಪ್ಪನಾಯಕರು ನಾವು ಬೇಕಾದಷ್ಟು ಮಾಡಿದೆವು, I accepted neither. ಇಷ್ಟು ಮುಖ್ಯವಾದ ಕ್ಲಾಜ್ ಇಷ್ಟು ತತ್ವಗಳನ್ನು ಒಳಗೊಂಡಿದ್ದುದನ್ನು ಒಂದೇ ಒಂದು ನಿಮಿಷದಲ್ಲಿ ಅದನ್ನು ಬದಲುಮಾಡಿದರಲ್ಲಾ ಎನ್ನುವ ಕಾರಣದಿಂದ ನಾವೆಲ್ಲಾ Walk-out ಮಾಡಿದೆವು. ಯಾವ ಮುಖ್ಯವಾದ ಬದಲಾವಣೆ ಮಾಡಬೇಕಾದರೂ ಅವಸರವಸರವಾಗಿ, ಹಠಾತ್ತಾಗಿ ಮಾಡತಕ್ಕದ್ದು ಸರಿಯಲ್ಲ. We should not be taken by surprise. ಅದರ ಮೇಲೆ ಅವರು ಆ ವಿಷಯವನ್ನು vote down ಮಾಡಿದರೂ ಕೊನೆಗೆ ಏನಾಯಿತೆಂದರೆ ಒಂದು ಜಿಜ್ಞಾಸೆ ಬದ್ದು ಸಾರ್ವತ್ರಿಕ ಚುನಾವಣೆಯಾದರೂ ಕೂಡ District Boardನಿಂದ ಏನಾಗುತ್ತದೋ ಏನೋ ಎಂಬ ಭಯದಿಂದ ತಾಲ್ಲೂಕು ಬೋರ್ಡು ಬೇಕು ಎಂಬ ಅಭಿಪ್ರಾಯಬಂತು. ಅದಕ್ಕೆ ಸರ್ಕಾರದವರು ಶ್ರೀಮಾನ್ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕಮಾಡಿದರು. ಸರ್ಕಾರದವರು ಒಂದು ನೀತಿಗೆ ಭದ್ರವಾಗಿ ನಿಲ್ಲದೇ ಇರುವುದೇ ಇದಕ್ಕೆಲ್ಲಾ ಕಾರಣ. ಸರ್ಕಾರದವರು you must give us support ಎಂದು ಭದ್ರವಾಗಿ ನಿಂತಿದ್ದರೆ ಎಲ್ಲರೂ ಸಹಾಯ ಮಾಡಬೇಕಾಗಿತ್ತು. If they had stood firm to the declarations, all these troubles would not have arisen. ಅವರಲ್ಲಿ ತಾಲ್ಲೂಕು ಬೋರ್ಡುಗಳನ್ನು ಮಾಡಬೇಕು, ಜಿಲ್ಲಾ ಬೋರ್ಡುಗಳನ್ನು ಮಾಡಬೇಕು ಎಂದು ಹೀಗೆ wavering policy, inconsistent policy ಇರುವುದರಿಂದ all this trouble has arisen. Rightly or wrongly, Government should stick up to it and get the support of their followers. If they do not get their support, they must resign. ನಮ್ಮ ಡೆಮಾಕ್ರಸಿ ಹಾಗಿಲ್ಲ. ಒಬ್ಬರು ಬಂದು ತಾಲ್ಲೂಕ್ ಬೋರ್ಡು ಬೇಕಾಗಿಲ್ಲ, ಡಿಸ್ಟ್ರಿಕ್ಟ್ ಬೋರ್ಡು ಬೇಕು ಎಂದರೆ ಡಿಸ್ಟ್ರಿಕ್ಟ್ ಬೋರ್ಡು ಮಾಡಲು ನಿರ್ಧರಿಸಿದರು. ಹಾಗೆಯೇ ತಾಲ್ಲೂಕು ಬೋರ್ಡು ಬೇಕು ಡಿಸ್ಟ್ರಿಕ್ಟ್ ಬೋರ್ಡು ಬೇಕಾಗಿಲ್ಲ ಎಂಬ ವಾದ ಬಂದು ಶ್ರೀಮಾನ್ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದರು. ಅದರಲ್ಲಿ ನಾನೂ ಒಬ್ಬ ಸದಸ್ಯ. ಶ್ರೀಮಾನ್ ಚಂದ್ರಶೇಖರಯ್ಯನವರು ಬಹಳ ಕಷ್ಟಪಟ್ಟು ಏನೇನೋ ಮಾಡಿ ಒಂದು ರಿಪೋರ್ಟು ಬರೆದು ಒಪ್ಪಿಸಿದರು. ಅದರಲ್ಲಿ they wanted to adopt a compromise policy. ಆದ್ದರಿಂದ ತಾಲ್ಲೂಕು ಬೋರ್ಡ್, ಜಿಲ್ಲಾ ಬೋರ್ಡ್, ಪಂಚಾಯಿತಿ ಇವು ಮೂರೂ ಇರಲಿ ಎಂದು ಮಾಡಿದರು. ನಾನು ಒಂದು dissenting note ಕೊಟ್ಟಿದ್ದೇನೆ. ಜಿಲ್ಲಾ ಬೋರ್ಡಿಗೂ ಪಂಚಾಯಿತಿಗೂ ಮಧ್ಯೆ ಯಾವುದಾದರೂ ಇನ್ನೊಂದು ಸಂಸ್ಥೆಯನ್ನು ಹಾಕಿದರೆ, it will be to the detriment to both District Boards and Village Panchayets.

ಅವರ powers ಕಡಿಮೆಯಾಗಿ functions ಕಡಿಮೆಯಾಗುತ್ತದೆ. ಡಿಸ್ಟ್ರಿಕ್ಟ್ ಬೋರ್ಡುಗಳ ಕೆಲಸಗಳು ಕಡಿಮೆಯಾಗಿಬಿಟ್ಟು dual responsibilities treble responsibilities ನಿಂದ ಯಾವ ಕೆಲಸವೂ ನಡೆಯುವುದಿಲ್ಲ. This system was tried, ತಾಲ್ಲೂಕು ಬೋರ್ಡುಗಳು ಹಿಂದೆ ಇದ್ದು ಶ್ರೀಮಾನ್ ಚಾಂಡಿಸಾಹೇಬರ ಕಾಲದಲ್ಲಿ ಅದನ್ನು ವಜಾ ಮಾಡಿದರು. I pleaded for only two bodies. There I gave preference to Venkatappa Committee report. This is what I have said:

> "I personally feel that the proposals embodied in the report of Sri Venkatappa's Committee deserve a fair trial; and they still appeal to me as being the best under the existing circumstances.
>
> It is said that the gap between the District Boards and Village Panchayets is too wide. It is to bridge this gap that the

(ಶ್ರೀ ಜೆ. ಮಹಮ್ಮದ್ ಇಮಾಂ.)

Venkatappa's Committee proposed election of members from the village panchayets to the district boards, so that there may be harmony and co-operation between the two bodies."

ಆದರೆ ಸರ್ಕಾರದವರು ಶ್ರೀಮಾನ್ ಚಂದ್ರಶೇಖರಯ್ಯ ಸಮಿತಿ ರಿಪೋರ್ಟಿನಲ್ಲಿ ನಾನಾ ವಿಷಯಗಳನ್ನು ಕೊಟ್ಟಿದ್ದರೂ ಸಹ ಅದರಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡರು? What is thier view? Did they consult the members of this House? It was the duty of the Government to have placed the Report of Chandrasekhariah Committee before this House and ascertained their opinion. Government have spent thousands of rupees on that and the members, including several members of this House, have spent their labour for months over this report. But, unfortunately, they have given a go-by to the report. I very much feel for that. I think the Chairman of that Committee must also be feeling very much. At least that report should have been placed before this House and opportunity given to members to express their opinion.

ಶ್ರೀ ಕೆ. ಪಟ್ಟಾಭಿರಾಮನ್‌ರವರು ಹೇಳಿದ ಹಾಗೆ, "ಅದಕ್ಕದಂಪೋಚಿ ಇದಕ್ಕಿದಂಪೋಚಿ" ಎನ್ನುವ ರೀತಿಯಲ್ಲಿ ಎಲ್ಲರೂ ಮಾಡಿದ್ದು ಏನೂ ಆಗಲಿಲ್ಲ. ಈಗ ಒಂದು ತಿದ್ದುಪಡಿ ತಂದಿದ್ದಾರೆ. ಅದನ್ನು ಯಾವ ಉದ್ದೇಶದಿಂದ ತಂದರು, ಯಾರನ್ನು ಕೇಳಿ ಯಾವ ಪ್ರವೀಣರನ್ನು ಕೇಳಿ ತಂದರು ಎನ್ನುವುದು ಗೊತ್ತಿಲ್ಲ. ಇದರಲ್ಲಿ ಮುಖ್ಯವಾದುದು ಯಾವುದೆಂದರೆ, ಮೊದಲನೆಯದು, ಅಪ್ರತ್ಯಕ್ಷ ಚುನಾವಣೆ ತೆಗೆದುಬಿಟ್ಟು ಸಾರ್ವತ್ರಿಕ ಚುನಾವಣೆ ತರಬೇಕೆಂಬುದು ಎರಡನೆಯದು, ತಾಲ್ಲೂಕನ್ನೇ ಒಂದು ಕ್ಷೇತ್ರವನ್ನಾಗಿ ಮಾಡಬೇಕೆಂಬುದು. ಮೂರನೆಯದು ಮುನಿಸಿಪಾಲಿಟಿಗಳಲ್ಲಿರುವ ಮೆಂಬರುಗಳು ಓಟುಮಾಡಕೂಡದು, ಆದರೆ ಚುನಾವಣೆಗೆ ನಿಲ್ಲಬಹುದು ಎಂಬುದು ನಾಲ್ಕನೆಯದು ಡಿಸ್ಟ್ರಿಕ್ಟ್ ಬೋರ್ಡಿಗೆ ಇದುವರೆಗೂ ಸಲ್ಲುತ್ತಿದ್ದ ಶೇಕಡ $6\frac{1}{4}$ ಭಾಗದಷ್ಟು ಆದಾಯವನ್ನು ತೆಗೆದುಹಾಕಿ ಅದನ್ನು ಸರ್ಕಾರದಿಂದ ನಿರ್ಮಿತವಾಗುವ ಇನ್ನೊಂದು ಸಂಸ್ಥೆಗೆ ಕೊಡಬೇಕೆಂಬುದು. ಐದನೆಯದು ಪ್ರತಿಯೊಂದು ತಾಲ್ಲೂಕಿಗೂ 3 ಜನಕ್ಕೆ ಮೀರದಂತೆ ಸದಸ್ಯರು ಇರಬೇಕೆಂಬುದು. ಇವು ಮುಖ್ಯವಾದ ವಿಷಯಗಳು. ಇದನ್ನೆಲ್ಲಾ ನೋಡಿದರೆ ಶ್ರೀಮಾನ್ ಕೆ. ಪಟ್ಟಾಭಿರಾಮನ್‌ರವರೂ ನಾವೂ ಮತ್ತು ಅನೇಕ ಸದಸ್ಯರೂ ಹೇಳಿದಂತೆ, ನಮ್ಮ ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡಿನಿಂದ ದೇಶಕ್ಕೆ ಒಳ್ಳೆಯದಾಗಬೇಕು, ಡಿಸ್ಟ್ರಿಕ್ಟಿಗೆ ಒಳ್ಳೆಯದಾಗಬೇಕು, ಎನ್ನುವ ಅಭಿಪ್ರಾಯದಿಂದ ನಡೆಯುತ್ತಿಲ್ಲ. ಸುಮ್ಮನೆ ಮುಂದಿನ ಚುನಾವಣೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೀಗೆ ಬದಲಾವಣೆಮಾಡಿಕೊಳ್ಳಬೇಕೆಂದು ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದಾರೆ ಎನ್ನುವುದು ವ್ಯಕ್ತವಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಆ ಭಾವನೆ ಇಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾಕೆಂದರೆ ಸರ್ಕಾರದಲ್ಲಿ ಬೇರೆ ನೀತಿಗಳು, ಭಾವನೆಗಳು ಹುಟ್ಟಿಕೊಂಡಿರುವುದು ಇದನ್ನು ಪುಷ್ಟೀಕರಿಸುತ್ತದೆ. ಸರ್ಕಾರದವರು ಕೆಲವು ಸಂಸ್ಥೆಗಳಿಗೆ ಕೆಲವು ಸದಸ್ಯರ ಈ ನಾಮಕರಣ ಮಾಡುತ್ತಿದ್ದಾರೆ, ಕೆಲವು ಸದಸ್ಯರನ್ನು ಚುನಾಯಿಸುತ್ತಿದ್ದಾರೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ 10-12 ಜನರನ್ನು ಚುನಾಯಿಸಿದರು. ಪಾಂಡವಪುರ ಸಕ್ಕರೆ ಕಂಪನಿಗೂ ಅದೇರೀತಿ ಮಾಡಿದ್ದಾರೆ. ಆಡಳಿತಕ್ಕೆ ಬರುವವರೆಗೆ ಪಕ್ಷದ ಪರವಾಗಿ ಇರಬೇಕು. ಯಾವಾಗ ಆಡಳಿತಕ್ಕೆ ಬಂದರೋ, ಆಗ ಮಂತ್ರಿಗಳು ಬರೀ ಕಾಂಗ್ರೆಸ್‌ಗೋಸ್ಕರ ಮಂತ್ರಿಗಳಲ್ಲ, ದೇಶಕ್ಕೆಲ್ಲ ಮಂತ್ರಿಗಳು ಎಲ್ಲ ಜನಗಳ ಹಿತರಕ್ಷಣೆ ಮಾಡತಕ್ಕದ್ದು ಅವರ ಕರ್ತವ್ಯ. ಅವರು ಅನುಸರಿಸುತ್ತಿರುವ ನೀತಿ ಪಕ್ಷವನ್ನೇ ಅನುಸರಿಸಿಕೊಂಡಿದೆ. Bhadravati Iron Works Boardಗೆ ಹಾಕಿರುವ 12 ಮಂದಿ ಸದಸ್ಯರೂ ಸಹ ಕಾಂಗ್ರೆಸ್ಸಿನವರೇ ಆಗಿದ್ದಾರೆ. ಈ ಸ್ಥಾನಗಳೆಲ್ಲಾ ಕಾಂಗ್ರೆಸ್ ಧುರೀಣರಿಗೆ ಮೀಸಲಾಗಿದೆಯೇ ಹೊರತು ಇತರರಿಗಿಲ್ಲ. ಕಬ್ಬಿಣ ಅಂದರೆ ಏನು ಇತ್ಯಾದಿ ವಿಷಯಗಳು ತಿಳಿದಿರಲಿ ತಿಳಿಯದೆ ಇರಲಿ ಅಂಥವರನ್ನೆಲ್ಲ ಈ ಬೋರ್ಡಿನಲ್ಲಿ ಮೆಂಬರುಗಳಾಗಿ ಹಾಕಿದ್ದಾರೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಶ್ರೀಮಾನ್ ಇಮಾಂಸಾಹೇಬರನ್ನೂ ಅನೇಕ ಕಮಿಟಿಗಳಿಗೆ ಹಾಕಿದ್ದಾರೆ. ನಾವೇನೂ ಬೇಡವೆಂದು ಹೇಳಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—12 ಜನರನ್ನೂ ಕಾಂಗ್ರೆಸ್‌ನವರನ್ನೇ ಹಾಕಿದ್ದಾರೆಂದು ಹೇಳುವುದು ಸರಿಯಲ್ಲ. 3-4 ಜನ ಕಾಂಗ್ರೆಸ್ಸೇತರರೂ ಇದ್ದಾರೆ. All members are not congressmen. Please read the list.

ಶ್ರೀ ಜೆ. ಮಹಮ್ಮದ್ ಇಮಾಂ.—ಆ list ಈಗ ಇಲ್ಲಿಲ್ಲ. ಆದರೆ ನಾನು ಹೇಳುವುದೇನೆಂದರೆ ಸರ್ಕಾರದ ಆಡಳಿತದಲ್ಲಿ ಪಕ್ಷದ ಮನೋಭಾವನೆ ಇರಕೂಡದು.

ಶ್ರೀ ಕಡಿದಾಳ್ ಮಂಜಪ್ಪ.—ಇನ್ನು ಕೆಲವು ಸಂದರ್ಭಗಳಲ್ಲಿ ಸರ್ಕಾರದವರಮೇಲೆ ಇನ್ನೊಂದು ಆರೋಪಣೆ ಬರುತ್ತದೆ. ಗ್ರಾಮಸ್ಥರಿಗೇ ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆಂದು ಹೇಳುತ್ತಾರೆ. ಅಂಥದಕ್ಕೇನು ಮಾಡುವುದಕ್ಕಾಗುತ್ತದೆ?

ಶ್ರೀ ಟಿ. ಮರಿಯಪ್ಪ (ಮೈಸೂರು-ಉತ್ತರ).—ಪ್ಲಾನಿಂಗ್ ಕಮಿಷನ್ನಿಗೆ ಅವರನ್ನೇ ಹಾಕಿದ್ದಾರೆ! ಅವರೇ ಉತ್ತರ ಕರ್ನಾಟಕಕ್ಕೆ tour ಹೋಗಿದ್ದಾರೆ. He must be fair to Government.

ಶ್ರೀ ಜೆ. ಮಹಮ್ಮದ್ ಇಮಾಂ.—ಪ್ಲಾನಿಂಗ್ ಕಮಿಷನ್ನಿಗೆ ಹಾಕಿರುವ ವಿಚಾರ ನಾನೀಗ ಪ್ರಸ್ತಾಪ ಮಾಡಲಿಚ್ಛಿಸುವುದಿಲ್ಲ.

ಮುಖ್ಯವಾಗಿ, ಈ ವಿಚಾರಗಳಲ್ಲಿ ರಾಜಕೀಯ ದೃಷ್ಟಿಯನ್ನು ಬಿಟ್ಟು ದೇಶದ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ನಡೆದರೆ ಕೆಲಸ ಚೆನ್ನಾಗಿ ನಡೆಯುತ್ತದೆ. ಈ ಮಸೂದೆಯಲ್ಲಿ ತಾಲ್ಲೂಕನ್ನು ಒಂದು ಚುನಾವಣಾ ಕ್ಷೇತ್ರವಾಗಿ ಮಾಡಿದ್ದೀರಿ. ಈ ಕಡೆಯವರೂ ಮತ್ತು ಆ ಕಡೆಯವರೂ ಕೆಲವರು ಹೋಬಳಿವಾರು ಕ್ಷೇತ್ರಗಳನ್ನೂ ಅಥವಾ ಒಂದೊಂದು ತಾಲ್ಲೂಕನ್ನು ಮೂರು, ಮೂರು ಕ್ಷೇತ್ರಗಳನ್ನಾಗಿಯೋ ಮಾಡಬೇಕೆಂದು ಹೇಳಿದ್ದಾರೆ. ಇದರಲ್ಲಿ ನಮ್ಮ ಅಭಿಪ್ರಾಯ ಇಷ್ಟೇ. ಕಾಂಗ್ರೆಸ್ ಸಂಸ್ಥೆಯಾದರೆ ಅದೊಂದು

ದೊಡ್ಡ ಸಂಸ್ಥೆ. ಅದಕ್ಕೆ ಅನೇಕ ಸಹಾಯ ಸೌಲಭ್ಯಗಳಿವೆ. ದೊಡ್ಡ ಕ್ಷೇತ್ರದಲ್ಲಾದರೂ ಕೆಲಸ ಮಾಡುವುದಕ್ಕೆ ಅನುಕೂಲತೆಗಳಿವೆ. ಅದನ್ನು ತಿಳಿದು ಕಾಂಗ್ರೆಸ್ಸಿನವರೆಲ್ಲರೂ ಇದನ್ನು ಒಪ್ಪುತ್ತಾರೆಂದು ತಿಳಿದು ನೀವು ತಾಲ್ಲೂಕನ್ನು ಒಂದು ಚುನಾವಣಾ ಕ್ಷೇತ್ರವೆಂದು ಮಾಡಿರುತ್ತೀರಿ. ಅದಕ್ಕೆ ಬದಲು ಹೋಬಳಿವಾರಾಗಿ ಮಾಡಿದರೆ, ಮೂರು ಮೆಂಬರುಗಳನ್ನು ಆರಿಸಬೇಕಾಗಿದ್ದರೆ ಎಲ್ಲರೂ ಒಂದೇ ಹೋಬಳಿಯಿಂದ ಬರುವುದಕ್ಕೆ ಸಾಧ್ಯವಿರುವುದಿಲ್ಲ. ಒಬ್ಬೊಬ್ಬರು ಒಂದೊಂದು ಹೋಬಳಿಯಿಂದ ಬರಬೇಕಾಗುತ್ತದೆ. ಅಲ್ಲಿಗೆ ಹೆಚ್ಚು ಜನ ಹಳ್ಳಿಗಾಡಿನಿಂದಲೇ ಬಂದಂತಾಗುತ್ತದೆ. ತನ್ನ ಪ್ರಾತಿನಿಧ್ಯದಲ್ಲೂ ಕೂಡ, he will effectively represent the interests of that hobli and the representation will be more equitable than it would be if all the three members are elected from one hobli or from one place. ಈ ರೀತಿ ಹಿಂದೆ ಆಗುತ್ತಿತ್ತು. ಹಿಂದೆ ಅಸೆಂಬ್ಲಿಗೆ ನಮ್ಮ ಬೆಂಗಳೂರಿನಿಂದಲೇ ಮೂರು ಜನ ಮೆಂಬರುಗಳು ಈ ರೀತಿಯಲ್ಲಿ ಚುನಾಯಿತರಾಗಿ ಬರುತ್ತಿದ್ದರು. ಅದೇ ಪ್ರಕಾರ ತಾವೀಗ ತಾಲ್ಲೂಕನ್ನೆಲ್ಲಾ ಒಂದೇ ಒಂದು ಚುನಾವಣಾ ಕ್ಷೇತ್ರವೆಂದು ಮಾಡುವುದಾದರೆ, ಎಲ್ಲರೂ ಒಂದೇ ಸ್ಥಳದವರೇ, ಧನಿಕರೂ ಬಲ್ಲಿದರಾಗಿರುವವರೇ ಬರುತ್ತಾರೆ. ತಾಲ್ಲೂಕಿನಲ್ಲಿ influence ಇರತಕ್ಕವರೇ ಮೂರು ಜನರೂ ಚುನಾಯಿತರಾಗುತ್ತಾರೆ. ಅಂಥವರಿಗೇ ಇದು monopoly ಯಾಗಿಬಿಡುತ್ತದೆ. ಇದನ್ನು ಬಿಟ್ಟು ಹೋಬಳಿ ಕ್ಷೇತ್ರಗಳೆಂದು ಮಾಡಿದರೆ ಹೋಬಳಿಗೊಬ್ಬೊಬ್ಬರು ಬರುತ್ತಾರೆ. ಹೋಬಳಿಯ interestsನ್ನೂ guard ಮಾಡುವುದಕ್ಕೆ ಅವರಿಗೊಂದು ಅವಕಾಶವಿದ್ದಹಾಗಾಗುತ್ತದೆ. ತಾಲ್ಲೂಕನ್ನೊಂದು ಕ್ಷೇತ್ರವಾಗಿ ಮಾಡಿದರೆ ಉಮೇದುವಾರರಿಗೂ ಕಷ್ಟವಾಗುತ್ತದೆ; ಖರ್ಚೂ ಜಾಸ್ತಿ; ಪ್ರಾತಿನಿಧ್ಯವೂ equitable ಆಗಿರುವುದಿಲ್ಲ. ಕೆಲವರು ಹೇಳಿದರು, 'ಹೋಬಳಿವಾರು ಮಾಡಿದರೆ, there is room for corruption' ಎಂದು. They quoted the example of municipalities in this connection. ಮುನಿಸಿಪಾಲಟಿಗೂ, ಹೋಬಳಿಗೂ ಏನು ಸಂಬಂಧ? ಅಲ್ಲದೆ 30,000 ಪ್ರಜಾಸಂಖ್ಯೆಗೆ ಒಬ್ಬರು ಮೆಂಬರಂತೆ ತೆಗೆದುಕೊಳ್ಳಬೇಕೆಂದು ಹುಚ್ಚೇಗೌಡರು ಒಂಥ ತಿದ್ದುಪಡಿಯನ್ನು ಕೂಡ ಸೂಚಿಸಿದ್ದಾರೆ. ಅಲ್ಲಿಗೆ 15,000 ವೋಟರುಗಳಾದರು. ಹದಿನೈದು ಸಾವಿರ ಜನಕ್ಕೂ ದುಡ್ಡು ಕೊಡುವುದಕ್ಕೆ ಹೋದರೆ ನಿರ್ನಾಮವಾಗುತ್ತದೆ. Is it ever possible to purchase them? ಮೊದಲಿನಿಂದಲೂ ನಾನೇಕೆ general electionನ್ನಿಗೆ ವಿರೋಧವಾಗಿದ್ದೇನೆಂದರೆ, it would involve tremendous expenditure. That is the most important point. ನಮ್ಮ ಅಸೆಂಬ್ಲಿ ಚುನಾವಣೆಯಲ್ಲಿ ಎಷ್ಟು ದುಡ್ಡು ಖರ್ಚಾಯಿತೋ ಅಷ್ಟೇ ದುಡ್ಡು ಹೆಚ್ಚು ಕಡಮೆ ಇದಕ್ಕೂ ಖರ್ಚುಮಾಡಬೇಕಾಗಿ ಬರುತ್ತದೆ. 1951ನೆಯ ಜನರಲ್ ಎಲೆಕ್ಷನ್ನಲ್ಲಿ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲೇ ಒಂದು ಲಕ್ಷ, ಎರಡು ಲಕ್ಷ ಖರ್ಚಾಯಿತು! ನಮ್ಮ ದೇಶದಲ್ಲಿ ಆಗ ಒಟ್ಟು ಎಷ್ಟು ಖರ್ಚಾಯಿತೆಂದು ಮಾನ್ಯ ಮಂತ್ರಿಗಳೇ ಹೇಳಲಿ. ಅಷ್ಟೇ ದುಡ್ಡನ್ನು ಈ ಚುನಾವಣೆಗೂ ಖರ್ಚುಮಾಡಬೇಕಾದೀತು. ಆಗ 24 ದಿವಸಗಳು ನಡೆಯಿತು, ಈಗಲೂ 24 ದಿವಸ ನಡೆಯಬೇಕಾಗುತ್ತದೆ. This involves a very heavy expenditure; who is to meet that? Is it to be borne by the District Board or by Government? ಡಿಸ್ಟ್ರಿಕ್ಟ್ ಬೋರ್ಡಿನಮೇಲೆ ಹಾಕಿದರೆ ಒಂದೊಂದು ಡಿಸ್ಟ್ರಿಕ್ಟ್ ಬೋರ್ಡಿಗೂ ಒಂದು-ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. This was one point on which I said that for such local elections general elections are unnecessary. I do not want to differ. But even in my heart of hearts, I believe, in indirect election. ಆಮೇಲೆ ಒಂದೊಂದು ತಾಲ್ಲೂಕನ್ನು ಒಂದು ಕ್ಷೇತ್ರವಾಗಿ ಮಾಡಿದರೆ ಸರಿಯಾದ ಸದಸ್ಯರೂ ಬರುವುದಿಲ್ಲ. You must be sure of getting deserving candidates, people with character must come forward, people with enthusiasm and zeal must come forward. But if you make the elections such a herculian affair, ಯಾರು 15,000, 20,000 ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಬರುತ್ತಾರೆ? ಯಾವ ಸರಿಯಾದ candidate ಕೂಡ ಅಷ್ಟು ದುಡ್ಡನ್ನು ಖರ್ಚುಮಾಡುವುದಕ್ಕೆ ಮುಂದೆ ಬರುವುದಿಲ್ಲ. ದುಡ್ಡಿರುವವರು ಯಾರೋ ಬರುತ್ತಾರೆ ಅಷ್ಟೇ. ಅಂಥವರಿಗೂ ಇದರಿಂದ enormous cost ಆಗುತ್ತದೆ. ಅವರೊಂದು ಕಾರನ್ನಿಟ್ಟುಕೊಳ್ಳಬೇಕು, ಪೆಟ್ರೋಲ್ ಖರ್ಚು ವಹಿಸಬೇಕು. ಇಷ್ಟೆಲ್ಲಾ ಮಾಡಿದರೂ ಅವನಿಗೆ ಬರತಕ್ಕ ಪ್ರತಿಫಲ ಕಡಮೆ. After all what are District Boards? Strictly speaking in Local Bodies you should not have politics. I am one of those who believe that in Local Bodies, politics must be completely eschewed. There is no difference. If we are fighting the election for Local Bodies on party tickets, all these troubles will ensue. ಸ್ಥಳೀಯ ಸಂಸ್ಥೆಗಳಲ್ಲಿ ಅಂಥ ಭಿನ್ನಾಭಿಪ್ರಾಯ ಯಾವುದೂ ಇಲ್ಲ. ಬಾವಿ ಕೊಡುವುದು, ರಸ್ತೆ ಕೊಡುವುದು—ಇಂಥ ವಿಷಯಗಳಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಿಲ್ಲ. ಇದಕ್ಕೆ ಪಾರ್ಟಿಗಳಾದರೂ ಏಕೆ? ಈಗಲಾದರೂ ನಮ್ಮ ಕಾಂಗ್ರೆಸ್ ಮಿತ್ರರು ಇದನ್ನು ಮನಗಂಡು, ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಸ್ಥಳೀಯ ಚುನಾವಣೆಗಳಲ್ಲಿ ಪಾರ್ಟಿಗಳಿರಕೂಡದೆಂದು ಮಾಡಿ, ಸುಲಭವಾಗಿ, ಸುಲಲಿತವಾಗಿ ಚುನಾವಣೆಗಳು ನಡೆಯುವಂತೆ ಮಾಡೋಣ. ದಕ್ಷರೂ, ಯೋಗ್ಯರೂ ಆದವರೇ ಬರಲಿ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದರೆ ಯಾವ ಕಷ್ಟವೂ ಇರುವುದಿಲ್ಲ. ಅದು ಬಿಟ್ಟು, if you are fighting the election for Local Bodies on party tickets, all these troubles will ensue.

ಶ್ರೀ ಟಿ. ಮರಿಯಪ್ಪ.—ಇಂಗ್ಲೆಂಡಿನಲ್ಲಿ ಕೌಂಟಿ ಕೌನ್ಸಿಲ್‌ಗಳನ್ನು ಹಾಗಾದರೆ ಯಾವ ರೀತಿ ಮಾಡುತ್ತಾರೆ?

Sri J. MOHAMED IMAM.—ಅಲ್ಲಿ ಈ ರೀತಿಯಿಲ್ಲ. There is no adult franchise in the County Council of England. There one must be a rate payer and only a rate payer has a power to vote. There

(SRI J. MOHAMED IMAM.)
is no adult franchise for County Council. Any Local body is a corporation. Corporator means a member of that particular constituency who must have some interest in the Corporation. If a member has absolutely no interest and does not contribute towards the corporation, he cannot have any part in the Corporation. So, for an election to the County Council, they have made a convention that only the rate-payers should be a voter.

ನಮ್ಮಲ್ಲಿ ಆ ತತ್ವವನ್ನನುಸರಿಸಿಲ್ಲ. Even now, I am feeling that our old system of having a limited franchise was the best. ಆಗ ಒಂದು ರೀತಿಯಲ್ಲಿ ಚೆನ್ನಾಗಿಯೇ ನಡೆಯುತ್ತಿತ್ತು. ಈಗ ಇಷ್ಟೆಲ್ಲಾ ಮಾಡಿರುವುದರಿಂದ ನಮಗೇ ಕಷ್ಟ ಬಂದಿದೆ. ಆದ್ದರಿಂದ ಸಾರ್ವತ್ರಿಕ ಚುನಾವಣೆಯಿರಲಿ ಇಲ್ಲದಿರಲಿ, it is not a serious point. But it is absolutely necessary to have a single member constituency. If you make the entire taluk as one constituency, then you will be landing yourself into trouble and you will be plunging the people also into despair. ಆಗ ಡಿಸ್ಟ್ರಿಕ್ಟ್ ಕೆಲಸಗಳೆಲ್ಲಾ ಹೊಲಸಾಗಿ ಹೋಗುತ್ತವೆ. ಈಗಲೇ ಎಲೆಕ್ಷನ್ ಮುಂತಾದುವುಗಳನ್ನು ಮಾಡಿ ಡಿಸ್ಟ್ರಿಕ್ಟ್ ಬೋರ್ಡ್ ಕೆಲಸಕಾರ್ಯಗಳು ನಿರಾಶಾದಾಯಕವಾಗಿರುತ್ತವೆ. ಅಲ್ಲದೆ, ಹಿಂದಿನ ಚುನಾವಣೆಗಳಲ್ಲಿ, ಈಗ ನೀವು ಹೇಳಿರುವಂತೆ ಮುನಿಸಿಪಾಲಿಟಿಯಲ್ಲಿರುವವರು ಯಾರೇ ಆಗಲಿ ಉಮೇದುವಾರರಾಗಿ ನಿಲ್ಲಬಹುದು ಆದರೆ ವೋಟು ಮಾಡುವುದಕ್ಕೆ ಹಕ್ಕಿಲ್ಲ, ಎಂದಿರಲಿಲ್ಲ. ಇದು ನಿಯಮ ನಿಬಂಧನೆಗಳಿಗೆ ವ್ಯತಿರಿಕ್ತವಾಗಿರುವಂತೆ ಕಾಣುತ್ತದೆ. ನ್ಯಾಯವಾಗಿ ಉಮೇದುವಾರನಾಗಿ ನಿಲ್ಲುವವನು ವೋಟುದಾರನಾಗಿರಲು ಮುಂಚೆಯೇ ಹಕ್ಕು ಪಡೆದವನಾಗಿರಬೇಕು. ಇಲ್ಲದಿದ್ದರೆ ಇದೊಂದು ಬಹಳ ವಿರೋಧಾಭಾಸವಾದ ರೀತಿಯಾಗಿರುತ್ತದೆ. Even now, the Hon'ble Minister may bring an amending Bill.

Mr. SPEAKER.—Not now. How can the Government bring in an amending Billnow? Rules do not permit it.

Sri Mulka GOVINDA REDDY (Chitaldrug).—Rules can be suspended and the Government can bring in an amending Bill. Last time the Government did move an amendment.

Sri B. HUTCHE GOWDA.—This Bill may be referred to a Select Committee and amendments effected.

ಶ್ರೀ ಜೆ. ಮಹಮ್ಮದ್ ಇಮಾಂ.—Anyway, I am warning the Government. ಇದರಿಂದ ಏನಾಗುತ್ತದೆಂದರೆ ಡಿಸ್ಟ್ರಿಕ್ ಬೋರ್ಡೆಲ್ಲಾ municipalise ಆಗಿ ಬಿಡುತ್ತದೆ. ಮೊನ್ನೆತಾನೆ ಒಬ್ಬರು ಇಲ್ಲಿ ಹೇಳುತ್ತಿದ್ದರು, ನಾನು ಹೋಗಿ ನಿಂತು ಡಿಸ್ಟ್ರಿಕ್ ಬೋರ್ಡ್ ಪ್ರೆಸಿಡೆಂಟ್ ಆಗುತ್ತೇನೆ ಎಂದು. ಹೀಗಾದರೆ ಹಳ್ಳಿಯವರಿಗೆ ಯಾವ interest ಕೂಡ ಇರುವುದಿಲ್ಲ.

ಆಮೇಲೆ ಡಿಸ್ಟ್ರಿಕ್ ಬೋರ್ಡ್‌ಗಳಿಗೆ ಭೂಕಂದಾಯದಲ್ಲಿ ಶೇಕಡ 12½ ಯಷ್ಟನ್ನು ಕೊಡಬೇಕೆಂದು ಇದುವರೆಗೂ ನಿಯಾಮಕವಾಗಿತ್ತು. This was a great boon and I thought the Government would render to the District Boards a great help. ಆದರೆ ಈಗ ಇದ್ದಕ್ಕಿದ್ದಹಾಗೆ ಇದನ್ನು ತೆಗೆಯಬೇಕೆಂದು ಯೋಚನೆ ಮಾಡಿದ್ದೀರಿ. ಅದೂ ಎಂಥ ಕಾಲದಲ್ಲಿ ? ಯಾವುದೊಂದು ಡಿಸ್ಟ್ರಿಕ್ ಬೋರ್ಡಿನಲ್ಲಿಯೂ ದುಡ್ಡಿಲ್ಲ. Every District Board has become bankrupt. ಎಲ್ಲದರಲ್ಲೂ *minus* Budget ಇದೆ. ನಮ್ಮ ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡಿಗೆ 9 ಲಕ್ಷ ರೂಪಾಯಿಗಳ liabilities ಇವೆ. ಹೀಗಿರುವಲ್ಲಿ ಇದೇನೊ ಅಲ್ಪಸ್ವಲ್ಪ ದುಡ್ಡು ಬರುತ್ತದೆ, ಕೆಲಸ ಕಾರ್ಯಗಳನ್ನು ಮಾಡೋಣ ಎಂದರೆ ಅದಕ್ಕೂ ಕಲ್ಲು ಬಿತ್ತು. ಆ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ವಿಲೇಜ್ ಪಂಚಾಯ್ತಿಗಳಿಗೆ ಸಂಬಂಧಪಟ್ಟಂತೆ ಮೆಡಿಕಲ್ ರಿಲೀಫ್, ವ್ಯಾಕ್ಸಿನೇಷನ್ ಮುಂತಾದ ಕೆಲಸಗಳೂ ಇವೆ. ಇದಕ್ಕೆಲ್ಲಾ ದುಡ್ಡು ಬೇಕು. ಈಗ ಅದಕ್ಕೆ ಬರುತ್ತಿರುವ ದುಡ್ಡನ್ನೂ ತೆಗೆದುಕೊಂಡು ಹೋಗುತ್ತಿದ್ದೀರಿ. ಈ ಹಣವನ್ನು ತೆಗೆದುಕೊಂಡು ಹೋದಮೇಲೆ ಅದಕ್ಕೇನಾದರೂ ಬೇರೆ ವ್ಯವಸ್ಥೆ ಮಾಡಿದ್ದೀರಾ ? You will be depriving the income that was intended for the District Boards. If you interpose a third body between the Village Panchayet and the District Board, you will be creating the worst conditions and you will be crippling not only the resources of these local bodies, but you will be creating a handicap and making the village panchayet only a nominal body. You will be depriving the District Board of all its powers. ಈ ಮಧ್ಯೆ ಏರ್ಪಟ್ಟಿದ್ದ ಚಂದ್ರಶೇಖರಯ್ಯ ಕಮಿಟಿಯವರೂ ಕೂಡ ತಮ್ಮ ರಿಪೋರ್ಟಿನಲ್ಲಿ ಏಕೆ ಈ ರೀತಿ ಮಧ್ಯೆ ಒಂದು Body ಬಂತೆಂಬುದನ್ನು ಹೇಳಿದ್ದಾರೆ. 1925 ನೆಯ ಇಸವಿಯಲ್ಲಿ ವಿಲೇಜ್ ಪಂಚಾಯ್ತಿ ಆಕ್ಟ್ ಬಂದಾಗ ಅವರು ಸ್ಪಷ್ಟವಾಗಿ ಹೇಳಿದ್ದಾರೆ.

"You should not have a body which has no normal resources of revenue and which depends upon the grant of others" ಎಂದು ಅವರು ಸೂಚಿಸಿದ್ದಾರೆ.

3-30 P.M

It will act as a big obstacle. ಇದರಿಂದ ಈ ಸಂಸ್ಥೆಗಳಿಗಿರುವ ಅಧಿಕಾರ ಕೂಡ ಕಡಮೆಯಾಗುತ್ತದೆ.

It must either be a statutory body like the taluk board with independent source of revenue ಅಥವಾ ಇದನ್ನೇ ಬೇರೆಮಾಡಬೇಕು. Its existence should not be to

the prejudice of the Village Panchayet or the District Board. ಈಗಿರುವ ಕಾನ್ಸ್ಟಿಟ್ಯೂಷನ್ ಪ್ರಕಾರ every village must be a self-governing unit. ಎಷ್ಟು ಹಣ ಬಂದರೂ ಗ್ರಾಮ ಪಂಚಾಯಿತಿಗಳಿಗೆ ಕೊಡಬೇಕು.

We must encourage Village Panchayets so that Village Panchayets may become as strong as possible. There is a proposal even to entrust judicial powers and powers of collection to village panchayets. ಹಾಗಿರಬೇಕಾದರೆ ಈ ಡೆವಲಪ್‌ಮೆಂಟ್ ಬಾಡಿಗೆ ಸರ್ಕಾರಿ ಗ್ರಾಂಟು ಕೊಟ್ಟರೇನಾಗುತ್ತದೆಂದರೆ ಗ್ರಾಮ ಪಂಚಾಯ್ತಿಗೆ ಪ್ರಾಮುಖ್ಯತೆ ಹೋಗುತ್ತದೆ, ಜಿಲ್ಲಾ ಬೋರ್ಡಿನ ರೆವೆನ್ಯೂ ತೆಗೆದುಕೊಳ್ಳುತ್ತದೆ. ಇದರ ಕೆಲಸ ಅದರ ಕೆಲಸ ಎರಡೂ ನಡೆಯುವುದಿಲ್ಲ. It may be purely a Government nominee. ಮರಿಯಪ್ಪನವರಿದ್ದಾಗ ರೂರಲ್ ಡೆವಲಪ್‌ಮೆಂಟ್ ಕಮಿಟಿ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿ ಮಾಡಿದರು. ಅವು ಚೆನ್ನಾಗಿ ಕೆಲಸ ಮಾಡಿದುವೋ, ಇಲ್ಲವೋ, ಅಂತೂ ಸರ್ಕಾರ ಅವನ್ನು ವಜಾಮಾಡಿತು. ಅವು ಚೆನ್ನಾಗಿ ಕೆಲಸ ಮಾಡುತ್ತಿದ್ದರೆ. Why did you not continue them? It is because that these bodies were not working properly, you abolished them. Even between these two statutory bodies, they want to have a Government nominated body. ಅವರಿಗೆ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. They are not responsible to anybody. They are not responsible even to the Deputy Commissioners. They are only responsible to the Government to whom they owe their existence. ಸರ್ಕಾರಕ್ಕೆ ತಾವು ಜವಾಬ್ದಾರರೆಂದು ಹೇಳಿಕೊಂಡು ಅವರು ಆಡಿದ್ದೇ ಆಟ, ಹೂಡಿದ್ದೇ ಲಗ್ಗೆಯಾಗಿದೆ. ಈ ರೀತಿ ತಮ್ಮ ಪಕ್ಷದ ದೃಷ್ಟಿಯಿಂದ, ಮುಂದಿನ ಚುನಾವಣೆ ದೃಷ್ಟಿಯಿಂದ ಮಾಡುತ್ತಾರೇ ಹೊರತು ದೇಶದ ಅಭ್ಯುದಯದ ದೃಷ್ಟಿಯಿಂದ ಮಾಡುತ್ತಿಲ್ಲ. This will be most undemocratic and retrograde idea. ಗ್ರಾಮ ಪಂಚಾಯಿತಿಗಳು, ಡಿಸ್ಟ್ರಿಕ್ಟ್ ಬೋರ್ಡುಗಳು ಏಜೆನ್ಸಿಗಳು ಮಾತ್ರ. When there are two statutory bodies, two agencies, you can spend the amount through them. Do you mean to say that the District Board is incompetent to carry on the work? Is the Village Panchayet incompetent? You must tell us where is the need to have an intermediate body. ಎಲ್ಲಾದರೂ ಕಾರಣ ಕೊಟ್ಟಿದ್ದೀರಾ? ಏನು ಕೆಲಸ ಮಾಡಿದ್ದಾರೆ? ಬಾವಿ ಕೆಲಸ ಅಥವಾ ರಸ್ತೆ ಕೆಲಸ ಮಾಡಿದ್ದಾರೆಯೇ? ಏನೇನ ಕೆಲಸಗಳಿಗಾಗಿ ನೀವು ಅವರಿಗೆ ಹಣ ಕೊಡುವುದು? ರಸ್ತೆ ಕೆಲಸ, ಬಾವಿ ಕೆಲಸ. You assign them to the Panchayets or District Boards. It will simply be a superfluous body which will waste money. Please think over. It is my constructive suggestion. Don't think of setting up an intermediate body either statutory or non-statutory body between these two bodies. This is my appeal. ಹಾಗಿಲ್ಲದೆ ನಾಮಿನೇಷನ್ ಮುಂತಾದ್ದನ್ನೆಲ್ಲ ಮಾಡಿದರೆ You must change your policy or aim or it will be misunderstood. We are bound to consider that it is done with some partisan spirit to please your own party-men. When my friend asked me first whether I would speak, I said, I am sick of this District Board affair. I am rather sick of this Bill. I said I am going to give a blank cheque to the Government. ಈಗಿರುವ ಹಾಗೆ I am afraid we do not see the end of this Bill. ನಾನು ಸಲಹೆ ಮಾಡುವುದು: Let the Government not be in a hurry. Let them not be hasty. ಈಗ ಸೆಲೆಕ್ಟ್ ಕಮಿಟಿ ಮಾಡಿ. We will thrash out the Bill; we will come to some understanding in the light of difficulties as revealed by the working of the old Act. Let it be referred to the Select Committee of this House. ಎರಡು ದಿವಸ ಕೂತು ಪರಿಶೀಲಿಸೋಣ. There are 8 or 9 District Board Presidents here who have done yeomen service to the District Board. You please refer to them. Please constitute a small committee of this House. Whether to have single-member constituency or double-member constituency, whether to have direct or indirect election or whether to have an intermediate body or not; all these points could be considered in a committee. I appeal to you not to proceed in haste, but to refer it to a small committee with direction to submit their report within two or three days. Otherwise, you will be landing yourself in greater trouble. The same controversy is bound to continue.

Mr. SPEAKER.—The House will now rise and meet at 4-5 P.M.

The House adjourned for Lunch at Thirty-five Minutes past Three of the Clock and reassembled again at Five Minutes past Four of the Clock.

[MR. SPEAKER in the Chair.]

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಬಿಲ್ಲನ್ನು ಕ್ಲಾಜುವಾರಾಗಿ ವಿಮರ್ಶೆಮಾಡಿ ಕೆಲವು ಸಲಹೆಗಳನ್ನು ನೀಡುತ್ತೇನೆ. ಎರಡನೆಯ ಕ್ಲಾಜಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸು

(ಶ್ರೀ ಎಂ. ಮಾದಯ್ಯ)

ಡೆಫಿನಿಷನ್ ಕೊಟ್ಟಿದೆ. ಅದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಕಾನ್ಸ್ಟಿಟ್ಯೂಷನ್ ಆರ್ಡರಿನಲ್ಲಿರುವುದೆಲ್ಲಾ ಸೇರುತ್ತದೆ, ಪ್ರೆಸಿಡೆಂಟರು ಯಾವ್ಯಾವುದು ಸೇರಬೇಕೆಂದು ಹೇಳುತ್ತಾರೋ ಅದೆಲ್ಲಾ ಸೇರುತ್ತದೆ ಎಂದು ಹೇಳುತ್ತಾರೆ. ಆದರೆ ಹಾಗೆ ಹೇಳುವುದಕ್ಕೆ ಶಾಸನಸಭೆಗೆ ಅಧಿಕಾರವಿಲ್ಲವೆಂಬುದು ನನ್ನ ಅಭಿಪ್ರಾಯ. ಆದರೆ ರಾಜ್ಯಾಂಗದ ಪ್ರಕಾರ ಈ ಅಧಿಕಾರ ಪ್ರೆಸಿಡೆಂಟರಿಗೆ ಮಾತ್ರ ಇರುತ್ತದೆ. For the purpose of this constitution ಎಂದು ಹೇಳುತ್ತಾರೆ. ಹಾಗೆ ಹೇಳುವಾಗ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂದು ಯಾರನ್ನು ಪ್ರೆಸಿಡೆಂಟರು ಗೊತ್ತು ಮಾಡುತ್ತಾರೋ ಅವರು ಮಾತ್ರ ಆ ಪಂಗಡಕ್ಕೆ ಸೇರುತ್ತಾರೆ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಪ್ರೆಸಿಡೆಂಟರು ಯಾರಿಗೆ ಹೇಳುತ್ತಾರೋ ಅವರು ಮಾತ್ರ ಆ ಪಂಗಡದಲ್ಲಿ ಸೇರುತ್ತಾರೆ. 'For the purpose of this Constitution, ಎಂದು ಹೇಳಿದಾಗ ಪಾರ್ಲಿಮೆಂಟ್ ಮತ್ತು ರೆಜಿಸ್ಲೇಚರುಗಳಿಗೆ ಮಾತ್ರ ಅನ್ವಯಿಸುತ್ತದೆಂದು ಯಾರೂ ಅರ್ಥಮಾಡಿಕೊಳ್ಳಬಾರದು. ನಾನು ಲೀಗಲ್ ನಾಲೆಡ್ಜ್ ಹೆಚ್ಚಾಗುಳ್ಳ ಸದಸ್ಯನಲ್ಲದಿದ್ದರೂ ನನಗೆ ತಿಳಿದಮಟ್ಟಿಗೆ ಸಾಮಾನ್ಯ ಸದಸ್ಯನಾಗಿ ಹೇಳುವುದಾದರೆ ಈ ಡೆಫಿನಿಷನ್ ಈರೀತಿ ಇರುವುದು ಸರಿಹೊಂದುವುದಿಲ್ಲ. It will be illegal. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂಬುದನ್ನು ಡಿಫೈನ್‌ಮಾಡಿ ಷೆಡ್ಯೂಲ್ಡ್ ಟ್ರೈಬ್ಸ್ ಎಂಬುದಕ್ಕೆ ಪ್ರತ್ಯೇಕವಾದ ಡೆಫಿನಿಷನ್ ಕೊಟ್ಟರೆ, ರಿಸರ್ವ್ ಅವಕ್ಕೆ ತಕ್ಕಂತೆ ಮಾಡಿಯೆಂದು ಹೇಳಿದರೆ ಸರಿಯಾಗುತ್ತದೆ. ಹಾಗೆ ಹೇಳಬೇಕಾದ್ದು ಅಗತ್ಯ. 1952ನೆಯ ಇಸವಿಯ ಆಕ್ಟ್ ಮಾಡುವಾಗ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಡೆಫಿನಿಷನ್ ಕೊಡಬೇಕಾಗಿತ್ತು. ಹಾಗೆ ಮಾಡಲು ಅಡ್ಡಿ ಆತಂಕವೇನು? ಹಾಗಿಲ್ಲದೆ ಎರಡನ್ನೂ ಸೇರಿಸಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂದು ಹೇಳಿರುವುದು ರಾಜ್ಯಾಂಗಕ್ಕೆ ವಿರೋಧವಾಗಿದೆ, ಸರಿಯಲ್ಲ, ಪ್ರತ್ಯೇಕವಾಗಿ ಡೆಫಿನಿಷನ್ ಇರಬೇಕಾದ್ದು ಅಗತ್ಯ, ಇಲ್ಲದಿದ್ದರೆ ಇಲ್ಲೀಗಲ್ ಎಂದು ಹೇಳುತ್ತೇನೆ. ಹದಿನೈದನೆಯ ಆರ್ಟಿಕಲ್ಲನ್ನು ತಿದ್ದುಪಡಿ ಮಾಡಿದಾಗ ಕೊನೆಯ ಪ್ರಾವಿಸೊನಲ್ಲಿ ಹೀಗೆ ಹೇಳಿದ್ದಾರೆ:

> "Nothing in this article 29 shall prevent the State from making any special provision for the advancement of socially and educationally backward classes of citizens or for scheduled castes or for scheduled tribes"

ಹೀಗೆಂದು ಹೇಳುವಾಗ ನಮ್ಮ ಮುಂದಿರುವ ಬಿಲ್ಲಿನಲ್ಲಾಗಲಿ 1952ನೆಯ ಇಸವಿಯ ಆಕ್ಟಿನಲ್ಲಾಗಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಲ್ಲದೆ ಇನ್ಯಾರಿಗಾದರೂ ರಿಸರ್ವೇಷನ್ ಮಾಡಿದರೆ ಡಿಸ್ಕ್ರಿಮಿನೇಷನ್ ಆಗುತ್ತದೆ. ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ರಿಸರ್ವ್ ಮಾಡಲು ರಾಜ್ಯಾಂಗದ ಅನುಮತಿಯಿದೆ, ಅವರಿಗೆ ರಿಸರ್ವ್ ಮಾಡಿದರೆ ಡಿಸ್ಕ್ರಿಮಿನೇಷನ್ ಆಗುವುದಿಲ್ಲ. For the purpose of the constitution ಎಂದಿರುವುದರಿಂದ 15ನೇ ಆರ್ಟಿಕಲ್ಲಿಗನುಗುಣವಾಗಿ ರಿಸರ್ವ್ ಮಾಡಿದ್ದಾರೆ. ಆದರೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಂದರೆ ರಾಜ್ಯಾಂಗದ ಪ್ರಕಾರ ಪ್ರೆಸಿಡೆಂಟರು ಗೊತ್ತು ಮಾಡಿರುವವರಿಗೆ ಮಾತ್ರ ಅನ್ವಯಿಸುತ್ತದೆ. ಇತರರು ಆರೀತಿ ಮಾಡಿದರೆ ಇಲ್ಲೀಗಲ್ಲಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳು 'ಲಾ' ಇಲಾಖೆಯನ್ನು ಸರಿಯಾಗಿ ಕನ್‌ಸಲ್ಟ್‌ಮಾಡಿ ಮಾಡದಿದ್ದರೆ ನಾಳೆ ದಿವಸ ಷೆಡ್ಯೂಲ್ಡ್ ಟ್ರೈಬ್ಸನವರು ಚುನಾವಣೆಗೆ ನಿಂತರೆ ಕೋರ್ಟಿಗೆ ಹೋದರೆ ಆ ಉಮೇದುವಾರರು ಷೆಡ್ಯೂಲ್ಡ್ ಕ್ಯಾಸ್ಟಿನವರಲ್ಲವೆಂದು ತೀರ್ಮಾನ ಬರುತ್ತದೆ. ಈ ತೊಂದರೆಯನ್ನು ನಿವಾರಣೆ ಮಾಡಬೇಕು.

ಐದನೆಯ ಕ್ಲಾಜಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಕಾನ್ಸ್ಟಿಟ್ಯೂಯೆನ್ಸಿ ಬಗ್ಗೆ ಹೇಳಿದ್ದಾರೆ ಅದರಲ್ಲಿ

> "Not exceeding three having regard to population of each constituency"

ಎಂದು ಹೇಳಿದೆ. ಇದು ಯಾವುದನ್ನು ಮನಸ್ಸಿನಲ್ಲಿಟ್ಟು ಮಾಡಿದರೋ ಅರ್ಥವಾಗಲಿಲ್ಲ. ಇದು ಅಷ್ಟು ಸರಿಯಾಗಿಲ್ಲ. ಈಗಿರತಕ್ಕ ಆಕ್ಟಿನಲ್ಲಿ ಷೆಡ್ಯೂಲ್ ಏನಿದೆಯೋ ಅದನ್ನೇ ಇಡಬೇಕು. ಹಾಗೆ ಇಡದಿದ್ದ ಪಕ್ಷದಲ್ಲಿ ಜನಸಂಖ್ಯೆಯನ್ನು ಪ್ರತಿಚುನಾವಣಾ ಕ್ಷೇತ್ರದಲ್ಲೂ ಗಮನಿಸಿ ಅದಕ್ಕೆ ತಕ್ಕಂತೆ ಸರ್ಕಾರ ಕ್ಷೇತ್ರಗಳನ್ನು ನಿಗದಿ ಮಾಡಬಹುದು. ಉದಾಹರಣೆಗೆ ಮೈಸೂರು ಜಿಲ್ಲೆಯಲ್ಲಿ ಹತ್ತು ತಾಲ್ಲೂಕುಗಳಿವೆ. 'Not exceeding three' ಎಂದು ಹೇಳುವುದರಿಂದ ಆ ಜಿಲ್ಲೆಯಲ್ಲಿ 30 ಕ್ಕಿಂತ ಜಾಸ್ತಿ ಸದಸ್ಯರಿಗೆ ಅವಕಾಶವಾಗುವುದಿಲ್ಲ; ಪೆರಿಯಾಪಟ್ಟಣ, ಹೆಗ್ಗಡದೇವನಕೋಟೆ, ಹುಣಸೂರು ಕಡೆ ಜಾಸ್ತಿಯಾಗುವುದಿಲ್ಲ. ನಂಜನಗೂಡು ಸಬ್ ಡಿವಿಜನ್ ತಾಲ್ಲೂಕುಗಳಲ್ಲಿ ಒಂದುಲಕ್ಷ ಐವತ್ತುಸಾವಿರ ಜನಸಂಖ್ಯೆಯಿದೆ. ನಂಜನಗೂಡಿಗೆ ಮೂರು, ಹೆಗ್ಗಡದೇವನಕೋಟೆಗೆ ಮೂರು, ಹುಣಸೂರಿಗೆ ಒಂದೆರಡು ಸ್ಥಾನಗಳು ದೊರೆತರೆ ಅದೇ ಹೆಚ್ಚು, ಎಳಂದೂರಿಗೆ ಮೂರು ಸ್ಥಾನ ಕೊಟ್ಟರೆ ಬಹಳ ಕಡಮೆಯಾಗುತ್ತದೆ. ಜನಸಂಖ್ಯೆ ಜಾಸ್ತಿಯಿರುವ ತಿರುಮಕೂಡಲು ನರಸೀಪುರ, ಗುಂಡಲುಪೇಟೆಗೆ ಹೆಚ್ಚು ಅವಕಾಶ ನೀಡಿದಂತಾಗುವುದಿಲ್ಲ. ಐವತ್ತು ಸಾವಿರ ಜನಸಂಖ್ಯೆಯಿರುವ ಪೆರಿಯಾಪಟ್ಟಣಕ್ಕೂ ಒಂದೇ ಒಂದೂವರೆ ಲಕ್ಷ ಜನರಿರುವುದಕ್ಕೂ ಒಂದೇ ಮಾಡಿದರೆ ನ್ಯಾಯ ಸಲ್ಲಿಸಿದಂತಾಗುವುದಿಲ್ಲ. ಇದರಿಂದ ಕೆಲವು ಕ್ಷೇತ್ರಗಳಿಗಿರುವ ಅವಕಾಶ ತಪ್ಪಿಸಿದಂತಾಗುತ್ತದೆ, ಮ್ಯಾಗ್ಸಿಮಮ್ ನಂಬರನ್ನು ಕಡಮೆ ಮಾಡಲು ಪ್ರಯತ್ನ ಮಾಡಬಾರದು. ಹೆಚ್ಚಿನ ಸದಸ್ಯರು ಬಂದರೆ ಆಯಾ ಜಿಲ್ಲೆಯ ಪ್ರಾತಿನಿಧ್ಯವನ್ನು ಹೆಚ್ಚಿಸಲು ಅವಕಾಶ ಕೊಟ್ಟ ಹಾಗಾಗುತ್ತದೆ. ಪ್ರತಿನಿಧಿಗಳ ಸಂಖ್ಯೆ ಜಾಸ್ತಿಯಾದರೂ ಪರವಾಗಿಲ್ಲ. 'Not exceeding three' ಎಂಬುದನ್ನಾದರೂ ತೆಗೆಯಬೇಕು. ಈಗ ಪ್ರಪೋಸ್ ಮಾಡಿರುವ ತಿದ್ದುಪಡಿಯಲ್ಲಿ,

> "having regard to the population of each such constituency shall elect. . . . as the Government may determine"

ಎಂದಿದೆ, ಹಾಗಿಲ್ಲದೆ ಷೆಡ್ಯೂಲ್ ರೀಟೈನ್ ಮಾಡಿದರೆ ಸರಿಯಾಗಿರುತ್ತದೆ, ಇದು ಮುಖ್ಯವಾದ ವಾದ.

ಆರನೆಯ ಕ್ಲಾಜಿನಲ್ಲಿ 53ನೆಯ ಸೆಕ್ಷನ್‌ಗೆ ಬದಲಾಗಿ ಒಂದು ಹೊಸ ಸೆಕ್ಷನ್ ಸೇರಿಸಿದ್ದೀರಿ. ಟೌನ್ ಪ್ರದೇಶವನ್ನು ಬಿಟ್ಟು ಬಾಕಿಕಡೆ ಇರುವ ಓಟರುಗಳು ಆಯಾ ಕ್ಷೇತ್ರಗಳಲ್ಲಿ ಓಟು ಮಾಡಬೇಕೆಂದು ಗೊತ್ತುಮಾಡುವಾಗ within municipal limit ಎಂದಿರುವು

ದನ್ನು ತಿದ್ದುಪಡಿ ಮಾಡದಿದ್ದರೆ ಹೊರಗಡೆ ಇರುವವರು ಬಂದು ನಿಲ್ಲಲು ಅವಕಾಶವಾಗುತ್ತದೆ. ಅದರಿಂದ ಉದ್ದೇಶ ಸಾರ್ಥಕವಾಗುವುದಿಲ್ಲ. ಈಗ ಟರ್ಕ ಪ್ರದೇಶ ಸೇರಿಸದಿರುವುದರಿಂದ ಅಸೆಂಬ್ಲಿ ಕಾನ್ಸ್ಟಿಟ್ಯೂಯೆನ್ಸಿಯಲ್ಲಿರುವ ಟರ್ಕ ಪ್ರದೇಶದವರನ್ನು ತೆಗೆದು ಡಿಸ್ಟ್ರಿಕ್ಟ್ ಪ್ರದೇಶದಲ್ಲಿರುವ ಅಸೆಂಬ್ಲಿ ಕಾನ್ಸ್ಟಿಟ್ಯೂಯೆನ್ಸಿಯಲ್ಲಿರುವವರು ಓಟು ಮಾಡಬಹುದೆಂದು ಹೇಳಿದರೆ ಹೇಗೆ? ಆ ಕ್ಷೇತ್ರದಲ್ಲಿಲ್ಲದಿರುವವರು ಓಟು ಮಾಡಲು ಹಕ್ಕಿಲ್ಲವೆಂದು ಹೇಳಿದೆಯೆ? ಹಾಗೆ ಹೇಳದಿರುವಾಗ ಹಕ್ಕಿಲ್ಲದವರಿಗೆ ಅವಕಾಶ ಕೊಡುವುದು ನ್ಯಾಯವಲ್ಲ. ಇದನ್ನು ಸಂಬಂಧಪಟ್ಟ ಸೆಕ್ಷನಿಂದ 55ನೇ ಸೆಕ್ಷನಿಂದ ಎಕ್ಸ್‌ಕ್ಲೂಡ್ ಮಾಡಬೇಕು. 'Every person who is not less than 25 years of age inclusive of all municipal limits is eligible to stand as candidate' ಎಂದಿದೆ. ಅದರಿಂದ ಎಲ್ಲರಿಗೂ ಅವಕಾಶಕೊಟ್ಟರೆ ಉದ್ದೇಶ ಸಾರ್ಥಕವಾಗುವುದಿಲ್ಲ. ಇದನ್ನು ಸಹ ತಿದ್ದುಪಡಿ ಮಾಡಬೇಕು. ಅದನ್ನು ಯಾವರೀತಿ ಮಾಡಬೇಕೆಂದು ನೋಡಿ ಸೂಕ್ತವಾದ ಬದಲಾವಣೆ ಮಾಡಬೇಕು.

ಆಮೇಲೆ Reservation of seats ವಿಚಾರ ಇದೆ. I do not know whether the other members have suggested reservation of seats for Scheduled Castes. 52 (1)ರಲ್ಲಿ Reservation of seats for Scheduled Castes ಎಂದು ಇದೆ. ಅದರಲ್ಲಿ ಪ್ರೊವೈಸೋ (2) ರಲ್ಲಿ Provided further that this Section shall cease to have effect after ten years from the Commencement of this Act ಎಂದು ಹೇಳಿದ್ದೀರಿ. ಈ ಆಕ್ಟು ಪ್ರಾರಂಭವಾದ ಲಾಗಾಯ್ತು 10 ವರ್ಷದವರೆಗೂ ಇದು ಜಾರಿಯಲ್ಲಿ ಇರಬೇಕೆಂದು ಹೇಳಲಾಗಿದೆ. 1952|ರಿಂದಲೂ ಹೇಳುತ್ತಾ ಇದ್ದೇವೆ. ಚುನಾವಣೆಗಳು ಆಗಬೇಕೆಂದು ತಿದ್ದುಪಡಿ ಮಸೂದೆಗಳು ಬರುತ್ತಲೇ ಇವೆ. 1956ಕ್ಕೆ ಆದರೂ ಆಗುತ್ತದೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಮೊದಲನೆ ಚುನಾವಣೆ ಯಾವಾಗ ಆಗುತ್ತದೆಯೋ ಅಲ್ಲಿಂದ 10 ವರ್ಷದ ವರೆಗೂ ಇದು ಜಾರಿಯಲ್ಲಿರಬೇಕೆಂದು ಮಾಡುವುದು ಒಳ್ಳೆಯದು. ಇದನ್ನು ಸಂಬಂಧಪಟ್ಟ ಮಂತ್ರಿಗಳು ಆಲೋಚನೆ ಮಾಡಿ ಅಗತ್ಯವಾದ ತಿದ್ದುಪಡಿಯನ್ನು ತರುತ್ತಾರೆ ಎಂದು ಭಾವಿಸುತ್ತೇನೆ.

ಪ್ಲೂರಲ್ ಮೆಂಬರ್, ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ವಿಷಯದಲ್ಲಿ ಅನೇಕ ಮಾನ್ಯ ಸ್ನೇಹಿತರು ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. Single Member Constituency ಮಾಡುವ ವಿಚಾರದಲ್ಲಿ I am in favour of that. ಇದಕ್ಕೆ ಕಾರಣ ಏನೆಂದರೆ, ಒಂದು ಜಿಲ್ಲೆಗೆ Reservation of seats 5-6 ಬರುತ್ತವೆ. ಅವರು ಹೆಚ್ಚು ಕ್ಷೇತ್ರದಲ್ಲಿ ಕೆಲಸ ಮಾಡಬೇಕಾದ ಸಂಧರ್ಭ ಬರುತ್ತದೆ. ಹಣಕಾಸಿನ ದೃಷ್ಟಿಯಲ್ಲಿ ಮತ್ತು ಹಿಂದಿನ ವಯಸ್ಕರ ಮತದಾನದ ಪದ್ಧತಿಯ ಮೇಲೆ ಅಸೆಂಬ್ಲಿಗೆ ನಡೆದ ಚುನಾವಣೆಯ ಅನುಭವದ ಮೇಲೆ ನೋಡಿಕೊಂಡರೆ ಹೋಬಳಿವಾರು ಕಾನ್ಸ್ಟಿಟ್ಯೂಯನ್ಸಿ ಮಾಡಿ ಆ ಕ್ಷೇತ್ರಗಳಲ್ಲಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇಟ್ಟು, ಯಾವ ಕಾನ್ಸ್ಟಿಟ್ಯೂಯನ್ಸಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಹೆಚ್ಚು ಜನರು ಇದ್ದಾರೋ ಅಲ್ಲಿ ಒಂದು ಸೀಟು ರಿಸರ್ವ್ ಮಾಡಿದರೆ ಸಾಧುವಾದದ್ದು ಎಂದು ಕೆಲವು ಸಲಹೆಗಳು ಬಂದಿವೆ. ಆ ರೀತಿ ಮಾಡುವುದರಿಂದ ಆ ಪ್ರದೇಶದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಅನುಕೂಲವೇನೋ ಆಗುತ್ತದೆ. ಬಾಕಿ ಪ್ರದೇಶದಲ್ಲಿರತಕ್ಕವರಿಗೂ ಕೂಡ ಅಷ್ಟೇ ಸುಲಭವಾಗಿ contest ಮಾಡುವುದಕ್ಕೆ ಅವಕಾಶವಿದ್ದರೂ ಕೂಡ ಅವರು ಅದಕ್ಕೆ ಪ್ರಯತ್ನ ಪಡುವುದಿಲ್ಲ. ಕಾರಣ he is not nearer the Constituency. Entire ತಾಲ್ಲೂಕಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿದ್ದರೆ ಆ ಕ್ಷೇತ್ರದಲ್ಲಿರತಕ್ಕ ಷೆಡ್ಯೂಲ್ಡ್ ಕ್ಯಾಸ್ಟ್‌ನವರೆಲ್ಲರಿಗೂ ಅವಕಾಶವಿರುತ್ತದೆ. ಆ ದೃಷ್ಟಿಯಿಂದ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ entire District Constituency ಈಗ ತಾವು ಏನು ಪ್ರಪೋಸ್ ಮಾಡಿದ್ದೀರಿ ಅದರ ಪ್ರಕಾರ ಖರ್ಚು ಜಾಸ್ತಿ ಆದರೂ opportunities ಇವೆ. ಆ ಒಂದು ದೃಷ್ಟಿಯಿಂದ ನೋಡಿದರೆ ಎಲ್ಲರಿಗೂ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ ಎಂದು ಕಾಣುತ್ತದೆ.

ಇನ್ನೊಂದು ವಿಷಯ 'not exeeding three' ಅನ್ನುವುದನ್ನು ತಿದ್ದುಪಡಿ ಮಾಡದಿದ್ದರೆ ಖಂಡಿತ ಡಿಸ್ಕ್ರಿಮಿನೇಟ್ ಮಾಡಿದ ಹಾಗಾಗುತ್ತದೆ. ಅಸೆಂಬ್ಲಿ ಕ್ಷೇತ್ರಕ್ಕೆ ಯಾವ ಪ್ರದೇಶ ಬರುತ್ತದೆಯೋ ಅದನ್ನೇ ರೆವಿನ್ಯೂ ತಾಲ್ಲೂಕಿನಲ್ಲಿ ಸೇರಿಸಿರುವುದರಿಂದ ಆ ಒಂದು ಕ್ಷೇತ್ರದಲ್ಲಿರತಕ್ಕ ಜನರಿಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ತಿದ್ದುಪಡಿ ಮಾಡಬೇಕೆಂದು ಮತ್ತೊಂದು ಸಾರಿ ಒತ್ತಿ ಹೇಳುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸ್ವಾಮಿ, ಈ ಬಿಲ್ಲು ಬಹಳ ವಿವಾದಕ್ಕೆ ಆಸ್ಪದ ಕೊಟ್ಟಿದೆ. ಮುಂಚಿನಿಂದಲೂ ಕೂಡ ಇದೇ ವಿಧವಾಗಿ ಆಗಿದೆ. ಇದನ್ನು ನೋಡಿದರೆ ಸರ್ಕಾರದವರು ಇದನ್ನು ಯಾವುದೋ ಒಂದು ರಾಹುಕಾಲದಲ್ಲಿ ತಂದಿರುವ ಹಾಗೆ ಕಾಣುತ್ತದೆ. ಇಂದೂ ಕೂಡ ಇದು ಚರ್ಚಾಸ್ಪದವಾಗಿ ಮುಂದುವರಿಯುತ್ತಾ ಇದೆ. ಈ ಬಿಲ್ಲನ್ನು ಈ ದಿವಸ ವಿರೋಧಿಸಿದಂಥ ಮಿತ್ರರೂ ಸಹ ಕೊನೆಯಲ್ಲಿ ಯಾವ ರೀತಿಯಲ್ಲಾದರೂ ಆಗಲಿ, ಏನೇ ಲೋಪದೋಷಗಳಿದ್ದರೂ ಇರಲಿ ಈ ಬಿಲ್ಲು ಈ ದಿವಸ ಪಾಸ್ ಆಗಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಬಿಲ್ಲು ಬಹಳ ಸಮರ್ಪಕವಾಗಿದೆ ಎಂದು ನಾನು ಹೇಳುತ್ತೇನೆ. ಅನೇಕ ವರ್ಷಗಳಿಂದ ಚರ್ಚೆಯಾಗಿ ಎಲ್ಲರ ಅಭಿಪ್ರಾಯಗಳ ಒಂದು ಕಡತವಾಗಿರುವುದು ಈ ದಿವಸ ನಮ್ಮ ಮುಂದೆ ಏನಿದೆ ಅದರ ಸಾರವನ್ನೆಲ್ಲಾ ತೆಗೆದುಕೊಂಡು, ಛಟ್ಟಿ ಇಳಿಸಿ ಈ ಬಿಲ್ಲನ್ನು ಇಂದು ತಿದ್ದುಪಡಿಯ ಮಸೂದೆಯ ರೂಪದಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆ. ಆದರೂ ಕೂಡ ವಿವಾದದಲ್ಲಿ ಪ್ರಾರಂಭವಾದದ್ದರಿಂದ ಕೊನೆಯವರೆಗೂ ಬಿಡಬಾರದು ಎಂಬ ಅಭಿಪ್ರಾಯದಿಂದ ಕೆಲವರು ವಿರೋಧವನ್ನು ಮಾಡಿದ್ದಾರೆ. ಇದರಲ್ಲಿ ಮುಖ್ಯವಾದ ವಿಷಯ, ಮೊದಲನೆಯದು ಕಾನ್ಸ್ಟಿಟ್ಯೂಯೆನ್ಸಿ. ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಆಗಬೇಕೇ, ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಆಗಬೇಕೇ ಎಂಬುದು ಬಹಳ ಮುಖ್ಯವಾದದ್ದು. ಸಾಧಾರಣವಾಗಿ ನಮ್ಮ ಸ್ನೇಹಿತರು ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಮಾಡತಕ್ಕದ್ದು ಸಾಧುವಾದದ್ದು, ಇದರಿಂದ ಯೋಗ್ಯರಾದಂಥವರು, ದಕ್ಷರಾದಂಥವರು ಉಮೇದುವಾರರಾಗಿ ಚುನಾವಣೆಯಲ್ಲಿ ನಿಲ್ಲುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದ್ದಾರೆ; ಮತ್ತು

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ಅಂಥ ಯೋಗ್ಯರಾದಂಥ, ದಕ್ಷರಾದಂಥ, ಉಮೇದುವಾರರು ಜಯಶೀಲರಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳಾಗುವುದಕ್ಕೆ ಇಡೀ ತಾಲ್ಲೂಕನ್ನೇ ಒಂದು ಕ್ಷೇತ್ರವಾಗಿಟ್ಟರೆ ಅದು ಒಳ್ಳೆಯದು ಎಂಬ ಅಭಿಪ್ರಾಯವನ್ನೂ ಕೂಡ ಕೆಲವು ಸ್ನೇಹಿತರು ಹೇಳಿದ್ದಾರೆ. ಅದಕ್ಕೆ ವಿರೋಧವಾಗಿಯೂ ಕೂಡ ಕೆಲವರು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಕ್ಷೇತ್ರ ವಿಶಾಲವಾದಷ್ಟು ಮೆಂಬರುಗಳ ಸಂಖ್ಯೆ ಹೆಚ್ಚಾದಷ್ಟೂ ನಿಜವಾದ ಯೋಗ್ಯತೆ ಅಲ್ಲಿ ಬರುತ್ತದೆ, ಸಿಕ್ಕುತ್ತದೆ ಎಂದು ಹೇಳಿ ನಮ್ಮ ಅನುಭವಸಿದ್ಧಾಂತವಾಗಿದೆ.

ಓಟರುಗಳ ಸಂಖ್ಯೆ ಕಡಿಮೆ ಆದಷ್ಟೂ ಕೂಡ ಹೋಬಳಿಗಳನ್ನು ಕಾನ್ಸ್ಟಿಟ್ಯೂಯೆನ್ಸಿ ಮಾಡತಕ್ಕವಾದದಲ್ಲಿ ಸ್ವಲ್ಪ ಬೆಲೆ ಇದ್ದರೂ ನಾನು ಮೊದಲೇ ಹೇಳಿದ್ದಕ್ಕೂ ಇದಕ್ಕೂ ಹೋಲಿಕೆ ಮಾಡಿಕೊಂಡು comparative ಆಗಿ ಯಾವುದು ಉತ್ತಮವಾದದ್ದು ಇವೆರಡರಲ್ಲಿ ಎಂದು ಆಲೋಚನೆ ಮಾಡಿ ಅರಿಸಿಕೊಳ್ಳಬೇಕಾಗಿದ್ದರೆ—ಎರಡು ಸಿಸ್ಟಂನಲ್ಲಿ ಲೋಪದೋಷಗಳಿದ್ದರೂ ಕೂಡ—ಒಟ್ಟಿನಲ್ಲಿ ಮಲ್ಟಿ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಮಾಡುವುದೇ ತಾಲ್ಲೂಕಿನ ಹಿತ ದೃಷ್ಟಿಯಿಂದ ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ. ಕೆಲವರು 'ಇದರಿಂದ ಪಾರ್ಟಿ, ಪಕ್ಷ ಬೆಳೆಯುವುದಕ್ಕೆ ಅವಕಾಶವಾಗುತ್ತದೆ, ಸ್ವತಂತ್ರರಿಗೆ ಮತ್ತು ಮೈನಾರಿಟಿ ಕೋಮಿನವರಿಗೆ ತಾಲ್ಲೂಕಿನ ಕ್ಷೇತ್ರ ಎಂದರೆ ವಿಶಾಲ ಕ್ಷೇತ್ರದಿಂದ ಚುನಾಯಿತರಾಗಿ ಬರುವುದಕ್ಕೆ ಕಷ್ಟವಾಗುತ್ತದೆ' ಎಂದು ಹೇಳುತ್ತಾರೆ. ಅದನ್ನು ನಾನು ಒಪ್ಪುವುದಿಲ್ಲ. ಇವತ್ತಿನ ದಿವಸ ಮೈನಾರಿಟಿ ಕೋಮಿನವರು ಏನಾದರೂ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಅವಕಾಶವನ್ನು ಪಡೆಯಬೇಕು, ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಪ್ರಾತಿನಿಧ್ಯ ಹೊಂದಬೇಕು, ಡಿಸ್ಟ್ರಿಕ್ಟ್ ಬೋರ್ಡಿನಲ್ಲಿದ್ದು ಆ ಡಿಸ್ಟ್ರಿಕ್ಟ್, ತಾಲ್ಲೂಕಿನ ಸೇವೆ ಸಲ್ಲಿಸಬೇಕೆಂದು ಇದ್ದ ಪಕ್ಷದಲ್ಲಿ ತಾಲ್ಲೂಕನ್ನು ಕಾನ್ಸ್ಟಿಟ್ಯೂಯನ್ಸಿ ಆಗಿ ಇಟ್ಟುಕೊಂಡರೆ ಮಾತ್ರ ಅವರಿಗೆ ಅವಕಾಶವಿರುತ್ತದೆಯೇ ಹೊರತು ಹೋಬಳಿಯನ್ನು ಕಾನ್ಸ್ಟಿಟ್ಯೂಯನ್ಸಿ ಆಗಿ ಇಟ್ಟುಕೊಂಡರೆ ಅವಕಾಶ ಸಿಕ್ಕುವುದಿಲ್ಲ. ಏಕೆಂದರೆ ತಾಲ್ಲೂಕ್ ಕಾನ್ಸ್ಟಿಟ್ಯೂಯೆನ್ಸಿ ಆದರೆ 3 ಜನ ಉಮೇದುವಾರರ ಪೈಕಿ ಒಬ್ಬರು ಕಾಂಗ್ರೆಸ್ ಪಾರ್ಟಿ, ಒಬ್ಬರು ಪಿ. ಎಸ್. ಪಿ. ನವರು. ಆದರೂ ಕೂಡ—ಒಬ್ಬರಿಗಾದರೂ ಮೈನಾರಿಟಿ ಕೋಮಿನವರಿಗೆ ಓಟು ಕೊಡಬೇಕೆಂಬುದನ್ನು ಗಮನದಲ್ಲಿಟ್ಟುಕೊಳ್ಳಲೇ ಬೇಕಾಗುತ್ತದೆ, ಕೊಡಲೇಬೇಕಾಗುತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಮೈನಾರಿಟಿ ಕೋಮಿನವರು ಒಬ್ಬರಾದರೂ ಕೂಡ ಚುನಾವಣೆ ಆಗುವುದಕ್ಕೆ ಅವಕಾಶ ಸಿಕ್ಕುತ್ತದೆ. ಕ್ಷೇತ್ರ ಕಡಿಮೆಯಾಗಿ ಒಂದು ಹೋಬಳಿಗೆ ಒಂದು ಕಾನ್ಸ್ಟಿಟ್ಯೂಯನ್ಸಿ ಆದರೆ ಮೈನಾರಿಟಿ ಕೋಮಿಗೆ ಸೇರಿದಂಥಾ ಜನರು ಯಾರು ಚುನಾವಣೆಯಲ್ಲಿ ಪೈಪೋಟಿ ಮಾಡಬೇಕು, ಚುನಾವಣೆಗೆ ನಿಲ್ಲಬೇಕೆಂದು ಇರುತ್ತಾರೆಯೋ ಅವರು ಚುನಾಯಿತರಾಗಿ ಬರುವ ಸಂಭವ ಕಡಿಮೆ, ಚುನಾಯಿತರಾಗಬಹುದು ಎಂಬ ಯಾವ ಗ್ಯಾರಂಟಿಯೂ ಇಲ್ಲ. ಆದ್ದರಿಂದ ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡುವುದು ಸರಿಯಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಒಂದು ಐಕಮತ್ಯವನ್ನು ಸಾಧನೆ ಮಾಡಬೇಕಾದರೆ, ಕೋಮುವಾರು ಅಭಿಪ್ರಾಯ ಅಂತ ಮಾನ್ಯ ಮಿತ್ರರು ಹೇಳಿದರು. ಆ ಕೋಮುವಾರು ಅಭಿಪ್ರಾಯವನ್ನು ತಡೆಗಟ್ಟಬೇಕಾದರೆ, ಕೋಮುವಾರು ವಿಷಬೀಜ ತಾಲ್ಲೂಕಿನಲ್ಲಿ ಹರಡದಂತೆ ತಡೆಗಟ್ಟಬೇಕಾದರೆ ತಾಲ್ಲೂಕನ್ನೇ ಒಂದು ಕಾನ್ಸ್ಟಿಟ್ಯೂಯನ್ಸಿ ಆಗಿ ಮಾಡಿ ಚುನಾವಣೆ ನಡೆಸಿದರೆ ಆಗ ಸ್ವಲ್ಪಮಟ್ಟಿಗೆ ಅದರ ಪ್ರಭಾವ ಕಡಿಮೆಯಾಗುತ್ತದೆ ಎಂದು ನನಗೆ ಎನ್ನಿಸುತ್ತದೆ. ಹೋಬಳಿವಾರು ಆದ ಪಕ್ಷದಲ್ಲಿ ಆ ಹೋಬಳಿಯಲ್ಲಿ ಯಾವ ಕೋಮು ಹೆಚ್ಚಾಗಿರುತ್ತದೆಯೋ ಆ ಕೋಮಿನ ಉಮೇದುವಾರರು ಚುನಾವಣೆಯಾಗುತ್ತಾರೆಯೇ ಹೊರತು ಇತರರಿಗೆ ಅವಕಾಶವಿರುವುದಿಲ್ಲ. ಸಣ್ಣ ಕ್ಷೇತ್ರವಾದಷ್ಟೂ ಕೂಡ ಯಾರು ಮೆಜಾರಿಟಿ ಕೋಮಿನ ಉಮೇದುವಾರರಾಗಿರುತ್ತಾರೆಯೋ ಅವರು ಜಯಶೀಲರಾಗುವುದು ಖಂಡಿತ. ತಾಲ್ಲೂಕು ಆದರೆ ಮಿಶ್ರಕೋಮುಗಳು ಇರುವುದರಿಂದ ಅಲ್ಲಿ ಜಾತಿಯ ಪ್ರಭಾವ ಅಷ್ಟೊಂದು ಬರುವುದಿಲ್ಲ.

ಆಮೇಲೆ ಪಾರ್ಟಿ ಪ್ರಭಾವ ಎಂದು ಹೇಳಿದರು. ಪಾರ್ಟಿಗಳನ್ನು ಬೆಳೆಸುವುದರಲ್ಲಿ ತಪ್ಪೇನು ಎಂದು ಕೇಳುತ್ತೇನೆ. ಮುಂದೆ ರಾಜಕೀಯದಲ್ಲಿ ಯಾವ ಮನುಷ್ಯನೇ ಆಗಲೀ ಯಾವುದಾದರೂ ಒಂದು ಪಾರ್ಟಿಯಲ್ಲಿ ಸೇರಿಕೊಂಡು, ಆ ಪಾರ್ಟಿಯನ್ನು ಅಭಿವೃದ್ಧಿಪಡಿಸಿ ಅಲ್ಲಿ ಶಿಸ್ತಿನಿಂದ ದೇಶದ ಐಕ್ಯತೆಯನ್ನು ಸಾಧಿಸುವುದಕ್ಕೆ, ದೇಶಸೇವೆ ಸಲ್ಲಿಸುವುದಕ್ಕೆ ಪ್ರಯತ್ನಪಟ್ಟರೆ ಹೆಚ್ಚಿನ ಅವಕಾಶ ದೊರಕುತ್ತದೆಯೇ ಹೊರತು ಸ್ವತಂತ್ರರಾಗಿರತಕ್ಕವರಿಗೆ ಹೆಚ್ಚಿನ ಅವಕಾಶ ಸಿಕ್ಕುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರೆ ತಪ್ಪಾಗಲಾರದು. ನಮ್ಮ ಮಾನ್ಯ ಮಿತ್ರರು ಪ್ರಭಾವಶಾಲಿಗಳಾದ ಶ್ರೀ ಪಟ್ಟಾಭಿರಾಮನ್‌ರವರಂಥವರು ಒಬ್ಬೊಬ್ಬರು ಅವರ ಪ್ರಭಾವದಿಂದ ಸ್ವತಂತ್ರರಾಗಿ ಆದರೂ ಕೂಡ ಚುನಾಯಿತರಾಗಿ ಬರುವುದಕ್ಕೆ ಅವಕಾಶ ಇರಬಹುದು.

ಅವರಿಗೆ ನಾನು ಅಪೀಲ್ ಮಾಡಿಕೊಳ್ಳುವುದೇನೆಂದರೆ ಅವರೂ ಕೂಡ ದೇಶದ ಹಿತದೃಷ್ಟಿಯಿಂದ, ಸತ್ ಸಂಪ್ರದಾಯವನ್ನು ಬೆಳಸಿಕೊಂಡು ಬರುವ ದೃಷ್ಟಿಯಿಂದ ಯಾವುದಾದರೂ ಪಾರ್ಟಿಗಳಿಗೆ ಸೇರಿ ಅದನ್ನು ಚೆನ್ನಾಗಿ ರೂಢಿಸಿ, ಅಭಿವೃದ್ಧಿಪಡಿಸಿ ಅದರ ಮೂಲಕ ದೇಶಸೇವೆ ಮಾಡಿಕೊಂಡು ಹೋಗುವುದು ಒಳ್ಳೆಯದು ಎಂದು ತಿಳಿದುಕೊಂಡಿದ್ದೇನೆ.

ಎರಡನೆಯದಾಗಿ ಇದೇ ಸಂದರ್ಭದಲ್ಲಿ ಮಾತನಾಡುತ್ತಾ ನಮ್ಮ ಎದುರು ಪಾರ್ಟಿ ನಾಯಕರು ಮತ್ತು ಶ್ರೀ ಪಟ್ಟಾಭಿರಾಮನ್‌ರವರು 'ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯಕ್ಕೆ ಅವಕಾಶ ಇರಕೂಡದು, ಪಾರ್ಟಿ ಬೇಸಿಸ್ ಮೇಲೆ ಚುನಾವಣೆ ನಡೆಯಕೂಡದು' ಎಂದು ಹೇಳಿದರು. ಅದು ಸ್ವಾಭಾವಿಕವಾದುದಲ್ಲ, ಅಸ್ವಾಭಾವಿಕವಾದದ್ದು. ದೇಶದಲ್ಲಿ ಪಾರ್ಟಿಗಳು ಬೆಳೆಯುತ್ತಿರುವಾಗ, ರಾಜಕೀಯ ಪಾರ್ಟಿ ಬೇಸಿಸ್ ಮೇಲೆ ನಡೆಯುತ್ತಾ ಇರುವಾಗ ಇವುಗಳನ್ನೆಲ್ಲಾ ಬಿಟ್ಟುಬಿಟ್ಟು ಇನ್ನೊಂದು ವಿಧದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಚುನಾವಣೆ ನಡೆಸಿ ಎನ್ನುವುದು ಸಾಧುವಾದುದಲ್ಲ. ಇಂಗ್ಲೆಂಡಿನಲ್ಲೂ ಕೂಡ ಕೌಂಟೀ ಕೌನ್ಸಿಲ್‌ಗಳಿಗೆ ಚುನಾವಣೆ ನಡೆಸುವಾಗ, ಲೇಬರ್ ಪಾರ್ಟಿ, ಕನ್ಸರ್ವೇಟೀವ್ ಪಾರ್ಟಿ ಮುಂತಾದ ಪಾರ್ಟಿಯವರು ಪಾರ್ಟಿ ಟಿಕೆಟ್ ಮೇಲೆ ಚುನಾವಣೆಗೆ ನಿಲ್ಲುತ್ತಾರೆ.

Sri Mulka GOVINDA REDDY.—In the last Municipal Elections in Mysore State, elections were not contested on party basis.

Sri T. MARIAPPA.—In Bangalore City and Mysore City?

Sri Mulka GOVINDA REDDY.—Except those.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಜನರಲ್ ಎಲೆಕ್ಷನ್ ನಡೆಯುವಾಗಲೂ ಕೂಡ ಪಾರ್ಟಿ ಟಿಕೆಟ್ ಮೇಲೆ ನಿಲ್ಲುತ್ತಾರೆ. ಯಾವ ಪಾರ್ಟಿ ಸರ್ಕಾರ ಬರುತ್ತದೆ ಎಂಬುದನ್ನು ಕೂಡ ಕೌಂಟಿ ಕೌನ್ಸಿಲ್ ಚುನಾವಣೆ ಆದಾಗಲೇ ಊಹಿಸಿಕೊಳ್ಳಬಹುದು. ನಮ್ಮ ಮೈಸೂರು ಸಂಸ್ಥಾನದಲ್ಲೂ ಕೂಡ ನಮ್ಮ ಪಾರ್ಟಿ ಬಲಾಬಲಗಳನ್ನು ತಿಳಿದುಕೊಳ್ಳಬೇಕಾದರೆ ಪಾರ್ಟಿಗಳಲ್ಲಿರತಕ್ಕ ಜನಗಳು, ಅವರ ಸಂಪರ್ಕ ಜನಗಳಲ್ಲಿ ಹೇಗಿದೆ ಎಂಬುದರಮೇಲೆ ಹೋಗುತ್ತದೆ; ಮತ್ತು ಯಾವ್ಯಾವ ಪಾರ್ಟಿ, ಯಾವ್ಯಾವರೀತಿ ಸೇವೆ ಸಲ್ಲಿಸಿದೆ ಎಂಬ ಅಳತೆಯ ಕೋಲಿನಿಂದ ಅಂದಾಜುಮಾಡಿ ತಿಳಿದುಕೊಳ್ಳಬೇಕಾಗುತ್ತದೆ. ಪಾರ್ಟಿ ಬೇಸಿಸ್ ಮೇಲೆ ಚುನಾವಣೆ ನಡೆಸಿ, ಪಾರ್ಟಿ ಪ್ರಭಾವ ಬೆಳೆಸಿಕೊಂಡು ಸ್ವಾರ್ಥ ಸಾಧಿಸಿಕೊಳ್ಳಬೇಕೆಂದು ಇಲ್ಲ. ಆ ತರಹ ಊಹಾಪೋಹಗಳಿಗೆ ಆಧಾರವೇ ಇಲ್ಲ. ಸರ್ಕಾರದವರು ಇವತ್ತಿನ ದಿವಸ ನೇರವಾದ ಚುನಾವಣೆ ಇರಬೇಕೆಂದು ಈ ಬಿಲ್ಲನ್ನು ತಂದಿರಬೇಕಾದರೆ ಈ ಸಭೆಯ ಸದಸ್ಯರು ಸ್ವಲ್ಪ ಹೆಚ್ಚು ಕಮ್ಮಿ ಬಹುಜನ ಸದಸ್ಯರ ಅಭಿಪ್ರಾಯದಂತೆಯೇ ತಂದಿದ್ದಾರೆ. ಮತ್ತು ಹೊರಗಡೆ ದೇಶದಲ್ಲೂ ಕೂಡ ಜನಗಳ ಅಭಿಪ್ರಾಯ ಹೇಗಿದೆ ಎಂಬುದನ್ನು ತಿಳಿದುಕೊಂಡೇ ಈ ನೇರವಾದ ಚುನಾವಣಾತತ್ವವನ್ನು ಸರ್ಕಾರದವರು ಅಂಗೀಕರಿಸಬೇಕಾಗಿ ಬಂತು. ಸ್ವಾಮಿ, ಹೀಗೆ ಮಾಡಿದರೆ ಇದರಿಂದ ಪ್ರತಿಯೊಂದು ಪಾರ್ಟಿಗೂ ಅನುಕೂಲವಾಗುತ್ತದೆ. ಹೀಗೆ ವಿಲೀನೀಕರಣಮಾಡಿದರೆ ಅನುಕೂಲ ಹೆಚ್ಚಾಗುತ್ತದೆ. ಆದರೆ ನಮ್ಮ ಶ್ರೀ ಕೆ. ಪಟ್ಟಾಭಿರಾಮರ್‌ರವರು ಅವರು ಯಾವಾಗ್ಲೂ ಆದರ್ಶವಾದಿಗಳು. ಅವರ ಆದರ್ಶ . . . .

4-30 P.M.

ಶ್ರೀ ಕೆ. ಪಟ್ಟಾಭಿರಾಮರ್ (ಕೋಲಾರ).—ನನಗೆ ಈ ದಿವಸ ತಮ್ಮಿಂದ ಪಾಠ ಕಲಿಯುವಂಥ ಕಾಲ ಬಂತಲ್ಲ!

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆದರೆ ಆ ಆದರ್ಶತ್ವದ ಪ್ರಕಾರ ನಾವು ಈ ದಿವಸ ಹೋದರೆ ಬಹಳ ಅವ್ಯವಸ್ಥೆಗಳಾಗುತ್ತವೆ. ಈ ಚುನಾವಣೆಗಳ ಬಗ್ಗೆ ವ್ಯಾಜ್ಯ ವ್ಯವಹಾರಗಳು ಮೊದಲಿಂದಲೂ ಇದ್ದೇ ಇವೆ. ನಾನು ಇದನ್ನೆಲ್ಲಾ ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಅವರು ಈ ಗ್ರಾಮಪಂಚಾಯಿತಿಗಳಿಗೂ, ತಾಲ್ಲೂಕು ಬೋರ್ಡುಗಳಿಗೂ ಮತ್ತು ಜಿಲ್ಲಾ ಬೋರ್ಡುಗಳಿಗೂ ಒಂದು ಸಂಪರ್ಕವಿರಲೇಬೇಕೆಂದು ಹೇಳುತ್ತಿದ್ದರು. ಇದರಲ್ಲೇನೋ ಒಂದು ಆದರ್ಶತ್ವವಿದೆ. ಆದರೆ ಪ್ರಕೃತ ಸಂದರ್ಭಕ್ಕೆ ಅದು ಸರಿಹೋಗುವುದಿಲ್ಲ. ಇದಕ್ಕೆ ಒಂದು ವಿನಾಯಿತಿಯನ್ನು ಅನುಸರಿಸಬೇಕಾಗಿದೆ. ಹಾಗೆ ಮಾಡದಿದ್ದರೆ ಇದು ಸಾಧ್ಯವೇ ಆಗುವುದಿಲ್ಲ. ಹೀಗೆ ನಾವು ಈ ದಿವಸ ಇದನ್ನು ಬದಲಾವಣೆ ಮಾಡದೆ ಹೋದರೆ ಮುಂದೆ ಅನೇಕ ರೀತಿಯ ಅನ್ಯಾಯಗಳು ನಡೆಯಲು ಇದು ಅವಕಾಶವನ್ನುಂಟು ಮಾಡುತ್ತದೆ ಅನ್ನುವುದು ನಮಗೆ ಕಂಡುಬಂದಿದೆ. ತತ್ವಗಳನ್ನು ಪ್ರತಿಪಾದಿಸಲೇಬೇಕು. ಈ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಇಣ್ಡೈರೆಕ್ಟ್ ಚುನಾವಣೆಗಳು ನಡೆದಾಗ ಅನೇಕ ನಿದರ್ಶನಗಳು ನನ್ನ ಮಿತ್ರರಿಗೂ ಮತ್ತು ನನಗೂ ಪ್ರತ್ಯಕ್ಷವಾಗಿ ಗೊತ್ತಾಗಿವೆ. ಇನ್ನು ಕೋರ್ಟುಗಳ ವ್ಯವಹಾರ ತೆಗೆದುಕೊಂಡರೆ ಅದರ ಮಹತ್ವವೆಂಥಾದ್ದು ಎನ್ನುವುದು ಇಡೀ ಸಂಸ್ಥಾನಕ್ಕೆಲ್ಲಾ ಗೊತ್ತಾಗಿದೆ. ನಾನು ನನ್ನ ಸ್ವಂತ ಜಿಲ್ಲೆಯಲ್ಲಿ ಪಡೆದುಕೊಂಡಿರುವಂಥ ಅನುಭವದ ಮೇಲೆ ಇದನ್ನು ಹೇಳುತ್ತಿದ್ದೇನೆ. ಆದರೆ ಈ ಇಣ್ಡೈರೆಕ್ಟ್ ಎಲೆಕ್ಷನ್‌ಗಳು ಎಷ್ಟೇ ಸತ್ಯವಾಗಿ ನಡೆಯುತ್ತವೆಂದು ಹೇಳಿದರೂ ಅವುಗಳನ್ನು ಯೋಗ್ಯವಾದ ರೀತಿಯಲ್ಲಿ ನಡೆಸುವುದು ಬಹಳ ಕಷ್ಟವಿದೆ. ನಾವು ಈ ವಿಚಾರದಲ್ಲಿ ಎಷ್ಟೋ ನೋಡಿದ್ದೇವೆ; ಕೇಳಿಯೂ ಇದ್ದೇವೆ. ನಮ್ಮ ಜಿಲ್ಲೆಯಲ್ಲೇ ಈ ಬಗ್ಗೆ ಏನೇನು ನಡೆಯಿತು ಎನ್ನುವುದನ್ನೆಲ್ಲಾ ನಾನು ಕಿವಿಯಾರ ಕೇಳಿದ್ದೇನೆ. ಈ ನಾನಾ ಕಾರಣಗಳಿಂದ ನಾವೀಗ ಡೈರೆಕ್ಟ್ ಎಲೆಕ್ಷನ್ ಬಹಳ ಸಾಧುವಾದ್ದು ಮತ್ತು ಸತ್ಯವಾದುದು ಎಂದು ಹೇಳುತ್ತೇನೆ. ಇನ್ನು ಈ ವಿಚಾರದಲ್ಲಿ ನನ್ನ ಸ್ನೇಹಿತರು ಹೇಳಿರತಕ್ಕಂಥ ಅಂಶ ನೇರವಾಗಿ ಸಂಬಂಧಪಡದೇ ಇದ್ದರೂ ರೆಸಿಡೆನ್ಷಿಯಲ್ ತೊಂದರೆ ಇಲ್ಲವಾದರೂ ಎಂದಿನಂತೆ ಟೌನುಗಳಲ್ಲಿ ಅಡ್ವೋಕೇಟುಗಳು ಚುನಾವಣೆಗೆ ನಿಲ್ಲುತ್ತಿದ್ದಂತೆ ಇನ್ನು ಮುಂದೆ ಹಳ್ಳಿಹಳ್ಳಿಗೆ ಹೋಗಿ ಚುನಾವಣೆಗೆ ನಿಂತು ಆರಿಸಿ ಬರತಕ್ಕಂಥ ಕಾಲ ಹೋಯಿತು. ಈಗ ಬೆಂಗಳೂರಿನಲ್ಲಿರತಕ್ಕಂಥ ಒಬ್ಬ ಲಾಯರು ಜನರಲ್ಲಿ ನೇರವಾದಂಥ ಸಂಪರ್ಕವನ್ನು ಇಟ್ಟುಕೊಳ್ಳದೆ ಹೋದರೆ ಸುಮ್ಮನೆ ವಿದ್ಯಾವಂತರೆಂದು ಹೇಳಿ ಅವರಿಗೆ ಯಾರೂ ಓಟು ಕೊಡುವುದಿಲ್ಲ. ಹೀಗಿರುವುದರಿಂದ ಇನ್ನು ಮುಂದಕ್ಕೆ ಟೌನಿನಲ್ಲಿ ವಾಸಮಾಡತಕ್ಕಂಥ ಜನಗಳು ಯಾರೂ ಹಳ್ಳಿಗಳಿಗೆ ಹೋಗಿ ಚುನಾವಣೆಗೆ ನಿಂತು ಗೆಲ್ಲುವುದಕ್ಕೆ ಅವಕಾಶವೇ ಇಲ್ಲ. ಆದುದರಿಂದ ನಾವೀಗ ಇದನ್ನು ಅಮೆಂಡ್ ಮಾಡಬೇಕಾದ ಗೋಜಿಗೇ ಹೋಗಬೇಕಾಗಿಲ್ಲ. ಜನರ ಸೇವೆಯನ್ನು ಯಾರು ಸರಿಯಾಗಿ ಸಲ್ಲಿಸಬಲ್ಲರೋ ಯಾರು ಅಂಥ ಯೋಗ್ಯರಾಗಿರುತ್ತಾರೋ, ಯಾರು ಅಷ್ಟು ಸಂಪನ್ನರಾಗಿರುತ್ತಾರೋ ಅಂಥವರಿಗೇನೆ ಇದರಲ್ಲಿ ಅವಕಾಶವಿರುವುದು. ಹೇಗೆ ಯಾರ್ಯಾರ ಹಿನ್ನೆಲೆ ಏನೇನಿರುತ್ತದೆಯೋ ಅದಕ್ಕಾನುಸಾರವಾಗಿ ಚುನಾವಣೆಗಳ ಫಲಿತಾಂಶ ಉಂಟಾಗುವುದರಿಂದ ಅವರು ಚುನಾವಣೆಗೆ ನಿಲ್ಲುವಂಥ ಅವಕಾಶವನ್ನು ನಾವೀಗ ತಪ್ಪಿಸಬಾರದು. ಹೀಗೆ ಮಾಡುವುದು ಸರಿಯಾದ್ದಲ್ಲ. ಈಗ ಈ ಬಿಲ್ಲನಲ್ಲಿರುವುದೇ ಸಮರ್ಪಕವಾಗಿದೆ. ಆದರೆ ಕೆಲವರಿಗೆ ಕೆಲಕೆಲವು ಭಿನ್ನಾಭಿಪ್ರಾಯಗಳಿರುತ್ತವೆ. ಈ ಎರಡು ವಿಧಾನಗಳಲ್ಲಿಯೂ ಎಡರು ತೊಡರುಗಳಿರುವುದು ಎಲ್ಲರಿಗೂ ಗೊತ್ತಿದೆ. ಶ್ರೀ ವಿ. ವೆಂಕಟಪ್ಪನವರು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಆದರೆ ಸಿಂಗಲ್ ಮೆಂಬರ್ಸ್ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಕೆಲವು ವಿಧವಾದ ಅನುಕೂಲತೆಗಳಿರುವಂತೆ ಕಂಡುಬಂದರೆ ಅದರಲ್ಲಿ ಎರಡು ವಿಧವಾದ ಸಮಸ್ಯೆಗಳು ಉಂಟಾಗುತ್ತವೆ. ಮಲ್ಟಿ ಮೆಂಬರ್ಸ್ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿಯೂ ಅನುಕೂಲತೆಗಳಿರುತ್ತವೆ. ಈ ಎರಡರ ಪೈಕಿ ಯಾವುದು ಉತ್ತಮವಾದ್ದೋ ಅದನ್ನು ಆರಿಸಿಕೊಳ್ಳಬಹುದು ಎಂದು ಹೇಳಿದರು. ಅದನ್ನು ಒಪ್ಪಿಕೊಳ್ಳೋಣ. ಆದರೆ, ಅವರು ಶೇಕಡ 6 1/4 ಭಾಗದ ಆದಾಯವನ್ನು ಈ ಬಿಲ್ಲಿನಿಂದ ಡಿಲೀಟ್ ಮಾಡಿರತಕ್ಕ ವಿಷಯವನ್ನು ಪ್ರಸ್ತಾಪಮಾಡುತ್ತ ಹಾಗೆ ಒಂದಾವರ್ತಿ ಕಾನೂನು ಚೌಕಟ್ಟಿನಲ್ಲಿ ಒದಗಿಸಿರತಕ್ಕಂಥ ಹಣವನ್ನು ಪುನಃ ಕಿತ್ತುಕೊಳ್ಳುವುದು ಸರಿಯಾದ್ದಲ್ಲ ಎಂದು ಹೇಳಿದ್ದಾರೆ. ಆ ಪ್ಲಾನಿಂಗ್ ಸಮಿತಿಯವರು ಕೂಡ ತಾಲ್ಲೂಕು ಸಮಿತಿಗಳಿರಲೇಬೇಕೆಂದು ಹೇಳಿದ್ದಾರೆ. ಇದರಲ್ಲಿ ನಾಮಿನೇಟ್ ಸಮಿತಿ ಇರುವುದೂ

(ಶ್ರೀ ಜಿ. ಎ. ತಿಮ್ಮಪ್ಪಗೌಡ.)
ಸಹ ಅವಶ್ಯಕ. ತಾಲ್ಲೂಕು ಲೆವಲ್‌ನಲ್ಲಿ ಒಂದು ಸಮಿತಿ ಇರಲೇಬೇಕೆಂದು ಪ್ಲಾನಿಂಗ್ ಸಮಿತಿಯವರೂ ಹೇಳಿದ್ದಾರೆ. ಆದರೆ ಇನ್ನುಮುಂದಕ್ಕೆ ತಾಲ್ಲೂಕು ಬೋರ್ಡುಗಳಿಗೆ ಹಣವನ್ನು ಹಂಚುವಾಗ ಜಿಲ್ಲಾ ಬೋರ್ಡುಗಳಿಗೆ ಬಹಳ ಖರ್ಚುವೆಚ್ಚಗಳು ಕಡಮೆಯಾಗ ಬಹುದು. ಈಗ ಕೆಲವು ಕಡೆ ಜಿಲ್ಲಾ ಬೋರ್ಡು ಗಳು ತಮ್ಮ ಕೆಲಸವನ್ನು ತಾವು ನೆರವೇರಿಸಲು ಸಾಧ್ಯ ವಾಗದೆ ಹೋದುದರಿಂದ ಜಿಲ್ಲಾ ಬೋರ್ಡಿಗೆ ಸೇರಿದ್ದಂಥ 2 1/2 ಸಾವಿರ ಮೈಲಿ ರಸ್ತೆಯನ್ನು ಸರ್ಕಾರ ತನ್ನ ಕಡೆಗೆ ವಹಿಸಿಕೊಂಡಿದೆ. ಇತ್ತೀಚೆಗೆ ಜಿಲ್ಲಾ ಬೋರ್ಡುಗಳವರೂ ಕೂಡ ಎಲ್ಲೆಲ್ಲಿ ರಸ್ತೆಗಳ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿ ಲ್ಲವೋ ಅವುಗಳನ್ನೆಲ್ಲಾ ಸರ್ಕಾರದವರೇ ವಹಿಸಿ ಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಅದೇರೀತಿ ಈಗ ಜಿಲ್ಲಾ ಬೋರ್ಡುಗಳವರೂ ಮತ್ತು ಮುನಿಸಿ ಪಾಲಿಟಿಯವರೂ ಪ್ರಾರಂಭಿಸಿರುವಂಥ ಅನೇಕ ಹೈಸ್ಕೂಲುಗಳನ್ನು ಸರ್ಕಾರದವರೇ ವಹಿಸಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಈ ದಿವಸ ಈ ಇನ್‌ಸ್ಟಿಟ್ಯೂಷನ್ ಗಳನ್ನು ನಡೆಸಲು ಅವರಲ್ಲಿ ಹಣವಿಲ್ಲ. ಆದಕಾರಣ ಇವುಗಳನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳಲಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಯಾವ ಡಿಸ್ಟ್ರಿಕ್ಟ್ ಬೋರ್ಡು ಹೈಸ್ಕೂಲಿನವರು ಆ ರೀತಿ ಕೇಳಿದ್ದಾರೆ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇತ್ತೀಚೆಗಂತೂ S.S.L.C. ಪರೀಕ್ಷೆಗಳ ಫಲಿತಾಂಶವನ್ನು ತಾವುಗಳು ನೋಡುವುದಾದರೆ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲು ಗಳಲ್ಲಿ ಓದತಕ್ಕಂಥ ವಿದ್ಯಾರ್ಥಿಗಳ ದಕ್ಷತೆಯು ಕಡಿಮೆ ಯಾಗುತ್ತಾ ಬರುತ್ತಿದೆ. . . . ವಾದ ನಿಮಗೇ

ಶ್ರೀ ವಿ. ವೆಂಕಟಪ್ಪ.—ನಿಮ್ಮ ವಿರೋಧವಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹೀಗೆ ಅವರ ವಿದ್ಯಾಮಟ್ಟ ಕಡಿಮೆಯಾಗುತ್ತಿರುವುದರಿಂದ ಸಾರ್ವ ಜನಿಕರ ಅಭಿಪ್ರಾಯದ ಪ್ರಕಾರ ಈ ಪಾಠಶಾಲೆಗಳ ನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳುವುದು ಸೂಕ್ತ ಎಂದು ಹೇಳುತ್ತೇನೆ. ಇವುಗಳನ್ನು ಸರ್ಕಾರ ತೆಗೆದು ಕೊಂಡರೆ ಇನ್ನುಳಿದ ಕೆಲಸಗಳನ್ನು ಅವರು ಅವರಿಗಿರ ತಕ್ಕಂಥ ಹಣಕಾಸಿನ ವರಮಾನದ ಮೇಲೆ ನಡೆಸಿ ಕೊಂಡು ಹೋಗಲು ಸಾಧ್ಯವಾಗುತ್ತದೆಂದು ಹೇಳು ತ್ತೇನೆ. ಈ ಎಲ್ಲಾ ಕಾರಣಗಳಿಂದ ಈ ಬಿಲ್ಲು ಸೆಲೆಕ್ಟ್ ಸಮಿತಿಯವರ ಪರಿಶೀಲನೆಗೆ ಹೋಗತಕ್ಕದ್ದು ಅನಾವಶ್ಯಕವೆಂದು ಹೇಳುತ್ತೇನೆ, ಆದರೆ ಈ ಬಿಲ್ಲು ಯಾವುದೋ ರಾಹುಕಾಲದಲ್ಲಿ ಹುಟ್ಟಿರುವಂತೆ ಕಾಣು ತ್ತಿದೆ. ಈ ಬಿಲ್ಲಿನ ಬಗ್ಗೆ ಎಲ್ಲರೂ ಬಹಳ ತವಕ ಪಡುತ್ತಿ ದ್ದಾರೆ. ಆದುದರಿಂದ ಇದನ್ನು ಈ ಅಧಿವೇಶನದಲ್ಲಿ ಪಾಸ್ ಮಾಡಬೇಕಾಗಿದೆ. ಎದುರು ಪಕ್ಷದ ನಾಯ ಕರೂ ಸಹ ಇದನ್ನೇ ಹೇಳಿದ್ದಾರೆ. ಆದುದರಿಂದ ಇದನ್ನು ಈಗಲೇ ಪಾಸ್ ಮಾಡಿಸಬೇಕೆಂದು ಹೇಳುತ್ತೇನೆ.

Mr. SPEAKER.—I want to consult the Leader of the Opposition, whether as agreed to yesterday by the House we could complete the Bill today.

Sri J. MOHAMED IMAM.—What about the suggestion made by me and also several other members that this Bill may be referred to a small Committee to come to a unanimous understanding? It is only a question of giving two days' more time and I think that is acceptable.

Sri Kadidal MANJAPPA.—We have thought over the matter for nearly 2½ years. There is nothing to be thought over afresh. I think we can finish the consideration stage. If there is not sufficient time, we can postpone the consideration of the clauses to next time. Meanwhile we can have an informal talk.

Sri J. MOHAMED IMAM.—We have moved certain amendments to this Bill. If the Minister is not agreeable to refer this Bill to a Committee, Select Committee or a Special Committee, then we would like to move the amendments. Necessarily, we want some time because we have to concentrate on specific issues there. So, that would involve some time. If the Minister accepts the formation of a Committee I have no objection to close the discussions now alone and the amendments also may be referred to that Committee.

Mr. SPEAKER.—That would be better. That would be healthier and the Hon'ble Members may come to some agreement. Suppose it is referred to a Select Committee, then there may be a dissenting minute and all that. As the Hon'ble Leader of the Opposition put it, if the House is agreeable, we may adopt that suggestion since the House is also very desirous of passing this Bill as early as passible.

Sri J. MOHAMED IMAM.—I have no objection.

Mr. SPEAKER.—So, we shall close it at 5-30 p. m.

Sri J. MOHAMED IMAM.—What about amendments?

Mr. SPEAKER.—As the Hon'ble Minister put it, we shall refer them to a Committee, not to a Select Committee.

Sri Kadidal MANJAPPA.—I suggested that we may discuss these amendments informally and then the consideration of the clauses may be taken up tomorrow.

*ಶ್ರೀ ಎಂ. ಚಿಕ್ಕಲಿಂಗಯ್ಯ.—ಸ್ವಾಮಿ, ಈಗ ಮಾನ್ಯ ಸಭೆಯ ಮುಂದೆ ಚರ್ಚೆಯಾಗುತ್ತಿರುವ ಬಿಲ್ಲಿನ ವಿಚಾರದಲ್ಲಿ ಈವರೆಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರತಕ್ಕ ಸದಸ್ಯರ ಪೈಕಿ ಒಬ್ಬೊಬ್ಬರ ಅಭಿಪ್ರಾಯಗಳಲ್ಲಿ ಸ್ವಲ್ಪ ವ್ಯತ್ಯಾಸವಿರುವಂತೆ ಕಂಡುಬಂದಾಗ್ಯೂ ಇನ್ನುಳಿದ ಮಾನ್ಯ ಸದಸ್ಯರ ಅಭಿಪ್ರಾಯಗಳೆಲ್ಲಾ ಒಬ್ಬೊಬ್ಬರದು ಒಂದೊಂದು ರೀತಿಯಾಗಿದೆ. ಆದುದರಿಂದ ಈ ಮಸೂದೆ ರಾಹುಕಾಲಕ್ಕೂ-ಗುಳಿಕ ಕಾಲಕ್ಕೂ ಮಧ್ಯೆ ಗಜಲಗ್ನದಲ್ಲಿ ಹುಟ್ಟಿರಬೇಕೆಂದು ತೋರುತ್ತದೆ. ಈ ಬಿಲ್ಲಿಗಾಗಿ ಶ್ರಮಿಸುತ್ತಿರುವುದನ್ನು ನೋಡಿದರೆ ಬೆಟ್ಟ ಬಗೆದು ಇಲಿ ಹಿಡಿದಂತೆ ಆಗಿದೆ. ಆದರೆ ಇಲ್ಲಿಯವರೆಗೂ ಆದುದ್ದೆಲ್ಲಾ ಆಯಿತು. ಈಗಲಾದರೂ ಈ ಮಸೂದೆಯನ್ನು ಈ ಸಾಲಿನಲ್ಲೇ ಪರಿಪೂರ್ಣ ಮಾಡಲು ನಾವು ಮುಖ್ಯವಾಗಿ ಸಮಾಲೋಚನೆ ಮಾಡಬೇಕಾದ ವಿಚಾರಗಳೇನಿರುತ್ತವೆಯೋ ಅವುಗಳ ಬಗ್ಗೆ ನಾನೀಗ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಸರ್ಕಾರದವರೇ ಈ ಬಿಲ್ಲನ್ನು ತರಲು ಬಹಳ ನಿಧಾನವಾಯಿತು ಎಂದು ಹೇಳಿದ್ದಾರೆ. ಹೀಗೆ ಪೆಂಡಿಂಗ್‌ನಲ್ಲಿ ಈ ಬಿಲ್ಲು ಮೂರು ವರ್ಷಗಳ ಕಾಲ ಇರಬೇಕಾಗಿರಲಿಲ್ಲ. ಇದು ಹುಟ್ಟುವ ಕಾಲದಲ್ಲೇ ರೋಗಗ್ರಸ್ತವಾಗಿದ್ದುದರಿಂದಲೂ ಮತ್ತು ಈ ಮಧ್ಯೆ ಇದರಲ್ಲಿ ಪಾರ್ಟಿ ಹಿತದೃಷ್ಟಿ ಸೇರಿಕೊಂಡಿದ್ದರಿಂದಲೂ ಮತ್ತು ಇದರ ಬಗ್ಗೆ ಒಂದೊಂದು ಸ್ಟೇಜಿನಲ್ಲೂ ಒಂದೊಂದು ಹೊಸ ಅಭಿಪ್ರಾಯವನ್ನು ಜೋಡಿಸಿದ್ದರಿಂದ ಈ ಬಿಲ್ಲು ಹೀಗೆ ಸ್ಟೇಜ್ ಬೈ ಸ್ಟೇಜ್ ನಿಧಾನವಾಗಲು ಕಾರಣವಾಗಿರುತ್ತದೆ. ನಾನು ಕಳೆದ ಸಾಲಿನಲ್ಲೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಆದರೆ ತಾವು ಹೀಗೆಲ್ಲಾ ಮಾಡುತ್ತಾ ಹೋದರೆ ದೇಶದಲ್ಲಿ ಜನಗಳು ಕಾಂಗ್ರೆಸ್ ಸಂಸ್ಥೆಯ ಬಗ್ಗೆ ಏನೊಂದು ಅಭಿಪ್ರಾಯವನ್ನಿಟ್ಟುಕೊಂಡಿದ್ದರೋ ಅದಕ್ಕೆ ನಾಳೆ ಒಳ್ಳೆಯ ಪರಿಣಾಮವಿರಲಾರದು.

ಶ್ರೀ ಕಡಿದಾಳ್ ಮಂಜಪ್ಪ.—ಜನರು ಯಾವಾಗ್ಗೂ ಈ ಸಂಸ್ಥೆ ವಿಚಾರದಲ್ಲಿ ಒಳ್ಳೆಯ ಅಭಿಪ್ರಾಯವನ್ನೇ ಇಟ್ಟುಕೊಂಡಿರುತ್ತಾರೆ. ಅದಕ್ಕೆ ಯಾವ ಸಂಶಯವೂ ಇಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಏನೇ ಆಗಲಿ ಇದಕ್ಕೆ ಹೀಗೆ ನಿಧಾನ ಮಾಡಬಾರದು ಎಂಬುದೇ ನನ್ನ ಮುಖ್ಯಾಭಿಪ್ರಾಯ.

ಎರಡನೆಯದಾಗಿ ಈ direct ಮತ್ತು indirect elections ಮಾಡಬೇಕೆನ್ನುವ ವಿಚಾರದಲ್ಲಿ ಅನೇಕ ಚರ್ಚೆಗಳು ಆಗಿ ಈ ವಿಚಾರದಲ್ಲಿ ಶ್ರೀ ವಿ. ವೆಂಕಟಪ್ಪನವರ ಸಮಿತಿಯವರ ವರದಿಯನ್ನು ನಾವು ಒಪ್ಪಿಕೊಂಡಿದ್ದೆವು. ಅದರ ತತ್ವವನ್ನು ಒಪ್ಪಿಕೊಂಡಿದ್ದೆವು. ಆದರೆ ಕಳೆದ ಸಾಲಿನಲ್ಲಿ ಅದರಲ್ಲಿ ಬದಲಾವಣೆ ಮಾಡಿ ಬೇರೆ ತಂದದ್ದಕ್ಕಾಗಿ ಆ ತತ್ವದಮೇಲೆ ನಾವು ಸಭಾತ್ಯಾಗ ಮಾಡಿರುವುದು ಕೂಡ ಸರ್ಕಾರದ ಗಮನಕ್ಕೆ ಬಂದಿದೆ, ಜನಗಳಿಗೂ ಸಹ ಗೊತ್ತಾಗಿದೆ.

ಅನಂತರ ಈ direct elections ಈಗಿನ ತತ್ವಕ್ಕೆ ಒಪ್ಪುವುದಾದರೂ ಕೂಡ ನನಗೆ ಇದರಲ್ಲಿ ಒಂದು ಶಂಕೆ ಇದೆ. ಅದೇನೆಂದರೆ ಈಗ Multi-member Constituency ಮಾಡಿಕೊಂಡು direct election ಮಾಡಬೇಕು ಎಂದು ನಿಗದಿ ಮಾಡಿದ್ದಾರೆ. ಆದರೆ ಟ್ರೆಷರಿ ಬೆಂಚಿನ ಅನೇಕ ಮಾನ್ಯ ಸದಸ್ಯರು ಮತ್ತು ಗಣ್ಯ ವ್ಯಕ್ತಿಗಳು ಕೂಡ Single-member Constituency ಆಗಬೇಕು. ಅದರಲ್ಲಿ reservation ಮಾಡಬೇಕು, ಷೆಡ್ಯೂಲ್ಡ್ ಜಾತಿಗಳವರಿಗೆ ಅವಕಾಶ ಕೊಡಬೇಕೆಂದು ಅಪ್ಪಣೆ ಕೊಡಿಸಿರುವುದರ ದೆಸೆಯಿಂದ, ನೀವು ತಂದಿರುವುದು ತಿದ್ದುಪಡಿಯಾಗಲೇಬೇಕು, ತಿದ್ದುಪಡಿ ಮಾಡದೆ ಇದ್ದ ಪಕ್ಷದಲ್ಲಿ ಅದನ್ನು ಖಂಡಿತವಾಗಿಯೂ ಒಪ್ಪುವುದಕ್ಕಾಗುವುದಿಲ್ಲ. ಅಲ್ಲದೆ direct Election ಮಾಡಿ Multi-member Constituency ಗಳನ್ನು ಇಟ್ಟುಕೊಂಡ ಪಕ್ಷದಲ್ಲಿ, ನಮ್ಮ ನಾಯಕರು ಆಗಲೇ ಅಪ್ಪಣೆ ಕೊಡಿಸಿದ ಹಾಗೆ ಸಾರ್ವತ್ರಿಕ ಚುನಾವಣೆಗಳು ನಡೆದು ಅದಕ್ಕಾಗಿ ಹಣ ಖರ್ಚಾಗಿ ದೇಶಕ್ಕೆ ಎಷ್ಟೊಂದು ಕಷ್ಟನಷ್ಟಗಳುಂಟಾಗುತ್ತವೆ ಎಂಬುದನ್ನು ಯೋಚಿಸಬೇಕು. ಈ ವರ್ಷ ಸಾರ್ವತ್ರಿಕವಾಗಿ ಚುನಾವಣೆಗಳನ್ನು ಮಾಡಿದಪಕ್ಷದಲ್ಲಿ ಲಕ್ಷಾಂತರ ರೂಪಾಯಿ ಖರ್ಚಾಗಬೇಕಾಗುತ್ತದೆ. ಈ ಖರ್ಚನ್ನು ಸರ್ಕಾರದವರು ವಹಿಸಬೇಕೇ ಅಥವಾ ಜಿಲ್ಲಾ ಬೋರ್ಡುಗಳು ವಹಿಸಬೇಕೇ ಎನ್ನುವುದನ್ನು ಯೋಚಿಸಬೇಕಾಗುತ್ತದೆ. ಇದಲ್ಲದೆ ಜನಗಳೂ ಮತ್ತು ಉಮೇದುವಾರರೂ ಸಹ ವಿಶೇಷವಾದ ಹಣವನ್ನು ಖರ್ಚು ಮಾಡಬೇಕಾಗುತ್ತದೆ ಎನ್ನುವುದನ್ನೂ ಯೋಚಿಸಬೇಕು.

ಇದರ ಜೊತೆಗೆ ಈ ಜಿಲ್ಲಾಬೋರ್ಡು ಚುನಾವಣೆಗಳು ಆದ ತಕ್ಷಣ ಸಂಸ್ಥಾನಾದ್ಯಂತ ವಯಸ್ಕರ ಮತದಾನ ಪದ್ಧತಿಯ ಮೇಲೆ 1956ನೆ ಇಸವಿಯಲ್ಲಿ ಮುನಿಸಿಪಾಲಿಟಿಗಳ ಚುನಾವಣೆಗಳು ಬರುತ್ತವೆ. ಎರಡು ವರ್ಷದ ಅವಧಿಯೊಳಗೆ ಮೂರು ಮಹಾ ಚುನಾವಣೆಗಳನ್ನು ದೇಶದಲ್ಲಿ ಎದುರಿಸಬೇಕಾಗಿರುವ ಸಂದರ್ಭವಿರುವುದರಿಂದ ಇದರಿಂದ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದಕ್ಕೆ ಬದಲಾಗಿ ಶ್ರೀಮಾನ್ ವೆಂಕಟಪ್ಪ ಸಮಿತಿಯವರು ಮಾಡಿರತಕ್ಕ ಸಲಹೆಗಳ ಪ್ರಕಾರ indirect election ಅಂದರೆ, ಅಪ್ರತ್ಯಕ್ಷ ಚುನಾವಣೆಗಳನ್ನು ಬಹಳ ಸುಲಭ ಖರ್ಚಿನಲ್ಲಿ ಮಾಡಬಹುದೆಂದು ಹೇಳುತ್ತೇನೆ.

ಇನ್ನೊಂದು ವಿಚಾರ: ಈಗ Multi-member Constituency ಎಂದು ಹೇಳುತ್ತಿದ್ದೀರಿ. ಇದರ ಮೇಲೆ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಒಂದು ಜಿಲ್ಲೆಗೆ ಮೂರು ಸ್ಥಾನಗಳಿಗೆ ಜಾಸ್ತಿ ಇರಕೂಡದೆಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ ಮೀಸಲು ಸ್ಥಾನಗಳೆಷ್ಟು ಇರಬೇಕು, ಒಂದೊಂದು ಜಿಲ್ಲೆಗೆ ಏನಿರಬೇಕು ಎಂಬುದನ್ನು ನಮೂದುಮಾಡಿಲ್ಲ. ಇಷ್ಟಿಷ್ಟು ಜನಸಂಖ್ಯೆಗೆ ಇಷ್ಟಿಷ್ಟು ಸದಸ್ಯತ್ವವಿರಬೇಕು ಎನ್ನುವುದನ್ನು ಸಹ ನಮೂದು ಮಾಡಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ವರ್ಗದವರಿಗೆ ಎಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಈಗಿರತಕ್ಕ ಕಾನೂನಿನಲ್ಲಿ ವಿಧಾಯಕಮಾಡಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ Multi-member Constituency ಬರುವುದರಿಂದ ಒಂದೇ ಪಾರ್ಟಿಯವರು ಚುನಾವಣೆಗಳಲ್ಲಿ ಬರುವುದಕ್ಕೆ ಸಹಾಯವಾಗುತ್ತದೆ. ಶ್ರೀ ಪಟ್ಟಾಭಿರಾಮನ್‌ರವರೂ ಮತ್ತು ನಮ್ಮ ನಾಯಕರೂ ಹೇಳಿದಹಾಗೆ ಸ್ಥಳೀಯ ಸಂಸ್ಥೆಗಳಾದ ಮುನಿಸಿಪಾಲಿಟಿಗಳಲ್ಲಿ ಮತ್ತು ಜಿಲ್ಲಾ ಬೋರ್ಡುಗಳಲ್ಲಿ ಸಹ ರಾಜಕೀಯವನ್ನು ತಂದೊಡ್ಡುತ್ತಿದ್ದಾರೆ.

Mr. SPEAKER.—Hon'ble Member need not repeat arguments already advanced by other Hon'ble Members; if he has any new points to put forth, he may do so.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದುದರಿಂದ ಈ Multi-member Constituencyಯಿಂದ Single-member Constituencyಗೆ ಬದಲಾವಣೆಮಾಡಿ 25-30 ಸಾವಿರ ಪ್ರಜಾಸಂಖ್ಯೆಗೆ ಒಂದು ಸ್ಥಾನದಂತೆ ಮಾಡಿ, ನಿಮ್ನ ತರಗತಿಗಳವರಿಗೆ ಮೀಸಲು ಸ್ಥಾನಗಳನ್ನು ಸಹ ಅವಕಾಶಮಾಡಿ ಕೊಡಬೇಕು. ಈ ರೀತಿಯಾಗಿ ಮಾಡುವುದರಿಂದ ನಿಮ್ನ ತರಗತಿಗಳವರಿಗೆ ಖರ್ಚು ಕಡಿಮೆಯಾಗುವುದರಿಂದ ಮೀಸಲು ಸ್ಥಾನಗಳನ್ನು ಮಾಡಬೇಕೆಂದು ಹೇಳುತ್ತೇನೆ.

Sri Kadidal MANJAPPA—With your permission, may I ask the Hon'ble member as to what the political motive involved in this Bill is ? Hon'ble members on the opposite are repeatedly levelling that charge against the Government without specifying in what way Government is intending to strengthen their party.

ಶ್ರೀ ಎಮ್. ಚಿಕ್ಕಲಿಂಗಯ್ಯ.—ಯಾಕೆಂದರೆ Multi-member Constituency ಮಾಡುವುದರ ದೆಸೆಯಿಂದ ಒಂದೇ ಪಾರ್ಟಿಗೆ ಅದರಲ್ಲೂ ಅಧಿಕಾರದಲ್ಲಿರುವ ಪಾರ್ಟಿಗೆ ಚುನಾವಣೆಗಳಲ್ಲಿ ಜಯಶೀಲರಾಗಿ ಬರಲು ಹೆಚ್ಚಾದಂಥ ಅವಕಾಶವಿರುತ್ತದೆ. Single-member Constituency ಮಾಡಿ ಅದರಲ್ಲಿ ಕೆಲವು ಸ್ಥಾನಗಳನ್ನು ಮೀಸಲಾಗಿರಿಸಬೇಕು ಎಂದು ಹೇಳುತ್ತೇನೆ. ಶ್ರೀ ಕೆ. ಪಟ್ಟಾಭಿರಾಮಯ್ಯರವರೂ ಮತ್ತು ನಮ್ಮ ನಾಯಕರಾದ ಶ್ರೀಮಾನ್ ಇಮಾಂ ಸಾಹೇಬರೂ ಹೇಳಿದಹಾಗೆ, ಟೌನವರು ಮತ್ತು ಸಿಟಿಗಳವರು ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶವಿಲ್ಲದೆ ಇದ್ದರೆ ಚೆನ್ನಾಗಿರುತ್ತದೆಂಬ ವಾದವನ್ನು ಸಮರ್ಥನೆಮಾಡುತ್ತೇನೆ. ತಾವು ಯಾವ socialistic pattern of society ಎಂಬ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೀರೋ ಆ ತತ್ವದ ಪ್ರಕಾರ ಪಂಚಾಯಿತಿಗಳವರಿಗೆ ಹೆಚ್ಚಿಗೆ ಅವಕಾಶ ಕೊಡಬೇಕು. ಗ್ರಾಮಾಂತರಗಳಲ್ಲಿರುವವರಲ್ಲಿ ಪ್ರತಿಯೊಬ್ಬರೂ ಅನುಭವವಿರತಕ್ಕವರಿರುವುದಿಲ್ಲ. ಆದುದರಿಂದ ಪ್ರಭಾವಶಾಲಿಗಳಿಗಿಂತ ಪ್ರತಿಯೊಂದು ಕಡೆ ಗ್ರಾಮಾಂತರಗಳಲ್ಲಿ ಹೆಚ್ಚು ಜನಗಳ ಸಂಪರ್ಕವಿಟ್ಟುಕೊಂಡಿರತಕ್ಕವರಿಗೆ ಮಾತ್ರ ಚುನಾವಣೆಗಳಲ್ಲಿ ಬರಲು ಅವಕಾಶವಾಗುತ್ತದೆ. ಆದುದರಿಂದ ಈ ಟೌನವರು ಮತ್ತು ಸಿಟಿಯವರು ಈ ಚುನಾವಣೆಗಳಲ್ಲಿ ಭಾಗವಹಿಸದಂತೆ ಮಾಡತಕ್ಕದ್ದು ಸೂಕ್ತವಾದಂಥ ಸಲಹೆ ಎಂದು ನಾನು ತಿಳಿದುಕೊಂಡಿದ್ದೇನೆ.

ಕೊನೆಯದಾಗಿ ಶೇಕಡ $6\frac{1}{4}$ ಭಾಗದಷ್ಟು ವರಮಾನವನ್ನು ಕೊಡುತ್ತಿದ್ದುದನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ. ಮೇಲೆ ಹೇಳಿದಂತೆ ಶೇಕಡ $6\frac{1}{4}$ ಭಾಗವನ್ನು ಯಾವ ಉದ್ದೇಶದಿಂದ ತಾವು reserve ಮಾಡಿಕೊಳ್ಳಬೇಕೆಂದಿದ್ದೀರಿ ಎಂದರೆ ತಾಲ್ಲೂಕು ಹಂತದಲ್ಲಿ ಬೇರೊಂದು ಕಮಿಟಿಯನ್ನು ಏರ್ಪಾಡು ಮಾಡಬೇಕಾಗುತ್ತದೆ ಎಂದು ಹೇಳಿರುವುದಕ್ಕೆ ಇದನ್ನು ಕೊಡಬೇಕೆಂಬ ಅಭಿಪ್ರಾಯವಿರುವಂತೆ ತೋರುತ್ತದೆ. ಈಗಾಗಲೇ ಪಂಚಾಯಿತಿ, ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡು ಎಂದಿರುವುದರ ಜೊತೆಗೆ ಇನ್ನೂ ಯಾವುದೋ ಒಂದು ಕಮಿಟಿಯನ್ನು ಮಾಡಿದ ಪಕ್ಷದಲ್ಲಿ ಇದರ ಖರ್ಚು ಎಷ್ಟಾಗುತ್ತದೆ, duplication of work ಎಷ್ಟಾಗುತ್ತದೆ ಎನ್ನುವುದನ್ನು ಯೋಚಿಸಬೇಕು. ಈ ಹೊಸದಾಗಿ ತಾಲ್ಲೂಕು ಹಂತದಲ್ಲಿ ಇನ್ನೊಂದು ಸಮಿತಿಯನ್ನು ಏರ್ಪಾಡು ಮಾಡುವುದರಿಂದ ಬರೀ resolution ಮಾಡುವುದರಲ್ಲಿ ಆಗುತ್ತದೆಯೇ ಹೊರತು ನಿಜವಾಗಿ ಕೆಲಸಕಾರ್ಯಗಳು ನಡೆಯುವುದಿಲ್ಲ. ಆದುದರಿಂದ ಈ $6\frac{1}{4}$ ಭಾಗವನ್ನು ಜಿಲ್ಲಾ ಬೋರ್ಡಿಗೇ ಕೊಟ್ಟು, ಅವರಿಗೇ ಅಧಿಕಾರವನ್ನು ಕೊಟ್ಟು ಜಿಲ್ಲಾ ಬೋರ್ಡನ್ನೇ ಇಟ್ಟುಕೊಳ್ಳುವುದು ಸೂಕ್ತವೆಂದು ನಾನು ತಿಳಿದುಕೊಂಡಿದ್ದೇನೆ.

Number of Committees ಆದ ಪಕ್ಷದಲ್ಲಿ supervision, control ವಗೈರೆ ಕಷ್ಟವಾಗುತ್ತದೆಂದು ನಾನು ಅಭಿಪ್ರಾಯ ಪಡುತ್ತೇನೆ.

ಆದುದರಿಂದ ಇಷ್ಟು ವಿಷಯ ಹೇಳಿ ಖಂಡಿತವಾಗಿಯೂ ನಾವು ಈಗ ಸೂಚಿಸಿರತಕ್ಕ ವಿಷಯಗಳನ್ನು ಸರ್ಕಾರದವರು ಒಪ್ಪಿ, ಈ ತಿದ್ದುಪಡಿಗಳ ಸಹಿತ ಬಿಲ್ಲನ್ನು ಒಂದು Special Committeeಗೆ ಅಥವಾ Select Committeeಗೆ refer ಮಾಡಿ, ಅವರು ಕೂಲಂಕಷವಾಗಿ ಪರಿಶೀಲನೆ ಮಾಡಿದನಂತರ ನಾವು ಈ ಅಧಿವೇಶನದಲ್ಲೇ ಈ ಬಿಲ್ ಪಾಸ್ ಮಾಡುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri M. LINGANNA.—On a point of clarification, Sir. Under section 55 any person who is above 25 years can contest as a candidate to the district board. But persons who live in the Municipal area and city are excluded and they cannot vote. But power is conferred on people living in those areas to contest.

Mr. SPEAKER.—The Hon'ble Member may meet the Minister and discuss the point on which he feels any doubt.

Sri Mulka GOVINDA REDDY.—Discussion between the member and the Minister is not a private matter, Sir it is the concern of the House.

Sri Kadidal MANJAPPA.—It is not a private discussion between Sri Mulka Govinda Reddy and me ; it is between the Minister who sponsors the Bill and Sri Mulka Govinda Reddy, Member Legislative Assembly.

ಅಧ್ಯಕ್ಷರೇ, ಈ ಮಸೂದೆಯಮೇಲೆ ತೀವ್ರ ಚರ್ಚೆ ನಡೆದಿದೆ. ಶ್ರೀ ಇಮಾಂಸಾಹೇಬರು ಅಪ್ಪಣೆ ಕೊಡಿಸಿದಹಾಗೆ ಮೂರು ವಿಧವಾದ ಅಭಿಪ್ರಾಯಗಳು ಹೊರಬಿದ್ದಿವೆ. ಜಿಲ್ಲಾ ಬೋರ್ಡ್ ಚುನಾವಣೆ ನಡೆಸದೆ ಇದ್ದುದಕ್ಕೆ ಸರ್ಕಾರದವರ ಮೇಲೆ ಒಂದು ಜವಾಬ್ದಾರಿ ಮತ್ತು ಆಪಾದನೆಯನ್ನು ಮತ್ತು ಈ ಕಡೆ ಮಾತನಾಡಿದ ಕೆಲವು ಮಿತ್ರರೂ ಕೂಡ ದೊಡ್ಡ ಆಪಾದನೆಯನ್ನು ಹೊರಿಸಿದ್ದಾರೆ. ನಾನು ಒಂದೇ ಮಾತಿನಲ್ಲಿ ಈ ಆಪಾದನೆಗೆ ಉತ್ತರ ಹೇಳುವುದಾದರೆ, ಜವಾಬ್ದಾರಿ ಸರ್ಕಾರದ ಮೇಲೆ ಎಷ್ಟಿದೆಯೋ, ಅಷ್ಟೇ ಜವಾಬ್ದಾರಿ ಈ ಮಾನ್ಯ ಸಭೆಯ ಸದಸ್ಯರ ಮೇಲೆಯೂ ಇದೆ ಎಂದು ಸ್ಪಷ್ಟವಾಗಿ ತಿಳಿಸಲಿಚ್ಛಿಸುತ್ತೇನೆ. ಪ್ರಜಾಪ್ರಭುತ್ವ ತತ್ವದ ಪ್ರಕಾರ ಯಾವುದಾದರೂ ಒಂದು ಸರ್ಕಾರ ನಡೆಯುತ್ತ ಇರುವಾಗ ಕಾನೂನು ಮಾಡತಕ್ಕ ಜವಾಬ್ದಾರಿ ಶಾಸನ ಸಭೆಗೆ ಸೇರಿರುತ್ತದೆ. ಕಾನೂನನ್ನು ಸಭೆಯಮುಂದೆ ಮಂಡಿಸತಕ್ಕ

ಜವಾಬ್ದಾರಿ ಸರ್ಕಾರದ್ದು. ಅದರ ಜೊತೆಗೆ ಮಾನ್ಯ ಸದಸ್ಯರುಗಳು ಕೂಡ ಕಾನೂನು ಮಾಡತಕ್ಕ ಬಗ್ಗೆ ಅಥವಾ ಕಾನೂನು ತಿದ್ದುಪಡಿ ಮಾಡತಕ್ಕ ಬಗ್ಗೆ ಸೂಕ್ತ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಕೂಡ ಅಧಿಕಾರವನ್ನು ಪಡೆದಿರುತ್ತಾರೆ ಎಂಬುದನ್ನು ಮಾನ್ಯ ಸದಸ್ಯರು ಮರೆಯಬಾರದು.

5 P.M.

ಸರ್ಕಾರದ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ ಎಂಬುದನ್ನು ಅರಿತುಕೊಂಡಿದ್ದೇನೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಸರ್ಕಾರ ಯಾವುದಾದರೂ ಒಂದು ಕಾನೂನನ್ನು ಮಾಡಬೇಕಾದರೆ ಈ ಮಾನ್ಯ ಸಭೆಯ ಬಹುಮಂದಿ ಸದಸ್ಯರ ಒಪ್ಪಿಗೆ ಇಲ್ಲದೆ ಕಾನೂನನ್ನು ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ತಿಳಿದಂಥ ತಮ್ಮೆಲ್ಲರಿಗೆ ನಾನು ಹೇಳಬೇಕಾದ್ದಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ನಿಜ, 1947ನೇ ಇಸವಿಯಿಂದ ಜಿಲ್ಲಾಬೋರ್ಡ್‌ಗಳ ಚುನಾವಣೆ ನಡೆದಿಲ್ಲ. ನಾನು ನಿನ್ನೆ ತಮ್ಮಲ್ಲಿ ಅರಿಕೆಮಾಡಿಕೊಂಡಹಾಗೆ ಈ ಮಸೂದೆಯ ಹಿನ್ನೆಲೆಯನ್ನು ಮತ್ತು ತತ್ವಗಳನ್ನು ತಮ್ಮ ಜ್ಞಾಪಕಕ್ಕೆ ಸ್ವಲ್ಪಮಟ್ಟಿಗೆ ತಂದುಕೊಳ್ಳಿ, ಸರ್ಕಾರದ ಮೇಲೆ ತಾವು ಆರೋಪಣೆ ಹೊರಿಸಿದ್ದೀರಿ. ನಮ್ಮ ತಪ್ಪೂ ಇದೆ, ತಮ್ಮಗಳ ತಪ್ಪೂ ಇದೆ ಎಂದು ನಿರ್ಭಯವಾಗಿ ಹೇಳಬಲ್ಲೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಇಬ್ಬರದೂ ತಪ್ಪು ಇದೆ.

ಶ್ರೀ ಕಡಿದಾಳ್ ಮಂಜಪ್ಪ.—ಮುಖ್ಯವಾಗಿ ಈ ಮಸೂದೆಯಮೇಲೆ ಮಾತನಾಡಿದವರು ಮೂರು ವಿಷಯಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಜಿಲ್ಲಾಬೋರ್ಡಿಗೆ ಚುನಾವಣೆ ನಡೆಯುವಾಗ ಬಹುಮಂದಿ ಸದಸ್ಯರನ್ನೊಳಗೊಂಡ ಚುನಾವಣಾಕ್ಷೇತ್ರ ಇರಬೇಕೋ ಅಥವಾ ಒಬ್ಬ ಸದಸ್ಯರನ್ನೊಳಗೊಂಡ ಚುನಾವಣಾಕ್ಷೇತ್ರವಿರಬೇಕೋ ಎಂಬುದರಲ್ಲಿ ಭಿನ್ನಾಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಕೆಲವು ಮಾನ್ಯ ಸದಸ್ಯರು ಬಹುಮಂದಿಯನ್ನು ಚುನಾವಣೆ ಮಾಡತಕ್ಕ ಚುನಾವಣಾ ಕ್ಷೇತ್ರಇರತಕ್ಕದ್ದು ಅನುಕೂಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮತ್ತೆ ಕೆಲವರು ಒಬ್ಬ ಉಮೇದುವಾರನನ್ನು ಚುನಾವಣೆ ಮಾಡತಕ್ಕ ಚುನಾವಣಾಕ್ಷೇತ್ರ ಇರತಕ್ಕದ್ದು ಅವಶ್ಯಕವೆಂದು ತಿಳಿಸಿದ್ದಾರೆ. ಈ ಎರಡು ಪದ್ಧತಿಗಳಲ್ಲೂ ಕೂಡ ಸಾಧಕ ಬಾಧಕಗಳಿವೆ ಎಂಬುದನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ಆ ಪದ್ಧತಿಯಾಗಲಿ ಈ ಪದ್ಧತಿಯಾಗಲೀ ಪರಿಪೂರ್ಣವಾದುದು ಇದಕ್ಕಿಂತ ಉತ್ತಮವಾದ ಪದ್ಧತಿ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಬಹು ಮಂದಿ ಸದಸ್ಯರನ್ನು ಚುನಾವಣೆ ಮಾಡತಕ್ಕ ಚುನಾವಣಾ ಕ್ಷೇತ್ರದಲ್ಲೂ ಕೂಡ ಕೆಲವು ಸಾಧಕ ಬಾಧಕಗಳಿವೆ. ಇನ್ನೊಂದು ಪದ್ಧತಿಯಲ್ಲೂ ಕೂಡ ಕೆಲವು ಸಾಧಕ ಭಾಧಕಗಳಿವೆ. ಶ್ರೀ ಪಟ್ಟಾಭಿರಾಮ್‌ರವರು ಮತ್ತು ಇನ್ನು ಕೆಲವರು ಒಬ್ಬ ಸದಸ್ಯರನ್ನು ಚುನಾವಣೆ ಮಾಡಿ ಕಳುಹಿಸತಕ್ಕ ಚುನಾವಣಾ ಕ್ಷೇತ್ರ ಇರತಕ್ಕದ್ದು ಅವಶ್ಯಕ ಮತ್ತು ಅದು ಪ್ರಜಾಪ್ರಭುತ್ವದ ತತ್ವಕ್ಕೆ ಅನುಸಾರವಾಗಿದೆ ಎಂಬ ವಾದವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇನ್ನು ಕೆಲವರು ಯಾವುದಾದರೂ ಒಂದು ತಾಲ್ಲೂಕಿನಿಂದ ಚುನಾವಣೆಗೆ ಸ್ಪರ್ಧಿಸತಕ್ಕಂತಹವನು ಆ ತಾಲ್ಲೂಕಿನ ಎಲ್ಲರ ಪ್ರೀತಿ, ವಿಶ್ವಾಸಕ್ಕೂ ಮತ್ತು ಗೌರವಕ್ಕೂ ಪಾತ್ರನಾಗಿರಬೇಕು, ಅಂತಹವನೇ ಚುನಾಯಿತನಾಗುವುದು ಸಾಧುವಾದುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಪಟ್ಟಾಭಿರಾಮ್‌ರವರು ಮತ್ತು ಇತರ ಮಿತ್ರರು ಹೇಳಿದಂತೆ, ಒಬ್ಬ ವ್ಯಕ್ತಿಯನ್ನು ಚುನಾವಣೆ ಮಾಡತಕ್ಕ ಚುನಾವಣಾಕ್ಷೇತ್ರ ಇಟ್ಟುಕೊಂಡರೆ ಅದರಲ್ಲಿಯೂ ಸ್ವಲ್ಪ ತೊಂದರೆ ಇದೆ ಎಂಬುದನ್ನು ನನ್ನ ಮಾನ್ಯ ಮಿತ್ರರು ಅರಿತುಕೊಂಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಕೆಲವು ಕಡೆ ಜಹಗೀರಾಗಿದ್ದಹಾಗೆ ನಾನಾಕಾರಣಗಳಿಂದ ಕೆಲವರು ಚುನಾವಣೆಯಾಗಿ ಬರುತ್ತಾರೆ. Pocket Borough ಇದ್ದಹಾಗೆ ದೊಡ್ಡ ಜಮೀನ್ದಾರರಾಗಿಯೋ ಅಥವಾ ಇನ್ನು ಯಾವುದಾದರೋ ಒಂದು ಕಾರಣದಿಂದ ಜನಗಳ ಮೇಲೆ ಹತೋಟಿಯನ್ನು ಇಟ್ಟುಕೊಂಡಿರುವ ವ್ಯಕ್ತಿಗಳು ಅಂದರೆ Money lenders, ಫೂಟ್‌ಲಾಯರುಗಳು, ಮುಂತಾದವರು ಅಲ್ಲಲ್ಲ ಇರುತ್ತಾರೆ.

ಶ್ರೀ ಎ. ಭೀಮಪ್ಪನಾಯಕ್.—Bus-owners ಮತ್ತು Cinema owners ಇರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಸಿನಿಮಾ owners ಎಲ್ಲರೂ ಕೆಟ್ಟವರು ಎಂದು ಹೇಳುತ್ತಾ ಇಲ್ಲ. ಅಂತಹ ಪ್ರಭಾವವನ್ನು ಜನಗಳಮೇಲೆ ಇಟ್ಟುಕೊಂಡಿರತಕ್ಕ ವ್ಯಕ್ತಿಗಳು ಒಂದೊಂದು ಹೋಬಳಿಯಲ್ಲೂ ಕೂಡ ಎಷ್ಟೋ ಅನಾಹುತ ಮಾಡುವುದಕ್ಕೆ ಆಸ್ಪದವಾಗುತ್ತದೆ ಎಂದು ಹೇಳುತ್ತಿದ್ದೇನೆ. ಅದೇ ಪದ್ಧತಿ ಪರಿಪೂರ್ಣವಾದುದು. ಇದೇ ಪದ್ಧತಿ ಪರಿಪೂರ್ಣವಾದುದು ಎಂದು ವಾದ ಮಾಡುತ್ತಿಲ್ಲ. ಸಾಧಕ ಬಾಧಕಗಳು ಇನ್ನೊಂದು ಪದ್ಧತಿಯಲ್ಲೂ ಇವೆ. ಈ ಎರಡರಲ್ಲೂ ಸಾಧಕ ಬಾಧಕಗಳಿವೆ ಎಂದು ವಾದ ಮಾಡುತ್ತಿದ್ದೇನೆ. ಇನ್ನು ಕೆಲವರು ಜಾತಿವಿಚಾರ ಪ್ರಸ್ತಾಪ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಕೆಲವು ಜಾತಿಯವರು ಹೆಚ್ಚಾಗಿದ್ದಾರೆ. ಅಲ್ಲಿ ಅವರದೇ ಒಂದು ಸ್ಥಾನ ಕಲ್ಪನೆಯಾಗಿರುತ್ತದೆ. ಅವರನ್ನು ತಪ್ಪಿವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗೆ ಅನೇಕ ಸಾಧಕ ಬಾಧಕಗಳಿವೆ. ಈಗ ಒಂದು ತಾಲ್ಲೂಕಿನಿಂದ ಸ್ಪರ್ಧಿಸುವುದಾದರೆ ತಾಲ್ಲೂಕಿನಲ್ಲಿ ಹೆಸರನ್ನು ಪಡೆದ ವ್ಯಕ್ತಿ ಜನರ ಪ್ರೀತಿ ಮತ್ತು ಗೌರವವನ್ನು ಗಳಿಸಿರತಕ್ಕ ವ್ಯಕ್ತಿ ಸ್ಪರ್ಧಿಸುವುದಕ್ಕೆ ಸಾಧ್ಯವಾಗುತ್ತದೆ. ಒಂದು ಹೋಬಳಿಯನ್ನು ಎಲ್ಲಾ ಕಡೆಯೂ ಚುನಾವಣಾ ಕ್ಷೇತ್ರವನ್ನಾಗಿ ಮಾಡುವುದಕ್ಕಾಗುವುದಿಲ್ಲ. ಒಂದು ತಾಲ್ಲೂಕಿಗೆ ಮೂರು ಜನ ಸದಸ್ಯರಿಗಿಂತ ಹೆಚ್ಚಿಗೆ ಇರಕೂಡದು ಎಂದು ಮಸೂದೆಯಲ್ಲಿ ವಿಧಾಯಕವಾಗಿರಬೇಕಾದರೆ ಒಂದೊಂದು ಹೋಬಳಿಯಿಂದ ಒಬ್ಬೊಬ್ಬ ಸದಸ್ಯರನ್ನು ಚುನಾವಣೆ ಮಾಡುವುದಕ್ಕಾಗುವುದಿಲ್ಲ. ಒಂದು ತಾಲ್ಲೂಕಿಗೆ ಇಬ್ಬರು ಅಥವಾ ಮೂರು ಜನ ಸದಸ್ಯರನ್ನು ಆರಿಸತಕ್ಕ ಹಕ್ಕು ಬರುತ್ತದೆ. ಆಗ ಕ್ಷೇತ್ರ ತಕ್ಕಷ್ಟು ವಿಸ್ತಾರವಾಗುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮೂರು ಜನಕ್ಕೆ ಬದಲು ಚುನಾವಣೆಯಲ್ಲಿ ನಾಲ್ಕು ಜನ ಬರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ರಾಜಕೀಯ ಪಕ್ಷ ಕಟ್ಟುವ ಉದ್ದೇಶದಿಂದ, ತಮ್ಮ ಪಕ್ಷಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸರ್ಕಾರದವರು ಈ ಮಸೂದೆಯನ್ನು ತಂದಿದ್ದಾರೆಯೆಂದು ಆರೋಪಣೆಯನ್ನು ಸರ್ಕಾರದವರ ಮೇಲೆ ಹೊರಿಸಿದ್ದಾರೆ. ಯಾವರೀತಿ ಸಹಾಯ ಮಾಡುತ್ತಾರೆಂದು ಮಾನ್ಯ ಸದಸ್ಯರು ಈ ಸಭೆಯ ಮುಂದೆ ಹೇಳಲಿಲ್ಲ. ನಮಗೆ ಯಾವ ಒಂದು ಅವಕಾಶ ಈ ಮಸೂದೆಯ ಮೂಲಕ ದೊರೆಯುತ್ತದೋ, ತಮ್ಮದೂ ಒಂದು ಪಕ್ಷವಾಗಿರುವುದರಿಂದ ತಮಗೂ ಕೂಡ ಅದೇ ಅವಕಾಶ ದೊರೆಯು

(ಶ್ರೀ ಕಡಿದಾಳ್ ಮಂಜಪ್ಪ.)

ತ್ತದೆ ಎಂಬುದನ್ನು ಮರೆಯಬಾರದು. Multi-member Constituency ನಿರ್ಮಾಣ ಮಾಡಬೇಕು ಎಂದು ಉದ್ದೇಶ ಮಾಡಿಕೊಂಡಿದ್ದೇವೆ. ಅದರಿಂದ ನಮಗೆ ಯಾವ ಅನುಕೂಲಗಳು ಪ್ರಾಪ್ತವಾಗುತ್ತದೋ ತಮಗೂ ಅದೇ ಅನುಕೂಲಗಳು ಪ್ರಾಪ್ತವಾಗಲೇ ಬೇಕು. ಇದರಲ್ಲಿ ವ್ಯತ್ಯಾಸ ನನಗೆ ಕಾಣಲಿಲ್ಲ. ಸರ್ಕಾರದ ಪರ ಹೇಳುವುದಾದರೆ ಸರ್ಕಾರದ ಮನಸ್ಸಿನಲ್ಲಿ Multi-member Constituency ಮಾಡಿದರೆ ಕಾಂಗ್ರೆಸ್ ಸಂಸ್ಥೆಗೆ ಬಲ ಬರುತ್ತದೆ ಎಂದು ನಾನೇನೂ ಯೋಚನೆ ಮಾಡಲಿಲ್ಲ. ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಮೇಲೆ ಅದು ಹೌದೇ ಎಂದು ಸಂದೇಹ ಬರುತ್ತಿದೆ. ಒಂದು ವೇಳೆ ಕಾಂಗ್ರೆಸ್ ಸಂಸ್ಥೆಗೆ ಈ ಒಂದು ವ್ಯವಸ್ಥೆಯಿಂದ ಅನುಕೂಲವಾಗುವುದಾದರೆ ಅದೇ ಅನುಕೂಲ ಇನ್ನೊಂದು ಪಕ್ಷಕ್ಕೂ ಆಗಲೇ ಬೇಕು. ಆದ್ದರಿಂದ ಇನ್ನೊಂದು ಪಕ್ಷದವರು ಹೆದರಬಾರದು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಎರಡನೆಯದು 106ನೇ ನಿಬಂಧನೆಗೆ ಸಂಬಂಧ ಪಟ್ಟದ್ದು. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳ ಕಟುವಾಗಿ ಟೀಕೆಗಳನ್ನು ಮಾಡಿದ್ದಾರೆ. ಕಾನೂನು ಪ್ರಕಾರ ಸ್ಥಾಪಿಸಲ್ಪಟ್ಟ ಬಂದು ಸಂಸ್ಥೆಗೆ ಕೊಡಬೇಕೆಂದು ನಿಬಂಧನೆಯಾಗಿರತಕ್ಕ ಮೊಬಲಗನ್ನು ಸರ್ಕಾರದವರು ತೆಗೆದುಕೊಳ್ಳತಕ್ಕದ್ದು ಅನ್ಯಾಯವೆಂದು ಆರೋಪಣೆ ಮಾಡಿದ್ದಾರೆ. Civil worksಗೆ ಸಂಬಂಧಪಟ್ಟ 50ನೇ ಡಿಮ್ಯಾಂಡ್ ಚರ್ಚಿಸಲ್ಪಟ್ಟಾಗ ಶ್ರೀ ಇಮಾಂಸಾಹೇಬರು ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರೂ ಕೂಡ ಸಂಸ್ಥಾನದಲ್ಲಿ ಜಿಲ್ಲಾ ಬೋರ್ಡ್‌ಗಳ ಸ್ವಾಧೀನದಲ್ಲಿರತಕ್ಕ ರಸ್ತೆ ಸಮರ್ಪಕವಾಗಿಲ್ಲ ಆದ್ದರಿಂದ ಸರ್ಕಾರದವರು ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ವಾದ ಮಾಡಿದ್ದಾರೆ. 1952ನೇ ಇಸವಿಯಿಂದ ಈಚೆಗೆ ಸರ್ಕಾರದವರು $2\frac{1}{2}$ ಸಾವಿರ ಮೈಲಿಗಳ ರಸ್ತೆಗಳನ್ನು ಜಿಲ್ಲಾ ಬೋರ್ಡುಗಳಿಂದ ತಮ್ಮ ಅಧೀನಕ್ಕೆ ತೆಗೆದುಕೊಂಡಿದ್ದಾರೆ. ಇದರ ಪರಿಣಾಮವಾಗಿ ಸರ್ಕಾರದ ಜವಾಬ್ದಾರಿ ಸುಮಾರು 8 ಲಕ್ಷದಿಂದ 10 ಲಕ್ಷದ ವರೆಗೆ ಹೆಚ್ಚಾಗಿದೆ. ಮತ್ತು ಜಿಲ್ಲಾ ಬೋರ್ಡ್‌ಗಳ ಜವಾಬ್ದಾರಿ ಅಷ್ಟರಮಟ್ಟಿಗೆ ಕಡಿಮೆಯಾಗಿದೆಯೆಂದು ಅರಿಕೆ ಮಾಡಿಕೊಳ್ಳುತ್ತೇನೆ.

Sri H. M. CHANNABASAPPA.—I would like to submit to the House, it is not so. At the time of Road Reclassification the Government and the District Boards were sharing the expenditure. It was the view of the Road Re-classification Committee that the roads should be divided into two parts, one part being maintained by the District Boards and the other part by the Government and Government need not pay to the District Boards and the District Boards need not pay to the Government.

Sri Kadidal MANJAPPA.—It is not a wrong statement. It is a correct statement. I can prove with facts and figures.

ನಿನ್ನೆ ನಾನು ಅರಿಕೆಮಾಡಿಕೊಂಡಹಾಗೆ ಹಳ್ಳಿಗಾಡಿನಲ್ಲಿ ಅಭಿವೃದ್ಧಿ ಕಾರ್ಯಗಳು ಅಗತ್ಯವಾಗಿ ಆಗಬೇಕಾಗಿದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನೂ ಕೂಡ ಜಿಲ್ಲಾ ಬೋರ್ಡಿನವರೇ ಆ ಬೋರ್ಡಿನ ಅಧ್ಯಕ್ಷರು ಮತ್ತು ಸದಸ್ಯರು ಎಷ್ಟೇ ಸಮರ್ಥರಾಗಿದ್ದರೂ ಕೈಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಕೆಲವು ಅಭಿವೃದ್ಧಿ ಕಾರ್ಯಗಳನ್ನು ನಡೆಸಲೇಬೇಕಾಗುತ್ತದೆ. ಈಗ ಜಿಲ್ಲಾ ಬೋರ್ಡುಗಳಿಗೆ ಸರ್ಕಾರದ ವರಮಾನದಲ್ಲಿ ಕೆಲವು ಭಾಗವನ್ನು ಕೊಡುತ್ತಿದ್ದರೂ ಕೂಡ ಪ್ರತಿದಿವಸವೂ ಹಳ್ಳಿಗಾಡಿನಿಂದ ರಸ್ತೆಯಾಗಬೇಕು, ಕುಡಿಯುವ ನೀರಿನ ಭಾವಿ ನಿರ್ಮಾಣವಾಗಬೇಕು ಎಂದು ಪದೇ ಪದೇ ಬೇಡಿಕೆಗಳು ಬರುತ್ತಿವೆ. ಈ ಕಾರಣದಿಂದ ತಾಲ್ಲೂಕಿನ ಮಟ್ಟದಲ್ಲಿ ಕೆಲವು ಅಭಿವೃದ್ಧಿ ಕಾರ್ಯಗಳು ಆವಶ್ಯಕವಾಗಿ ಆಗಬೇಕಾದ್ದರಿಂದ ಆ ಬಾಬಿಗೆ ಕೂಡ ಈ ಹಣದಲ್ಲಿ ಕೆಲವು ಭಾಗವನ್ನು ಕೊಡತಕ್ಕದ್ದು ಅಗತ್ಯವೆಂದು ತಮ್ಮಲ್ಲಿ ನಿನ್ನೆ ಅರಿಕೆಮಾಡಿಕೊಂಡೆ. ಜಿಲ್ಲಾ ಬೋರ್ಡುಗಳಿಗೆ ಸಾಕಾದಷ್ಟು ಕಾರ್ಯಕ್ಷೇತ್ರವಿದೆ, ಅದರಲ್ಲಿ ಕೆಲಸ ಮಾಡಲು ಅವಕಾಶವಿದೆ.

Sri K. PATTABHIRAMAN.—May I seek a clarification from the Hon'ble Minister, Sir? Yesterday a figure was announced on the floor of the House that what you really expect to be covered under that clause would be about six lakhs and you also made what you called an incidental reference, that that amount would be ear-marked for the developmental activity which you would like to carry on through the developmental committees which have yet to come into existence. That was yesterday. Within 24 hours, you have made the startling announcement that consistent with taking away the roads from the District Boards, naturally you have to augment your own resources and that you would like this six lakhs or five lakhs to come into the coffers of the State so that this responsibility for the maintenance of these roads might be covered. I want you to reconcile the two statements and not keep us in doubt.

ಶ್ರೀ ಕಡಿದಾಳ್ ಮಂಜಪ್ಪ.—ನಾವು ಜವಾಬ್ದಾರಿ ಹೊತ್ತಿರುವ ಸಂಬಂಧದಲ್ಲಿ ಅಂಕಿ ಅಂಶಗಳನ್ನು ಸ್ವಲ್ಪ ಮಟ್ಟಿಗೆ ತಮ್ಮ ಮುಂದಿಡಲು ಪ್ರಯತ್ನ ಮಾಡಿದೆ. ಸ್ಪೆಷಲ್ ರಿಪೇರ್ಸ್ ಅಲ್ಲದೆ ಸಾಮಾನ್ಯ ರಿಪೇರಿಗೆ ಜಿಲ್ಲಾ ಬೋರ್ಡು ಹನ್ನೆರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಈಗಿರುವ ಕ್ಲಾಸಿಫಿಕೇಷನ್ ಪ್ರಕಾರ ಸಾಮಾನ್ಯ ರಿಪೇರಿಗೆ ಎಂಟು ಲಕ್ಷ ರೂಪಾಯಿ ಚಿಲ್ಲರೆ ಮಾತ್ರ ಜಿಲ್ಲಾ ಬೋರ್ಡುಗಳಿಗೆ ಖರ್ಚಾಗುತ್ತಿದೆ ಎಂದು ಹೇಳುತ್ತೇನೆ. ಇದಕ್ಕೆ ಗವರ್ನಮೆಂಟ್ ಆರ್ಡರಿದೆ. ಮಾನ್ಯ ಸದಸ್ಯರಿಗೂ ಇದು ಗೊತ್ತಿದೆ.

ಶ್ರೀ ಎ. ಭೀಮಪ್ಪನಾಯಕ್.—ತಾಲ್ಲೂಕು ಕಮಿಟಿ ಡೆವಲಪ್‌ಮೆಂಟ್ ಕೆಲಸಕ್ಕೆ ಉಪಯೋಗಿಸುತ್ತಾರೆಯೆ

ಅಥವಾ ಸರ್ಕಾರಕ್ಕೆ ತೆಗೆದುಕೊಳ್ಳುತ್ತಾರೆಯೆ ಎಂಬುದನ್ನು ಹೇಳಬೇಕು. ಅದು ಬಿಟ್ಟು ಬೇರೆ ಹೇಳಿದರೆ ಅನುಮಾನ ಬರುತ್ತದೆ.

Sri Kadidal MANJAPPA.—If the Hon'ble Member has not heard it, I want to repeat once again. The intention is to spend this amount on developmental activities in the rural areas. That argument was advanced that the District Boards would be deprived of this legitimate income; I said in answer that their responsibility in regard to the roads had been reduced and therefore they could spare this amount for developmental activity in the rural areas.

Sri A. BHEEMAPPA NAIK.—So, you categorically say that it will be used for developmental activities in the rural areas?

Sri Kadidal MANJAPPA.—Yes, I only brought these facts and figures to the notice of the Hon'ble Members to say that the District Board's responsibility had been reduced on account of the Government taking away about 2,500 miles of roads from District Boards.

ಇನ್ನೊಂದು ಆಕ್ಷೇಪಣೆ ಸದಸ್ಯರ ಸಂಖ್ಯೆಗೆ ಸಂಬಂಧಪಟ್ಟಿದ್ದು. ಈಗಿರತಕ್ಕ ಕಾನೂನಿನಲ್ಲಿ ಒಂದು ಷೆಡ್ಯೂಲಿದೆ. ಆ ಷೆಡ್ಯೂಲಿನಲ್ಲಿರುವ ಸಂಖ್ಯೆಗಿಂತ ಈ ಮಸೂದೆಯಲ್ಲಿ ನಮೂದು ಮಾಡಿರುವ ಸಂಖ್ಯೆ ಕಡಮೆ ಎಂಬ ವಾದವನ್ನು ಕೆಲವರು ಎತ್ತಿದ್ದಾರೆ. ಸ್ವಲ್ಪ ಹೆಚ್ಚು ಕಡಮೆ ಸಂಖ್ಯೆ ವ್ಯತ್ಯಾಸವಾಗುವುದಿಲ್ಲ.

ಶ್ರೀಮಾನ್ ವೆಂಕಟಪ್ಪನವರು ಮಾತನಾಡುವಾಗ ಪಂಚಾಯಿತಿಗಳಿಗೆ ಸಂಬಂಧಪಟ್ಟ ಹಣದಿಂದ ಆಡಿಟ್ ಫೀಜನ್ನು ವಜಾಮಾಡುವುದು ಯುಕ್ತವಲ್ಲವೆಂದು ಹೇಳಿದರು. ಇದಕ್ಕೆ ಆವಶ್ಯಕವಾದ ನಿಬಂಧನೆ ಜಿಲ್ಲಾ ಬೋರ್ಡಿಗೆ ಸಂಬಂಧಪಟ್ಟ ನಿಬಂಧನೆಗಳಲ್ಲಿ ಕೂಡ ಇದೆ.

ಸರ್ಕಾರದವರು ಶೇಕಡ $12\frac{1}{2}$ ಯಷ್ಟು ಕಂದಾಯದ ಮೊಬಲಗನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡುತ್ತಾ ಇರುವಾಗ ಪುನಃ ಸರ್ಕಾರದವರು ತಮ್ಮ ಖಾತೆಯಿಂದ ಪಂಚಾಯಿತಿಗಳ ಲೆಕ್ಕಗಳ ತನಿಖೆಯನ್ನು ಮಾಡಬೇಕೆಂಬುದು ಸರಿಯಾದ ವಾದವಲ್ಲ ಎಂದು ಬಹಳ ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಕಾನೂನ್ನು ಪ್ರಕಾರ ಏನೇನು ಮೊಬಲಗನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕಾಗಿದೆಯೋ ಅವುಗಳನ್ನು ಕೊಡತಕ್ಕದ್ದು ಅಗತ್ಯ, ಕೊಡಬೇಕಾದದ್ದು ನಮ್ಮ ಧರ್ಮ, ಅಷ್ಟುಮಾತ್ರ ಹೇಳಬಲ್ಲೆ.

ಶ್ರೀಮಾನ್ ವೆಂಕಟಪ್ಪನವರು 7ನೇ ನಿಬಂಧನೆ ಅರ್ಥವಾಗಲಿಲ್ಲ ಎಂದು ಹೇಳಿದರು. 7ನೇ ನಿಬಂಧನೆ 54ನೇ ಸೆಕ್ಷನ್‌ಗೆ ಸಂಬಂಧಪಟ್ಟಿದ್ದು. 54ನೇ ಸೆಕ್ಷನ್‌ನಲ್ಲಿ ಅನರ್ಹತೆ ಸಂಭವಿಸಿದಾಗ ಯಾರು ಅನರ್ಹತೆ ವಿಚಾರದಲ್ಲಿ ತೀರ್ಪುಕೊಡಬೇಕೆಂಬುದು ವಿಧಾಯಕವಾಗಿದೆ. ಚುನಾವಣೆ ಆದನಂತರ ಅನರ್ಹತೆ ಸಂಭವಿಸಿದರೆ, ಆ ಅನರ್ಹತೆ ವಿಚಾರದಲ್ಲಿ ಅಂತಿಮ ತೀರ್ಮಾನವನ್ನು ಕೊಡತಕ್ಕವರು ಸರ್ಕಾರದವರು ಎಂದು ಹೇಳಿ ಆ ತಿದ್ದುಪಡಿಯಲ್ಲಿ ಸೂಚಿಸಲಾಗಿದೆ. ಇದರಲ್ಲಿ ಬಾಧಕವೇನೂ ಇಲ್ಲ. ಶ್ರೀಮಾನ್ ವಾದಯ್ಯನವರು ಮಾತನಾಡುವಾಗ ನಿಮ್ನ ತರಗತಿಯವರಿಗೆ ಸಂಬಂಧಪಟ್ಟ ವಿವರಣೆ ರಾಜ್ಯಾಂಗಕ್ಕೆ ವಿರೋಧವಾಗಿದೆ ಎಂಬುದಾಗಿ ಹೇಳಿದರು. ಆ ವಾದ ಸರಿಯಲ್ಲ. ಆ ವಿಚಾರದಲ್ಲಿ ಕಾನೂನು ಪಂಡಿತರ ಸಲಹೆಯನ್ನು ಸರ್ಕಾರದವರು ಪಡೆದಿದ್ದಾರೆ. ರಾಜ್ಯಾಂಗಕ್ಕೆ ವಿರೋಧವಾಗುವುದಿಲ್ಲ ಎಂದು ಅವರಿಗೆ ಭರವಸೆ ಹೇಳಲಿಚ್ಛಿಸುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಈ ಮಸೂದೆ ಸಮರ್ಪಕವಾಗಿದೆ. ಈ ಮಸೂದೆಯನ್ನು ಕಾನೂನನ್ನಾಗಿ ಮಾಡತಕ್ಕದ್ದು ಅವಶ್ಯಕ. ಜಿಲ್ಲಾ ಬೋರ್ಡುಗಳಿಗೆ ಚುನಾವಣೆ ಬಹಳ ಜಾಗ್ರತೆಯಾಗಿ ನಡೆಯಬೇಕಾಗಿದೆ. ಮಾನ್ಯಸದಸ್ಯರಲ್ಲಿ ಇಂಥ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಇರತಕ್ಕದ್ದು ಸ್ವಾಭಾವಿಕ. ಮಾನ್ಯ ಸದಸ್ಯರೂ ಕೂಡ ತಾವು ಹೇಳತಕ್ಕ ವಾದವೇ ಸರಿ ಎಂದು ಹೇಳುವುದು ಸಹ ಮಾನವ ಸ್ವಭಾವ. ರಾಜಕೀಯದಲ್ಲಾಗಲಿ, ವಿಜ್ಞಾನದಲ್ಲಾಗಲಿ ಇದೇ ಕಟ್ಟಕಡೆಯ ಮಾತು ಎಂದು ಹೇಳುವಹಾಗಿಲ್ಲ. ಆದ್ದರಿಂದ ಭಿನ್ನಾಭಿಪ್ರಾಯಗಳು ಬರತಕ್ಕದ್ದು ಸ್ವಾಭಾವಿಕ. ಇದರಲ್ಲಿ ಬಹು ಜನರಿಗೆ ಯಾವುದು ಒಪ್ಪಿಗೆಯಾಗುತ್ತದೆಯೋ ಅದನ್ನು ಒಪ್ಪಿಕೊಳ್ಳುವುದಕ್ಕೆ ಸರ್ಕಾರದವರು ತಯಾರಾಗಿದ್ದೇವೆ ಎಂದು ಆಖೈರಾಗಿ ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—Decentralisation of powers ಮಾಡಬೇಕು ಎಂಬ ಪ್ರಶ್ನೆ ಹಾಕಿದರು. ಆ ವಿಷಯ ಹೇಳಿ.

*ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಸ್ವಾಮಿ, ಹಿಂದೆ ಒಮ್ಮೆ ಈ ಮಸೂದೆಯ ವಿಚಾರದಲ್ಲಿ ನಾನು ಭಾಷಣ ಮಾಡಿದಾಗ ಸಭೆಯಲ್ಲಿ ಅರಿಕೆ ಮಾಡಿಕೊಂಡೆ. ಈ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಜಾಗ್ರತೆ ಆಗದೆ, 7 ವರ್ಷಗಳ ಕಾಲದಿಂದ ಇದರ ವಿಚಾರದಲ್ಲಿ ಜಿಜ್ಞಾಸೆ ನಡೆಯುತ್ತಾ ಇರುವುದು ನಿಜವಾಗಿಯೂ ಈ ವಿಷಯದಲ್ಲಿ ಎಷ್ಟು ಭಿನ್ನಾಭಿಪ್ರಾಯವಿದೆ ಎಂಬುದನ್ನು ಸ್ಪಷ್ಟಪಡಿಸುತ್ತಾ ಇದೆ. ಇರತಕ್ಕ ಭಿನ್ನಾಭಿಪ್ರಾಯವನ್ನು ಸಮಂಜಸಗೊಳಿಸಿ ಒಂದು ರೂಪಕ್ಕೆ ತಂದು ಈ ಬಿಲ್ಲನ್ನು ತಂದಿದ್ದೇವೆ. ಭಿನ್ನಾಭಿಪ್ರಾಯ ಈ ರೀತಿ ಇರುವಾಗ ಒಂದು ದುರುದ್ದೇಶವನ್ನು ಕಲ್ಪನೆ ಮಾಡುವುದು ಅಷ್ಟು ಲಕ್ಷಣವಾದ ಮಾರ್ಗವಲ್ಲ. ಇದು ಕಾನೂನು ಆಗುತ್ತಾ ಇದೆ. ಇದು ಕಾನೂನು ಆದಮೇಲೆ ಎಲ್ಲರಿಗೂ ಇದರ ಆಶ್ರಯದಲ್ಲಿ ಸರಿಸಮಾನವಾದ ಹಕ್ಕು ಬಾಧ್ಯತೆಗಳು ಇವೆ. ಕಾಂಗ್ರೆಸ್ ಪಾರ್ಟಿಯವರಿಗೆ ಹೆಚ್ಚು ಬಾಧ್ಯತೆ, ಮಿಕ್ಕವರಿಗೆ ಕಡಿಮೆ ಬಾಧ್ಯತೆ ಏನೂ ಇಲ್ಲ. ಒಂದುವೇಳೆ, ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್‌ಸಿ, ಅಥವಾ ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯನ್‌ಸಿ ಎಂದು ಮಾಡಿದಾಕ್ಷಣಕ್ಕೇ ಅದರಲ್ಲಿ ಯಾವ ದುರುದ್ದೇಶವೂ ಇಲ್ಲ. ಚುನಾವಣೆಯಲ್ಲಿ ಇವೆಲ್ಲವೂ ಅನುಸರಿಸಬೇಕಾದ ಮತ್ತು ಎಲ್ಲರಿಗೂ ಗೊತ್ತಿರತಕ್ಕ ಸುಪ್ರಸಿದ್ಧವಾದ ಮಾರ್ಗ. ಆದ್ದರಿಂದ ಯಾವ ಸದಸ್ಯರಿಗೂ ಕೂಡ ಸದುದ್ದೇಶ ಅಥವಾ ದುರುದ್ದೇಶ ಆರೋಪಣೆಮಾಡತಕ್ಕಂಥ ಸಂಗತಿ ಇಲ್ಲಿ ಏನೂ ಇಲ್ಲ. ಎಲ್ಲವೂ ಬಹಿರಂಗವಾಗಿ ಚರ್ಚೆಯಾಗುತ್ತ ಇದೆ. ಕಾನೂನು ಆಗಿ ಬಹಿರಂಗವಾಗಿ ಚುನಾವಣೆಗಳೂ ಕೂಡ ನಡೆಯುತ್ತವೆ. ಯಾವ ಸದಸ್ಯರೂ ಕೂಡ ಈ ವಿಷಯದಲ್ಲಿ ಅನುಮಾನ ಇಟ್ಟುಕೊಳ್ಳಬೇಕಾದ ಕಾರಣವೇನೂ ಇಲ್ಲ.

(ಶ್ರೀ ಕೆ ಹನುಮಂತಯ್ಯ.)

ಸ್ಥಳೀಯ ಸರ್ಕಾರಗಳನ್ನೇ ಏಕೆ ಬೆಳೆಸಬಾರದು ಎಂದು ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ. ಒಂದು ದೃಷ್ಟಿಯಲ್ಲಿ ನೋಡಿದರೆ ಅವರು ಹೇಳುವ ವಾದ ಸರಿ. ಮತ್ತೊಂದು ದೃಷ್ಟಿಯಲ್ಲಿ ನೋಡಿದರೆ, ಆ ಪದ್ಧತಿ ಈ ಕಾಲಕ್ಕೆ ಅನ್ವಯವಾಗುವುದಿಲ್ಲ. ಏನೋ, ಸರ್ಕಾರವನ್ನು ಟೀಕೆ ಮಾಡಬೇಕು ಎಂಬ ಒಂದು ಉದ್ದೇಶದಿಂದ ವಾದಗಳನ್ನು ಹೂಡುವುದಕ್ಕೂ ಒಂದು ಮಾರ್ಗ ಇದೆ. 'ನಿಜವಾದ ಧ್ಯೇಯಸಾಧನೆ ಮಾಡುವುದಕ್ಕೆ' ಎಂಬ ವಾದ ಹೂಡುವುದಕ್ಕೂ ಮಾರ್ಗ ಇದೆ. ನಾವು ಈ ಸಭೆಯಲ್ಲಿ ಇರತಕ್ಕವರೆಲ್ಲರೂ ಗಾಂಧಿಜೀಯವರ ಅನುಯಾಯಿಗಳು. ಕೇಂದ್ರ ಸರ್ಕಾರದವರು ಇದ್ದಾರೆ. ನಾವು ಪ್ರಾಂತೀಯ ಸರ್ಕಾರಗಳಿಗೆ ಇರತಕ್ಕ Constitutional rights ಏನಿದೆಯೋ ಅವು ಕೂಡ ಕುಂಠಿತವಾಗಿ over centralisation ಆಗುತ್ತ ಇದೆ ಎಂದು ಹೇಳುತ್ತಾ ಇದ್ದೇವೆ. ಇದನ್ನು ಒಮ್ಮೆ ನಾನು ನ್ಯಾಷನಲ್ ಡೆವಲೆಪ್‌ಮೆಂಟ್ ಕೌನ್ಸಿಲ್‌ನಲ್ಲಿ ಪ್ರಸ್ತಾಪ ಮಾಡಿದೆ. ಅದಕ್ಕೆ ಪ್ರಧಾನಿಯವರಾದ ನೆಹರೂರವರು ಯಾವ ಒಂದು planned economy ಯಲ್ಲಿ, social pattern of society ಇದೆಯೋ ಅಲ್ಲಿ, ಸ್ವಲ್ಪ ಕೇಂದ್ರೀಕೃತವಾಗುವುದು ಸಹಜ ಎಂದು ಹೇಳುತ್ತಾರೆ. In a social pattern of society and in planned economy certain amount of centralisation is inevitable. That is what he says. ಹಾಗಿರುವಾಗ ಈರೀತಿ ಸುಮ್ಮನೆ ಬಡಪಾಯಿಗಳಾದ ನಮ್ಮಗಳನ್ನು ಏಕೆ ಇದನ್ನು ಮಾಡಲಿಲ್ಲ, ಅದನ್ನು ಮಾಡಲಿಲ್ಲ ಎನ್ನುವುದಕ್ಕೆ ಬದಲಾಗಿ, ಧೈರ್ಯಸ್ಥರಾಗಿರತಕ್ಕ ಮಹನೀಯರು ಅಧಿಕಾರ ಮತ್ತು ಹಣ ಇವೆಲ್ಲಾ ಕೇಂದ್ರೀಕೃತವಾಗಿರತಕ್ಕ ಕೇಂದ್ರದಲ್ಲಿ ನಾಯಕರು ಯಾರಿದ್ದಾರೋ ಸರ್ಕಾರ ಯಾವುದು ಇದೆಯೋ ಅವರನ್ನು ಏಕೆ ಹಾಗೆ ಮಾಡುತ್ತಾ ಇದ್ದೀರಿ ಎಂದು ಕೇಳಬೇಕು.

I appeal to the House to realise the situation in which we are placed and also the object before us.

Sri K. PATTABHIRAMAN.—Within the limited scope that opens up before you, in respect of these Bills, you cannot implement that direction, even if you have really the heart in that. We go with a begging bowl to Delhi.

Sri K. HANUMANTHAIYA.—We have got the heart and we have made the necessary provision to the extent possible; if my Hon'ble friend reads the provisions of the Bill, I am certain that his ideas are incorporated therein and it will work under the circumstances guaranteeing that amount of autonomy that is needed for these.

5-30 P.M.

The only question is not so much about the powers as about the finances. You may have thousand shafts in your bow and argue; but if you have not got the wherewithal to shoot, those shafts will be a waste. Let us not talk of autonomy, power and all that. Everything requires money and how much money we have at our disposal is the question which ultimately we will have to face. Therefore, if the District Boards are not provided with such funds as we possibly cna, it is not because we grudge in that direction; it is because we have not got the wherewithal. That is exactly what we have to plead before the Finance Commission. The Central Government have started local development works. Hon'ble Members will realise that under the Constitution or even in pre-Constitution days whether a well has to be dug or not was the concern of the District Board or even the Village Panchayet. Now it has become the concern of the Central Government. The State Government is undertaking Harijan welfare and the Central Government is also supplementing its efforts. Community Project, National Extension Service, etc., are mere rural development works. In the old days, these duties were cast upon the local self-governing institutions, either the Village Panchayet or the District Board. But now, the Central Government is directly participating. Therefore, Hon'ble Members will see that the trend is going towards centralisation or over-centralisation, whatever it may be. Now, Community Projects, National Extension Service, Harijan Welfare and local development works which relate to small things like digging a well, building a small bridge or opening a new road, have come under the control of the Central Government; social welfare centres have been established with the object of opening milk centres, rural housing and so on. Therefore, what is left for the District Board? In fact, to be honest, it is far better we scrap it and I agree with you.

Sri K. PATTABHIRAMAN.—That would be an honest work for an administrator. That would be an honest work for a Government.

Sri K. HANUMANTHAIYA.—The course can be honest as well as advantageous. The course that we have adopted is, whatever field is left for the

District Board to administer, we have guaranteed the position in the Bill. Whatever is beyond the scope or control, we have not been able to include them here. Therefore, we have made, I am honest enough to say, the best of the bad situation. Nobody can deny that.

Sri K. PATTABHIRAMAN.—Could you not make it better ?

Sri K. HANUMANTHAIYA.—It is not in my hands.

Sri K. PATTABHIRAMAN.—The House has stated for these two days that you could make it better and you have not got the heart and the willingness to do it.

Sri K. HANUMANTHAIYA.—Whenever I agreed to your suggestion I have got the heart; whenever I have not agreed to your suggestion, you say, I have not got the heart.

Sri K. PATTABHIRAMAN.—Not to my suggestion. I come nowhere in the picture. There has been a debate for the last two days and that has been made clear.

Sri K. HANUMANTHAIYA.—I do not want the Hon'ble Member to work himself to that pitch. The trend, the policies of the Government of India are encroaching upon the fields reserved, even under the Constitution, not only for the States but also for the District Boards and the Municipalities, and they cannot bar it either. It has taken probably a very good turn. Therefore, please do not accuse the Government that they are not earnest in giving necessary powers, finance and autonomy to the District Boards; to the extent we could do, we have done, because I have already answered that there is no political manoeuvring in it. Whether we belong to the Congress Party or to the P.S.P. Party or are independents, after all, the majority of the House has to pass a measure, and when the majority of the House passes a measure, we must be sportsmanlike and accept that it is a measure passed by the Assembly and no imputation need be attributed. With these clarifications, I appeal to the House to pass the consideration motion.

Mr. SPEAKER.—The question is:

"That the Mysore Village Panchayets and District Boards (Amendment) Bill, 1955, be taken into consideration.

The motion was adopted.

Sri Mulka GOVINDA REDDY.—I have tabled an amendment. May I know when it will be taken up ?

Mr. SPEAKER.—That will be intimated.

Sri Mulka GOVINDA REDDY.—I have moved an amendment that the entire Bill be referred to a Select Committee. I would like to know when that motion is going to be taken up.

Mr. SPEAKER.—When further discussion on this Bill is taken up, this motion will also be taken up. I will intimate the date.

Now, we have got half-an-hour debate on Question No. 462 regarding construction of an anecut across the Shimsha river. This has been postponed twice. I think the Minister is also ready to answer it.

Sri Kadidal MANJAPPA.—I have no objection.

Discussion on Question No. 462. *re* Construction of an Anecut across the Shimsha.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಪ್ರಶ್ನೆ ಅಷ್ಟೇನೂ ದೊಡ್ಡದಾಗಿಲ್ಲ. ಆದಾಗ್ಯೂ, ನಾನು ಇದರ ಬಗ್ಗೆ ಈ ಚರ್ಚೆಯನ್ನು ಒಂದು ಮುಖ್ಯ ತತ್ತ್ವದೃಷ್ಟಿಯಿಂದ ಎತ್ತಿದ್ದೇನೆ. ಅನೇಕ ವರ್ಷಗಳಿಂದಲೂ ನಾವು ಆ ಮಾರ್ಲೇದೇವರಹಳ್ಳಿಯ ಬಳಿ ಷಿಂಷಾ ನದಿಗೆ ಒಂದು ಅಣೆಕಟ್ಟನ್ನು ಕಟ್ಟಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇವೆ. ಇದಕ್ಕೆ ಒಂದುವರೆ ಲಕ್ಷರೂಪಾಯಿಗಳು ಖರ್ಚಾಗಬಹುದೆಂದು ತಿಳಿದುಬಂದಿದೆ. ಆದರೆ ಈ ಸ್ಥಳದಲ್ಲಿ ಈ ಕೆರೆಕಟ್ಟುವುದರಿಂದ ಕೆಳಗಿರುವ ಕೆರೆಗಳಿಗೆ ತೊಂದರೆಯಾಗುತ್ತದೆ, ಆದುದರಿಂದ ಇದನ್ನು ಕಟ್ಟಿಸಲು ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಹೀಗೆ ಏನೋ ಒಂದು ಸುಮ್ಮನೆ ಕಾರಣ ಹೇಳಿದರೆ ಅದನ್ನು ನಾನು ಒಪ್ಪಲಾರೆ. ಈ ಸ್ಥಳದಲ್ಲಿ ಹಾಗೆ ಒಂದು ಕೆರೆ ಕಟ್ಟಿದ ಬಳಿಕ, ಬೇರೆ ಕೆರೆಗಳು ತುಂಬದೆ ಹೋಗಿ, ಅಲ್ಲಿ ಬೆಳೆ ಆಗದೆ ಹೋದುದನ್ನು ರುಜುವಾತು ಮಾಡಿಕೊಟ್ಟರೆ ಆಗ ನಿಜವಾಗಿಯೂ ಈ ಅಣೆಕಟ್ಟಿನಿಂದ ತೊಂದರೆ ಆಯಿತು ಎಂಬುದನ್ನು ಒಪ್ಪಿಕೊಳ್ಳಬಹುದು. ಹಾಗೆ ಮಾಡುವುದಕ್ಕೆ ಯಾರು ತಯಾರಿದ್ದಾರೆ? ಆ ಮಾರ್ಕೋನಹಳ್ಳಿ ಕೆರೆ ಕೆಳಗೆ ಮೊದಲು ಎಷ್ಟು ಅಚ್ಚುಕಟ್ಟಿತ್ತೋ, ಈಗ ಅದಕ್ಕಿಂತಲೂ ಜಾಸ್ತಿ ಜಮೀನನ್ನು ನೀರುಸಾಗಿಗೆ ತಂದಿ

(ಶ್ರೀ ಬಿ. ಹುಚ್ಚೇಗೌಡ.)

ದ್ದಾರೆ. ಹಾಗೆ ಅಚ್ಚುಕಟ್ಟು ಜಾಸ್ತಿ ಆಗಿದ್ದರೂ ಯಾವ ತೊಂದರೆಯೂ ಕಂಡುಬಂದಿಲ್ಲ. ಅಲ್ಲದೆ ಆ ಕೆರೆ ಪ್ರತಿವರ್ಷವೂ ಒಂದೇ ಸಮನಾಗಿ ತುಂಬಿ ಕೋಡಿ ಬೀಳುತ್ತಿದೆ. ಈಗ ನಾವು ಕೇಳುತ್ತಿರುವ ಕೆರೆಗೆ ಇರತಕ್ಕದ್ದು ಒಂದೇ ಒಂದು ಹಳ್ಳ. ಮಾರ್ಕೋನಹಳ್ಳಿ ಕೆರೆಗಾದರೋ ನೀರಿನ ವರಮಾನ ಚೆನ್ನಾಗಿದೆ. ಪ್ರತಿ ವರ್ಷವೂ ಕೆರೆ ತಪ್ಪದಂತೆ ತುಂಬುತ್ತಿದೆ. ಹಾಗಿದ್ದರೂ ಯಾವ ಇಂಜಿನಿಯರು ಈ ಅಣೆಕಟ್ಟಿನಿಂದ ಆ ಮಾರ್ಕೋನಹಳ್ಳಿ ಕೆರೆಗೆ ತೊಂದರೆ ಬರುತ್ತದೆಂದು ಹೇಳಿದರೊ ನನಗದು ಅರ್ಥವಾಗದು; ಅಥವಾ ಇದೇನು ಆ ಇಂಜಿನಿಯರಿಂಗ್ ಇಲಾಖೆಯವರ ಸಲಹೆಯೋ ಅಥವಾ ಆ ಸ್ಥಳದಲ್ಲಿರತಕ್ಕಂಥ ಜನರ ಪ್ರಭಾವವೋ ನಾನು ಹೇಳುವುದಕ್ಕಾಗುವುದಿಲ್ಲ. ಆದರೆ ಆ ಮಾರ್ಕೋನಹಳ್ಳಿ ಕೆರೆಯನ್ನು ಕಟ್ಟುವಾಗ ಮೊದಲು ಅದಕ್ಕೆ ಎಷ್ಟು ನೀರಿನ ಸರಬರಾಯಿ ಆಗುತ್ತಿತ್ತೋ ಅದಕ್ಕನುಗುಣವಾಗಿ 10 ಸಾವಿರ ಎಕರೆಗಳನ್ನು ಸಾಗುವಳಿ ಮಾಡಬಹುದೆಂದು ಅಂದಾಜುಮಾಡಿ ಆ ಕೆರೆ ಕಟ್ಟಿದರು. ಇತ್ತೀಚೆಗೆ ಅಚ್ಚುಕಟ್ಟನ್ನೂ ಜಾಸ್ತಿಮಾಡಿದರು. ಆದರೂ ಆ ಕೆರೆಯ ನೀರಿನ ಬಗ್ಗೆ ಯಾವ ತೊಂದರೆಯೂ ಉಂಟಾಗಿಲ್ಲ. ಆದಾಗ್ಯೂ ಇತ್ತೀಚೆಗೆ ಬೇರೆ ಎರಡು ಮೂರು ಹಳ್ಳಗಳನ್ನೂ ಸಹ ಆ ಕೆರೆಗೆ ತಿರುಗಿಸಿದ್ದಾರೆ. ಯಾವ ಹಳ್ಳಗಳ ಸಹಾಯವೂ ಇಲ್ಲದೆ ಆ ಕೆರೆ ವರ್ಷೇ ವರ್ಷೇ ತುಂಬುತ್ತಲೇ ಇದೆ. ಆದರೆ ಈ ಸಂದರ್ಭಕ್ಕೆ ಅಡ್ಡಿ ತರುವ ಉದ್ದೇಶದಿಂದಲೋ ಏನೋ ಅಲ್ಲಿ ಕೆಲವು ಎಕರೆ ಜಮೀನಿಗೆ ನೀರು ಸರಬರಾಯಿ ಆಗದೆ ತೊಂದರೆಯಾಗುತ್ತಿದೆಯೆಂದು ಈಗ ಹೇಳುತ್ತಿದ್ದಾರೆ. ಇರಬಹುದು. ಅದನ್ನು ನಾವೂ ಒಪ್ಪಿಕೊಳ್ಳೋಣ. ಈದಿವಸ ಕೂಡ ಮಾನ್ಯ ಸಚಿವರು ಒಂದು ಎಕರೆ ಜಮೀನನ್ನು ನೀರುಸಾಗಿಗೆ ತರಲು ನಾವು ಒಂದುಸಾವಿರ ರೂಪಾಯಿಗಳನ್ನು ಖರ್ಚುಮಾಡಲು ಸಿದ್ಧವಾಗಿದ್ದೇವೆಂದು ಹೇಳುತ್ತಿದ್ದಾರೆ. ಈಗ ಒಂದುವರೆ ಲಕ್ಷಕ್ಕೆ 700 ಎಕರೆ ಭೂಮಿಯನ್ನು ತರಿ ಸಾಗುವಳಿಗೆ ತರಬಹುದೆಂದು ಅಂದಾಜಮಾಡಿದ್ದಾರೆ.

ಸುಮಾರು 250 ರೂಪಾಯಿ ಒಂದು ಎಕರೆಗೆ ಬೀಳುತ್ತದೆ. ಇದರ ಜೊತೆಗೆ ಕಂಟ್ರಿ ಬ್ಯೂಷರ್ ಕೊಡುವುದಕ್ಕೆಕೂಡ ಸಿದ್ಧವಾಗಿದ್ದಾರೆ. ಈ ಅಣೆಕಟ್ಟು ಕಟ್ಟುವುದರಿಂದ ಹಿತ್ತಲಕೊಪ್ಪ, ದೊಡ್ಡ ಮಲ್ಲಿಗೆರೆ, ಕಣಕೂರು, ಮಲ್ಲಿದೇವಿಹಳ್ಳಿ ಈ ನಾಲ್ಕು ಕೆರೆಗಳನ್ನು ಕಟ್ಟುವುದನ್ನೂಕೂಡ ಬಿಟ್ಟುಬಿಡಬಹುದು. ಯಾಕೆಂದರೆ ಈ ಅಣೆಕಟ್ಟು ಕಟ್ಟುವ ಭಾಗದಲ್ಲೇ ಅದನ್ನೂ ಕಟ್ಟುತ್ತೀರಿ. ಆದ್ದರಿಂದ ಒಂದು ಅಣೆಕಟ್ಟು ಕಟ್ಟುವುದರಿಂದ ನಾಲ್ಕು ಕೆರೆಗಳನ್ನು ಕಟ್ಟುವುದು ಅನಾವಶ್ಯಕ ಅಲ್ಲದೆ ಈ ಅಣೆಕಟ್ಟುವ ಕಟ್ಟುವುದರಿಂದ ಒಂದೂವರೆಲಕ್ಷ ರೂಪಾಯಿ ಖರ್ಚಾದರೆ ಅದರ ಎರಡರಷ್ಟು ಎಂದರೆ ಸುಮಾರು ಮೂರುಲಕ್ಷ ರೂಪಾಯಿ ಈ ಕೆರೆಗಳಿಗೆ ಬೇರೆ ಬೇರೆಯಾಗಿ ಖರ್ಚಾಗುವುದು ಉಳಿತಾಯವಾಗುತ್ತದೆ. ಈ ಕೆರೆಗಳಿಗೆ ಇಷ್ಟು ಹೆಚ್ಚಾಗಿ ಖರ್ಚಾದರೂ ಜನಗಳಿಗೆ ಹೆಚ್ಚು ಉಪಯೋಗವಾಗುವುದಿಲ್ಲ. ಹೀಗಿರಬೇಕಾದರೆ ಈ ಸ್ಥಳದಲ್ಲಿ ಜಮೀನು ಹೇಗಿದೆ ಎಂದರೆ ಬರೀ ಹುರುಳಿ ಬೆಳೆಯುವುದಕ್ಕೆ ಆಗುತ್ತದೆಯೇ ಹೊರತು ಇನ್ನೇನೂ ಇಲ್ಲ. ಅಲ್ಲದೆ ಬರೀ ಕೊರಕಲು ಜಮೀನು. ಮಾರ್ಕೋನಹಳ್ಳಿ ಕೆರೆ ಆಗುವುದಕ್ಕೆ ಹಿಂದೆ ಅಲ್ಲಿಯೂ ಇದೇ ರೀತಿ ಇತ್ತು. ಅಲ್ಲಿಯ ಜನಗಳು ಬಹಳ ಬಡವರಾಗಿ ಕುರಿಕಾಯುತ್ತಿದ್ದರು. ಈಗ ಅಂದರೆ ಮಾರ್ಕೋನಹಳ್ಳಿ ಕೆರೆಯಾದಮೇಲೆ ಅವರೆಲ್ಲ ಶ್ರೀಮಂತರಾಗಿದ್ದಾರೆ. ಬೇಕಾದಷ್ಟು ಅನುಕೂಲವಾಗಿದ್ದಾರೆ.

ನಾನು ಈಗ ಹೇಳುತ್ತಿರುವ ಪ್ರದೇಶದಲ್ಲಿ ಸುಮಾರು ಹತ್ತು ಮೈಲಿ ಫಾಸಲೆಯೊಳಗೆ ಯಾವ ಕೆರೆಯೂ ಇಲ್ಲ. ಕಟ್ಟೆಯೂ ಇಲ್ಲ. ರಾಗಿ ಅಥವಾ ಹುರುಳಿ ಬಿಟ್ಟು ಇನ್ನೊಂದು ಬೆಳೆಯಾಗುವುದಿಲ್ಲ. ಮಳೆಯಾಗದೆ ಇದ್ದರೆ ಈ ಪ್ರದೇಶದ ಜನರಸ್ಥಿತಿ ತುಂಬ ಕಷ್ಟವಾಗುತ್ತದೆ. ನಮ್ಮ ತಾಲ್ಲೂಕಿನ ಪರಿಸ್ಥಿತಿ ಹೀಗಿದೆ.

ನಮ್ಮ ಕ್ಷೇತ್ರದಲ್ಲಿ ಪ್ರತಿಸ್ಪರ್ಧಿಸಿದ್ದ ಇನ್ನೊಬ್ಬ ಮಹನೀಯರು ಕೋಟ್ಯಂತರ ರೂಪಾಯಿ ಖರ್ಚುಮಾಡಿ ಹೇಮಾವತಿ ಹೊಳೆಯ ನೀರನ್ನು ತರಿಸಿಕೊಡುತ್ತೇನೆಂದು ಹೇಳಿ ಶಪಥ ಮಾಡಿದರು. ದುರದೃಷ್ಟವಶಾತ್ ಅವರನ್ನು ಬಿಟ್ಟು ನನ್ನನ್ನು ಚುನಾವಣೆ ಮಾಡಿದ ಕ್ಷೇತ್ರ ಇಂದು suffer ಮಾಡಬೇಕಾಗಿದೆ. ಇಂತಹ ಪ್ರಸಂಗವಿರುವಾಗ ಕೋಟ್ಯಂತರ ರೂಪಾಯಿ ಖರ್ಚುಮಾಡಿ ಎಂದು ಹೇಳಲಿಲ್ಲ. ಕೇವಲ ಒಂದೂವರೆಲಕ್ಷ ರೂಪಾಯಿ ಖರ್ಚುಮಾಡಿ ಎಂದರೆ ಅಷ್ಟು ಮಾತ್ರ ಸಹ ಮಾಡದೆ ಇರುವಾಗ ನಾನು ನನ್ನ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದಹಾಗಾಗುವುದಿಲ್ಲ. ಅಲ್ಲದೆ ಈ ಮಾನ್ಯಸಭೆಯಲ್ಲಿ ನಾನು ಸದಸ್ಯನಾಗಿರುವುದಕ್ಕೆ ಬದಲು ಬೇರೆಯವರಿಗೆ ಸ್ಥಳಬಿಟ್ಟುಕೊಡಬೇಕು ಮತ್ತು ಆ ಕ್ಷೇತ್ರದಿಂದ ಸರಿಯಾದ ಸೇವೆ ಮಾಡತಕ್ಕವರಿಗೆ ಅವಕಾಶ ದೊರೆಯಲಿ ಎಂಬ ಆಖೈರು ತೀರ್ಮಾನಕ್ಕೆ ಬಂದಿದ್ದೇನೆ.

ಇನ್ನೊಂದು ವಿಚಾರವೇನೆಂದರೆ, ಈ ಮಾರ್ಕೋನಹಳ್ಳಿ ಕೆರೆ ನೀರಿನಿಂದ ವರ್ಷಕ್ಕೆ ಒಂದೆರಡು ಬೆಳೆಗಳನ್ನು ತೆಗೆದುಕೊಳ್ಳುತ್ತಾರೆ. ಈ ಒಂದು ಹೋಬಳಿಯಲ್ಲಿ ಈಚೆಗೆ 20 ಸಾವಿರ ಎಕರೆ ಭೂಮಿ ತರಿಜಮೀನಾಗಿದೆ. ಮಾರ್ಕೋನಹಳ್ಳಿ ಕೆರೆ ಒಂದರ ಅಚ್ಚುಕಟ್ಟಿನಲ್ಲೇ 10 ಸಾವಿರ ಎಕರೆ ಸಾಗುವಳಿಯಾಗುತ್ತಿದ್ದು ಮಂಗಳ, ಹೊನ್ನಮಾಚನಹಳ್ಳಿ, ಸೊಣ್ಣನಾಯಕನಹಳ್ಳಿ ಮೊದಲಾದ ಕೆರೆಗಳಿಗೆ ಒಂದೊಂದಕ್ಕೂ ಸುಮಾರು ಹತ್ತು ಲಕ್ಷ ರೂಪಾಯಿಗಳಂತೆ ಖರ್ಚಾಗಿರಬೇಕಾದರೆ, ಕೇವಲ ಗರೀಬರಿಗೆ ಒಂದು ಎಕರೆ ತರಿ ಜಮೀನು ಇಲ್ಲದೆ ಹತ್ತು ಮೈಲಿ ಫಾಸಲೆಯಲ್ಲಿ ತರಿವ್ಯವಸಾಯಕ್ಕೆ ಅವಕಾಶವಿಲ್ಲವೆಂದರೆ ಆಶ್ಚರ್ಯವಲ್ಲವೆ. ಒಂದು ಹೋಬಳಿಯಲ್ಲಿ ತರಿವ್ಯವಸಾಯಕ್ಕೆ ಅನುಕೂಲವನ್ನು ಕಲ್ಪಿಸುವುದಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚುಮಾಡಿದ್ದೀರಿ. ಆದರೆ ನಮ್ಮ ತಾಲ್ಲೂಕಿಗೆ ಒಂದು ಲಕ್ಷ ರೂಪಾಯಿ ಸಹ ಖರ್ಚುಮಾಡಿಲ್ಲ. ನನ್ನ ಒಂದು ಪ್ರಶ್ನೆಗೆ ಉತ್ತರಕೊಡುತ್ತ ಮಾನ್ಯ ರೆವಿನ್ಯೂ ಸಚಿವರು '65 ಪ್ರಾಜೆಕ್ಟ್‌ಗಳು ಸರ್ಕಾರದ ಅವಗಾಹನೆಗೆ ಬಂದಿವೆ, ಅದರಲ್ಲಿ 48 ಪೂರ್ತಿಯಾಗಿ ಇನ್ನು 17 ಪರಿಶೀಲನೆಯಲ್ಲಿವೆ' ಎಂದು ಹೇಳಿದರು. ಇಂಥದರಲ್ಲಿ ಒಂದು ಕೆರೆಯನ್ನು ಮಾಡಿಸುವುದಕ್ಕೆ ನನಗೆ ಯೋಗ್ಯತೆ ಇಲ್ಲದೆಹೋಗಿರುತ್ತದೆ ಎಂದು ಹೇಳಬೇಕಾಗಿದೆ ಮತ್ತು ಈ ಮಾನ್ಯಸಭೆಯ ಸದಸ್ಯನಾಗಿರುವುದಕ್ಕೆ ಸಹ ಅರ್ಹತೆ ಇಲ್ಲವೆಂದು ತಿಳಿದುಕೊಳ್ಳಬೇಕಾಗಿದೆ. ಇದನ್ನು ವಿಮರ್ಶೆ ಮಾಡಿಕೊಳ್ಳುವುದಕ್ಕಾಗಿ ಈ ವಿಷಯವನ್ನು ಕೊನೆಯ ಅಂಶವಾಗಿ ತೆಗೆದುಕೊಂಡು ಬಂದಿದ್ದೇನೆ. ಯಾಕೆಂದರೆ ನಮ್ಮ ತಾಲ್ಲೂಕಿಗೆ ಹೇಮಾವತಿನದಿಯ ನೀರನ್ನು ತರಬೇಕು ಎಂದು 50 ವರ್ಷಗಳಿಂದ ಪ್ರಯತ್ನನಡೆದಿದೆ. ಪ್ರತಿ ಮೂರು ವರ್ಷಕ್ಕೊಂದುಸಲ ಎಸ್ಟಿಮೇಟ್‌ಮಾಡಿ ಪ್ರತಿಸಲವೂ ಅದು ಹಿಂದೆ ಹೋಗುತ್ತಿದೆ. ಈ ರೀತಿ ಬರಬೇಕಾಗಿದ್ದರೆ, ಯಾವ ರೀತಿಯಲ್ಲಾದರೂ ಕೂಡ ಒಂದು ಪ್ರಭಾವವನ್ನು ನಾವು ಬೀರಬೇಕಾಗಿದ್ದರೆ ಆಡಳಿತ ವರ್ಗ ಯಾವ ಪಾರ್ಟಿಗೆಸೇರಿದ್ದರೆ ಆ ಪಾರ್ಟಿಯ

ಸದಸ್ಯರಿಗೆ ಮಾತ್ರ ಸಾಧ್ಯವಾಗುತ್ತದೆಯೇ ಹೊರತು ಬೇರೆಯವರಿಗೆ ಸಾಧ್ಯವಾಗುವುದಿಲ್ಲವೆಂದು ನಾನು ಖಚಿತವಾದ ತೀರ್ಮಾನಕ್ಕೆ ಬಂದಿದ್ದೇನೆ

ಹೊನ್ನಮಾಚನಹಳ್ಳಿ ಕೆರೆಗೆ 10 ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. 800 ಎಕರೆ ಸಾಗುವಳಿ ಯಾಗುತ್ತದೆ ಅಂದರೆ ಒಂದು ಎಕರೆಗೆ 1,250 ರೂಪಾಯಿ ಆಯಿತು. ಹಾಗೆಯೇ ಸೊಣ್ಣನಾಯಕನಹಳ್ಳಿಗೆ 8,94,000 ಖರ್ಚು, 1000 ಎಕರೆ ಸಾಗುವಳಿಯಾಗಿ ಒಂದು ಎಕರೆಗೆ 894 ರೂಪಾಯಿ ಬೀಳುತ್ತದೆ. ಮಂಗಳಕೆರೆಗೆ 9,40,000 ಖರ್ಚು, 880 ಎಕರೆ ಸಾಗುವಳಿಗೆ ಬಂದು ಎಕರೆ ಒಂದಕ್ಕೆ 1,068 ರೂಪಾಯಿ ಬೀಳುತ್ತದೆ. ಹೀಗೆ ಒಂದೊಂದು ಕೆರೆಗೆ 10 ಲಕ್ಷದಂತೆ ಮಂಜೂರುಮಾಡುತ್ತ ಇರಬೇಕಾದರೆ ಕೇವಲ ಬಡವರಿಗಾಗಿ ಒಂದು ಎಕರೆಗೆ ಒಂದು ಲಕ್ಷ ರೂಪಾಯಿ ಮುಂಜೂರ್ಮಾಡಿ ಎಂದರೆ ಮಾಡುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ 7-8 ಕೆರೆಗಳನ್ನು ಮಾಡಿಸಿ ಎಂದು ಕೇಳಿದರೂ ಒಂದಕ್ಕೂ ಸರ್ಕಾರದವರು ಮಂಜೂರಾತಿ ಕೊಡಲಿಲ್ಲ. ಈ ಕೆರೆಯ ಅಚ್ಚುಕಟ್ಟಿನಲ್ಲಿ ಕೇವಲ ಎಕರೆ ಒಂದಕ್ಕೆ 250 ರೂಪಾಯಿ ಮಾತ್ರ ಖರ್ಚು ಬೀಳುತ್ತದೆ. ಸರ್ಕಾರದವರು ಇದಕ್ಕೆಲ್ಲ ಯಾವುದೋ ಒಂದು ಕಾರಣ ಹೇಳುತ್ತಾರೆ. ಬಾಕಿ ಕ್ಷೇತ್ರಗಳಿಗೆ 20 ಸಾವಿರ ರೂಪಾಯಿ ಕೊಡುವಾಗ ನಮ್ಮ ಕ್ಷೇತ್ರಕ್ಕೆ ಒಂದು ಸಾವಿರ ರೂಪಾಯಿ ಸಹ ಕೊಡುವುದಕ್ಕೆ ಸರ್ಕಾರದವರಿಗೆ ಇಷ್ಟವಿಲ್ಲ. ಆದುದರಿಂದ ಎಲ್ಲ ವಿಷಯಗಳನ್ನೂ ಸಭೆಯ ಗಮನಕ್ಕೆ ತಂದು, ಈಗಲೂ ಮೇಲೆ ಹೇಳಿದ ಕಾರ್ಯವನ್ನು ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಇದ್ದಪಕ್ಷದಲ್ಲಿ ಈ ಮಾನ್ಯಸಭೆಯಿಂದ ವಿರಾಮ ಹೊಂದುತ್ತೇನೆ.

Sri Kadidal MANJAPPA (Minister for Revenue and Public Works).— Mr. Speaker, Sir, the Hon'ble Member has spoken in a very desperate mood. He has levelled a charge that the Government is being influenced by members belonging to the Congress Party. I may assure the Hon'ble Member that it is never the intention of the Government to show undue preference or any kind of preference to particular areas in the State. After all, Sir, we represent the Ministry here. We are here to serve the whole State. It is not correct for any Minister to make a distinction between one constituency and another constituency. Though a member may oppose the Government, the people whom he represents are not opposing the Government. We must take into consideration the needs of every area in the State. In matters like this, the Government has to be guided by technical opinion. Sir, I might say that so far no Congress member has approached me in this connection asking me to drop the project. The report sent by the Engineers go to show that if this project is taken up, it will affect the supply of water to the Marconahally Reservoir and that under Marconahally Reservoir more than 10,000 acres have been developed. The Engineers are of the opinion that the construction of an anecut across Shimsha River in the upper catchment area will seriously affect the supply of water to the reservoir at Marconahally. I have no objection to get it re-investigated through the highest authority in the Public Works Department. I am not a technical man as the Hon'ble Member is aware of. I will be guided by the technical opinion. With this assurance, I am sure, the Hon'ble Member will be satisfied.

Sri B. HUTCHE GOWDA.— There was another question, whether the Government is going to build up another tank in the very same region ?

Sri Kadidal MANJAPPA.—That is a project included in the Five-Year Plan long before I became the Public Works Minister and long before the Hon'ble Member became the member of this Assembly during the present term.

I am not sure that that is the project included in the First Five-Year Plan and I think that Mangala project was one of the projects included in the First Five-Year Plan. On account of some technical difficulties, the project could not be taken up till now.

Hon'ble Member referred to certain other irrigation projects. I may inform him that projects will not be included at the Government level. We do not decide which project has to be taken up, when the budget is prepared. It will be prepared only after the Departmental Head sends up his recommendation. Even the lumpsum grant is not distributed by the Government but will be distributed by the Chief Engineer. So, if any Hon'ble Member has got a mistaken notion in his mind that the Minister is influenced. . . .

Sri B. HUTCHE GOWDA.— I never attributed any motive to the Hon'ble Minister. I am questioning the technical opinion. The technical people are influenced by the local Congressites.

Sri Kadidal MANJAPPA.—So far as the Government is concerned, I will try to be impartial. We do not want to make any distinction between one taluk and another and between one constituency and another constituency.

I have no objection to refer the matter to the Chief Engineer himself asking him to re-investigate the matter once again. Let me be bound by the opinion to be furnished by the Chief Engineer and let my friend Sri Hutchegowda also be bound by the opinion to be furnished by the Chief Engineer.

Mr. SPEAKER.—Now the House will rise and meet at 12 o'clock tomorrow.

The House adjourned at Fifty-five Minutes past Five of the Clock to meet again at Twelve of the Clock on Wednesday, the 13th April 1955.

WD 4508—GPB—550—26-9-55